ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಸೆಪ್ಟೆಂಬರ್ 27 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 161 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್‌ನಲ್ಲಿ ಇತಿಹಾಸ ಸೃಷ್ಟಿ

ಕಾವೇರಿ ಮಾತೆಗೆ ಆರತಿ

• ಇತಿಹಾಸ ಸೃಷ್ಟಿಸಿದ ಗಂಗಾರತಿ ಮಾದರಿ ಕಾವೇರಿ ಆರಾಧನೆ • ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶ್ರಮ ಸಾರ್ಥಕ • ಐತಿಹಾಸಿಕ ಮೈಸೂರು ದಸರಾಗೆ ಮತ್ತೊಂದು ಮೆರಗು • ಸಹಸ್ರಾರು ಪ್ರವಾಸಿಗರ ಕಣ್ತುಂಬಿದ ವಿಶೇಷ ಉತ್ಸವ • ಸೆ.30ರವರೆಗೆ ಪ್ರತಿ ನಿತ್ಯ ಸಂಜೆ ಆರತಿ ಆಕರ್ಷಣೆ



ಶ್ರೀರಂಗಪಟ್ಟಣ ತಾಲೂಕಿನ ವಿಶ್ವವಿಖ್ಯಾತ ಕೃಷ್ಣರಾಜ ಸಾಗರ(ಕೆಆರ್‌ಎಸ್) ಜಲಾಶಯದಲ್ಲಿ ಇದೇ ಮೊದಲ ಬಾರಿಗೆ ಶುಕ್ರವಾರ ರಾತ್ರಿ ಕಾವೇರಿ ಆರತಿ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಕೃಷ್ಣರಾಜಸಾಗರ, ಸೆ.26–ಕನ್ನಡ ನಾಡಿನ ಜೀವನದಿ, ಧಾರ್ಮಿಕ, ಸಾಂಸ್ಕೃತಿಕ ಪ್ರತೀಕವಾಗಿರುವ ಕಾವೇರಿ ನದಿಗೆ ಪ್ರಪ್ರಥಮ ಬಾರಿಗೆ "ಕಾವೇರಿ ಆರತಿ" ಮಾಡುವ ಮೂಲಕ ರಾಜ್ಯದಲ್ಲಿ ಹೊಸ ಸಂಪ್ರದಾಯಕ್ಕೆ ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುನ್ನುಡಿ ಬರೆದರು.

ಕಾವೇರಮ್ಮನ ಒಡಲು ಸದಾ ತುಂಬಿರಬೇಕು. ಕೆಆರ್‌ಎಸ್ ವರ್ಷಪೂರ್ತಿ ಭರ್ತಿಯಾಗಿರಬೇಕು. ನಾಡು ಸುಖ–ಶಾಂತಿ, ಸಮೃದ್ಧಿಯಿಂದ ಕೂಡಿರಲೆಂದು ಕಾವೇರಿ ಮಾತೆಗೆ ಆರತಿಯ ಬೆಳಗಿಸಿ ಹೊಸ ಇತಿಹಾಸ ಸೃಷ್ಟಿಸಿದರು. ಇದಕ್ಕೆ ಕೃಷ್ಣರಾಜಸಾಗರ ಸಾಕ್ಷಿಯಾಯಿತು.


ಮಧುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಕೃಷ್ಣರಾಜಸಾಗರದ ಬೃಂದಾವನದಲ್ಲಿ ಗೋಧೂಳಿ ಮುಹೂರ್ತದಲ್ಲಿ ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡಿ, ತಾಯಿ ಕಾವೇರಿಗೆ ಆರತಿ ಬೆಳಗಿ ನಾಡಿನ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸಿದರು. ದಕ್ಷಿಣ ಭಾರತದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಕಾವೇರಿ ಆರತಿಯನ್ನು ಸಾಂಕೇತಿಕವಾಗಿ ನೆರವೇರಿಸಲಾಯಿತು. ಶಂಖನಾದ, ಡೊಳ್ಳು, ನಗಾರಿ ಸದ್ದಿನೊಂದಿಗೆ, ವೇದ ಮಂತ್ರಗಳ ಪಠಣದೊಂದಿಗೆ ಸುಮಾರು ಒಂದು ಗಂಟೆ ಕಾಲ ನೆರವೇರಿದ ಕಾವೇರಿ ಆರತಿ ನೆರೆದಿದ್ದವರನ್ನು ಮೂಕವಿಸ್ಮಿತರನ್ನಾಗಿಸಿತು.

ಕರ್ನಾಟಕದಿಂದ ಮಾತ್ರವಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ಹೊರ ರಾಜ್ಯಗಳಿಂದ ಆಗಮಿಸಿದ್ದ ಸಹಸ್ರಾರು ಪ್ರವಾಸಿಗರು ಕಾವೇರಿ ಆರತಿಯನ್ನು ಕಣ್ತುಂಬಿಕೊಂಡರು. ಸೆ.26ರಿಂದ ಅ.2ರವರೆಗೆ ಪ್ರತಿ ದಿನ ಸಂಜೆ ನೆರವೇರಲಿರುವ ಕಾವೇರಿ ಆರತಿ ಮೈಸೂರು ದಸರಾಗೆ ಹೊಸ ಮೆರುಗನ್ನು ತಂದುಕೊಟ್ಟಿದೆ

ಕಾವೇರಿ ಪ್ರಾರ್ಥನೆ, ತೀರ್ಥ ಪೂಜೆ, ಚಾಮರ ಸೇವೆ: ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿ ಸಂಪ್ರದಾಯ ಬದ್ಧವಾಗಿ ನೆರವೇರಿತು. 13 ಜನರನ್ನೊಳಗೊಂಡ ವೈದಿಕರ ತಂಡ ಹಾಗೂ ಅವರಿಗೆ ತಲಾ ಇಬ್ಬರು ಸಹಾಯಕರು ಸೇರಿ ಒಟ್ಟು 40 ಜನರ ತಂಡ ಪೂಜೆಯಲ್ಲಿ ಭಾಗಿಯಾಗಿದ್ದರು. ಮೊದಲು "ವಾತಾಪಿ ಗಣಪತಿಂ ಭಜೆ" ಮಂಗಳವಾದ್ಯದೊಂದಿಗೆ ಪೂಜೆ ಪ್ರಾರಂಭವಾಯಿತು. ಕಾವೇರಿ ಪ್ರಾರ್ಥನೆ, ಗಣಪತಿ ಪ್ರಾರ್ಥನೆ, ಗುರು ಪ್ರಾರ್ಥನೆ, ಸಂಕಲ್ಪ ಮಾಡಲಾಯಿತು. ಕಾವೇರಿ ಸ್ತೋತ್ರದ ಮೂಲಕ ತೀರ್ಥ ಪೂಜೆ ▸ 6ನೇ ಪುಟಕ್ಕೆ

ಮಿತ್ರನ ಮಿಂಚು

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ಜಾತಿ ಗಣತಿ 11 ದಿನದಲ್ಲೇ ಪೂರ್ಣಗೊಳ್ಳಬೇಕು

• ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಕಟ್ಟಾದೇಶ • ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ • ಗಣತಿ ಸಮರ್ಪಕವಾಗಿ ಮಾಡದವರ ವಿರುದ್ಧ ಶಿಸ್ತು ಕ್ರಮ • ಯಾವುದೇ ಕಾರಣಕ್ಕೂ ಸಮೀಕ್ಷೆ ಅವಧಿ ವಿಸ್ತರಿಸಲ್ಲ

ಬೆಂಗಳೂರು, ಸೆ.26(ಕೆಎಂಶಿ)– ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ (ಜಾತಿ ಗಣತಿ) ಅವಧಿ ವಿಸ್ತರಣೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದು, ಹೈಕೋರ್ಟ್ ಆದೇಶದಂತೆ ಮಾಹಿತಿ ಸಂಗ್ರಹಣೆ ಕಾರ್ಯ ನಡೆಯಲಿದೆ.

ಸಮೀಕ್ಷೆ ಕಾರ್ಯ ಚುರುಕುಗೊಳಿಸಿ 11 ದಿನದಲ್ಲೇ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಕಟ್ಟಾದೇಶ ಮಾಡಿದ್ದೇನೆ.

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಗಣತಿ ತಡೆಗೆ ರಾಜ್ಯ ಹೈಕೋರ್ಟ್ ನಿರಾಕರಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಸ್ತುವಾರಿ ಸಚಿವರು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿಕೊಂಡು ಸಮೀಕ್ಷೆಯ ಪ್ರಗತಿ ಕಾರ್ಯ ತ್ವರಿತಗೊಳಿಸಲು ಸೂಚಿಸ ಲಾಗಿದೆ ಎಂದರು.

ಗಣತಿ ಕಾರ್ಯಕ್ಕೆ ನಿಯೋಜನೆಗೊಂಡಿರುವ ಶಿಕ್ಷಕರು ವಹಿಸಲಾಗಿರುವ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದರೆ ಶಿಸ್ತುಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಪ್ರತಿದಿನ ಜಿಲ್ಲಾವಾರು ಕನಿಷ್ಠ ಶೇಕಡ 10ರಷ್ಟು ಸಮೀಕ್ಷಾ ಗುರಿ ಸಾಧಿಸಬೇಕು. ಗಣತಿಯಲ್ಲಿ ನಿರ್ಲಕ್ಷ್ಯ ತೋರುವ ಗಣತಿದಾರರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಆಯಾ ಪಾಲಿಕೆ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಕಟ್ಟಾದೇಶ ಮಾಡಿದ್ದೇನೆ.



ಸಿದ್ದರಾಮಯ್ಯ

ತ್ವರಿತಗೊಂಡಿದೆ: ಸಮೀಕ್ಷೆ ಆರಂಭದಲ್ಲಿ ಕೆಲವು ತಾಂತ್ರಿಕ ತೊಂದರೆಯಿಂದ ಮಂದಗತಿಯಲ್ಲಿ ಸಾಗಿತ್ತು. ಈಗ ಎಲ್ಲಾ ತಾಂತ್ರಿಕ ಸಮಸ್ಯೆ ಪರಿಹರಿಸಲಾಗಿದೆ. ಇಂದಿನಿಂದಲೇ ಗಣತಿ ಕಾರ್ಯ ಚುರುಕುಗೊಳ್ಳಬೇಕು ಹಾಗೂ ನಿಗದಿತ ಸಮಯದೊಳಗೆ ಗುರಿ ಮುಟ್ಟಬೇಕು. ಆನ್‌ಲೈನ್ ಮೂಲಕವೂ ಸಮೀಕ್ಷೆಯಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗಿದೆ, ಇದರ ಪ್ರಯೋಜನ ಪಡೆದುಕೊಳ್ಳಬೇಕು, ಸಮೀಕ್ಷೆ ಸಂದರ್ಭದಲ್ಲಿ ಮನೆಗಳಿಗೆ ಬೀಗ ಹಾಕಿದ್ದರೆ, ಅಂತಹ ಮನೆಗಳ ಗಣತಿ ಕಾರ್ಯವನ್ನು ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕು.

ಸಂಬಂಧಪಟ್ಟ ಅಧಿಕಾರಿಗಳು ಸಮೀಕ್ಷಾ ಕಾರ್ಯಕ್ಕೆ ತಾಂತ್ರಿಕ ತೊಂದರೆಗಳು ಉಂಟಾಗ ದಂತೆ ಎಚ್ಚರಿಕೆ ವಹಿಸಬೇಕು, ತೊಂದರೆಗಳು ಎದುರಾದರೆ ತಕ್ಷಣ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಸಮೀಕ್ಷಾ ಕಾರ್ಯವನ್ನು ಎಲ್ಲಾ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಒಟ್ಟು ▸ 6ನೇ ಪುಟಕ್ಕೆ

'ಕಮಲದ ಮೊಗದೋಳೆ'.. ಕನ್ನಡದ ಗೀತೆಯೊಂದಿಗೆ ನವರಾತ್ರಿ ಶುಭಾಶಯ ಕೋರಿದ ಪ್ರಧಾನಿ

ಬೆಂಗಳೂರು, ಸೆ.26– ಪ್ರಧಾನಿ ನರೇಂದ್ರ ಮೋದಿ ಅವರು, ಕನ್ನಡದ ಜನಪ್ರಿಯ ಗೀತೆಯ ವಿಡಿಯೋವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡು, ದೇಶದ ಜನತೆಗೆ ನವರಾತ್ರಿ ಶುಭಾಶಯ ಕೋರಿದ್ದಾರೆ. ಖ್ಯಾತ ಗಾಯಕಿ ಎಸ್. ಜಾನಕಿ ಅಮರು ಹಾಡಿರುವ 'ಕಮಲದ ಮೊಗದೋಳೆ' ಹಾಡನ್ನು ▸ 6ನೇ ಪುಟಕ್ಕೆ




ಚಾಮುಂಡಿಬೆಟ್ಟದಲ್ಲಿ ಸಾರಿಗೆ ಬಸ್ ಸರಣಿ ಅಪಘಾತ; ತಪ್ಪಿದ ಭಾರೀ ಅನಾಹುತ

ಎಡಬದಿ ಚಲಿಸಿದ್ದರೆ ಪ್ರಪಾತಕ್ಕೆ ಉರುಳಿ ಭಾರೀ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು

ಮೈಸೂರು, ಸೆ.26(ಎಂಟಿವೈ)– ಭಕ್ತರು ಮತ್ತು ಪ್ರವಾಸಿಗರನ್ನು ಮೈಸೂರಿನತ್ತ ಹೊತ್ತು ಬರುತ್ತಿದ್ದ ನಗರ ಸಾರಿಗೆ ಸಂಸ್ಥೆಯ ಬಸ್ಸು ಬೆಟ್ಟದ ಅಂಚಿಗೆ ಉಜ್ಜಿಕೊಂಡು ಎರಡು ಕಾರು ಹಾಗೂ ರಸ್ತೆ ಬದಿಯ ಐದು ವಿದ್ಯುತ್ ಕಂಬಗಳಿಗೆ ಅಪ್ಪಳಿಸಿದ ಅತ್ಯಂತ ಭಯಂಕರ ಘಟನೆ ಶುಕ್ರವಾರ ಸಂಜೆ ಚಾಮುಂಡಿ ಬೆಟ್ಟದಲ್ಲಿ ಸಂಭವಿಸಿದೆ.

ಬೆಟ್ಟದ ಉತ್ತನಹಳ್ಳಿ ರಸ್ತೆ ಜಂಕ್ಷನ್‌ನ ತಿರುವಿನಲ್ಲಿ ಈ ಸರಣಿ ಅಪಘಾತ ಸಂಭವಿಸಿದ್ದು, ಕಾರುಗಳಲ್ಲಿದ್ದ ಮಕ್ಕಳು, ಮಹಿಳೆಯರು ಹಾಗೂ ಬಸ್ ಪ್ರಯಾಣಿಕರು ಸೇರಿ 15ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಅದೃಷ್ಟವಶಾತ್ ಪ್ರಾಣಾಪಾಯ ಸಂಭವಿಸಿಲ್ಲ. ಘಟನೆಯಲ್ಲಿ ಕಾರುಗಳು ▸ 6ನೇ ಪುಟಕ್ಕೆ





3 ತಿಂಗಳಲ್ಲಿ 3 ಅವಘಡ!


ಚಾಮುಂಡಿಬೆಟ್ಟದ ರಸ್ತೆಯಲ್ಲಿ ಸಾರಿಗೆ ಸಂಸ್ಥೆ ಬಸ್‌ಗಳಿಂದ ಮೂರು ತಿಂಗಳಲ್ಲಿ ಮೂರು ಅವಘಡ ಸಂಭವಿಸಿವೆ. ಜು.18 ಆಷಾಢ ಶುಕ್ರವಾರ ಬೆಟ್ಟಕ್ಕೆ ಸಂಚರಿಸುತ್ತಿದ್ದ ಎಲೆಕ್ಟ್ರಿಕ್ ಬಸ್‌ವೊಂದರ ಇಂಜಿನ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತ್ತು. ಇಂಜಿನ್‌ನಿಂದ ಹೊಗೆ ಬರುವುದನ್ನು ಗಮನಿಸಿ, ತಕ್ಷಣ ಬಸ್ ನಿಲ್ಲಿಸಿದ್ದರಿಂದ ಹೆಚ್ಚಿನ ಅಪಾಯ ತಪ್ಪಿತ್ತು. ಆ.7ರಂದು ಬೆಟ್ಟಕ್ಕೆ ಹೋಗುತ್ತಿದ್ದ ನಗರ ಸಾರಿಗೆ ಬಸ್, ವ್ಯೂ ಪಾಯಿಂಟ್ ಬಳಿ ತಡೆ ಗೋಡೆಗೆ ಡಿಕ್ಕಿ ಹೊಡೆದು ಐದು ಅಡಿ ಆಳದ ಪಕ್ಕದ ಪಥಕ್ಕೆ ಉರುಳಿ ಬಿದ್ದಿತ್ತು. ಚಾಲಕ, ನಿರ್ವಾಹಕ ಹಾಗೂ ಬಸ್‌ನಲ್ಲಿದ್ದ 8 ಮಂದಿ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದರು. ಇದೀಗ ಮತ್ತೊಂದು ಬಸ್‌ನಿಂದ ಸರಣಿ ಅಪಘಾತ ಸಂಭವಿಸಿದೆ.

ಎಸ್‌ಐಟಿ ರಚಿಸಿದ್ದರಿಂದ ಸತ್ಯ ಹೊರಬರುತ್ತಿದೆ...

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರಿಂದ ಸರ್ಕಾರಕ್ಕೆ ಕೃತಜ್ಞತೆ

ಧರ್ಮಸ್ಥಳ, ಸೆ.26– ಸರ್ಕಾರಕ್ಕೆ ನಾನು ಆಭಾರಿ, ಎಸ್‌ಐಟಿ ರಚಿಸಿದ್ದರಿಂದ ಸತ್ಯ ಹೊರಬರುತ್ತಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ ವೀರೇಂದ್ರ ಹೆಗ್ಗಡೆ ಹೇಳಿದ್ದಾರೆ.

ಧರ್ಮಸ್ಥಳದ ಅಮೃತವರ್ಷಿಣಿ ಸಭಾಂಗಣದಲ್ಲಿ ವಿಶೇಷ ಪ್ರಾರ್ಥನೆ ಜೊತೆಗೆ ಲಲಿತಾಸಹಸ್ರನಾಮ ನಡೆಯುತ್ತಿದ್ದು, ಈ ವೇಳೆ ಮಾತನಾಡಿದ ಅವರು, ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ಶತ್ರುತ್ವ, ಇಷ್ಟು ಹಗೆತನ, ಅಪವಾದ ಯಾಕೆ ಬಂತು ಎಂದು ನಮಗೆ ಗೊತ್ತಿಲ್ಲ. ನಾವು ಸೇವೆ ಮಾಡುತ್ತೇವೆ. ಆದರೆ ಸೇವೆ ಪ್ರಚಾರದ ವಸ್ತುವಲ್ಲ. ಇಷ್ಟು ವರ್ಷ ನಾವು ಆರೋಗ್ಯವಾಗಿರಲು ನಮ್ಮ ನಿಸ್ವಾರ್ಥ ಸೇವೆಯೇ ಕಾರಣ. ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ನೀವು ಎಲ್ಲರೂ ಗಮನಿಸಿದ್ದೀರಿ. ನಾವು ಇಲ್ಲಿ ನಿಮಿತ್ತ ಮಾತ್ರ. ಆದರೆ ಮುಂದುವರೆಸಿಕೊಂಡು ಹೋಗಿದ್ದು ಅದಕ್ಕೆ ಸಂಬಂಧಪಟ್ಟ ಇಲಾಖೆಯವರು.



ಧರ್ಮಸ್ಥಳ ಬೇರೆ, ಧರ್ಮಸ್ಥಳದ ಊರಿನವರು ಬೇರೆ ಅಲ್ಲ. ಎಷ್ಟು ನಿಷ್ಠುರವಾಗಿ ನಮ್ಮ ಮೇಲೆ ದಬ್ಬಾಳಿಕೆ ನಡೆದಿದೆ ಎಂದು ನೀವು ನೋಡಿದ್ದೀರಿ. ಯಾಕೆ ಇಷ್ಟು ದ್ವೇಷ ನನ್ನ ಮೇಲೆ ಇದೆ ಅಂತ ನನಗೆ ಗೊತ್ತಾಗಿಲ್ಲ. ಈಗ ಮನಸ್ಸು ಸ್ವಲ್ಪ ಹಗುರವಾಗಿದೆ. ಎತ್ತರದ ಬೆಟ್ಟದಿಂದ ನೀರು ಹರಿದಿದೆ. ನಮ್ಮ ಮೇಲೆ ದೃಢವಾದ ನಂಬಿಕೆ ಇಟ್ಟ ಎಲ್ಲರಿಗೂ ನಾನು ಆಭಾರಿ. ಈಗಾಗಲೇ ಲಕ್ಷಾಂತರ ಜನರು ಇಲ್ಲಿಗೆ ಬಂದು ಹೋಗಿದ್ದಾರೆ. ನಿಮ್ಮ ಧರ್ಮ ಸೋತರೆ, ನಮ್ಮ ಧರ್ಮ ಸೋತ ಹಾಗೆ ಅಂತ ಹೇಳಿದ್ದಾರೆ. ಈ ಶತ್ರುತ್ವ ಯಾಕೆ ಅಂತ ಕೇಳುತ್ತಾರೆ, ನಾವು ಯಾರನ್ನೂ ಹೀಯಾಳಿಸಿಲ್ಲ, ದ್ವೇಷ ಕೂಡ ಮಾಡಿಲ್ಲ. ನಾವು ತಪ್ಪು ಮಾಡದ ಕಾರಣ ನಮಗೆ ಆತ್ಮವಿಶ್ವಾಸ ಇದೆ ಎಂದರು.

ಮೈಸೂರಿನಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಭೈರಪ್ಪನವರ ಅಂತ್ಯಕ್ರಿಯೆ

• ಪಂಚಭೂತಗಳಲ್ಲಿ ಲೀನರಾದ ಭೀಮಕಾಯ • ಹಿಂದೂ ಧರ್ಮಶಾಸ್ತ್ರದ ಪ್ರಕಾರ ಅಂತ್ಯಸಂಸ್ಕಾರ

ಮೈಸೂರು, ಸೆ.26(ಬಿಎಲ್ ಯಿ)– ಕನ್ನಡ ಸಾಹಿತ್ಯ ಕ್ಷೇತ್ರದ ಅಕ್ಷರ ಮಾಂತ್ರಿಕ ಎಸ್.ಎಲ್.ಭೈರಪ್ಪನವರ ಅಂತ್ಯಸಂಸ್ಕಾರವನ್ನು ಮೈಸೂರಿನಲ್ಲಿ ಇಂದು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಯಿತು.

ಸರಸ್ವತಿ ಸನ್ಮಾನ್, ಪದ್ಮಭೂಷಣ ಸೇರಿದಂತೆ ಹತ್ತಾರು ಪ್ರಶಸ್ತಿ, ಪುರಸ್ಕಾರ ಪಡೆದಿದ್ದ ಭೈರಪ್ಪ ಅವರು ಬುಧವಾರ ಬೆಂಗಳೂರಿನ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಉಸಿರು ನಿಲ್ಲಿಸಿದ್ದರು. ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಗುರುವಾರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬಳಿಕ ಪಾರ್ಥಿವ ಶರೀರ ವನ್ನು ಅವರ ಕರ್ಮಭೂಮಿ ಮೈಸೂರಿಗೆ ತರಲಾಗಿತ್ತು. ನಿನ್ನೆ ಸಂಜೆ ಮೈಸೂರಿನ ಕಲಾಮಂದಿರದಲ್ಲಿ ಕೂಡ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ನಂತರ ಅವರ ಪಾರ್ಥಿವ ಶರೀರವನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಂರಕ್ಷಿಸಲಾಗಿತ್ತು. ಇಂದು ಬೆಳಿಗ್ಗೆ 9.10ಕ್ಕೆ ಕುವೆಂಪುನಗರದ ಅವರ ಸ್ವಗೃಹಕ್ಕೆ ತರಲಾಯಿತು. ಈ ವೇಳೆ ಮೈಸೂರಿನ ಸಾಹಿತಿಗಳು, ರಾಜಕಾರಣಿಗಳು, ಅಧಿಕಾರಿಗಳು ಸೇರಿದಂತೆ ಸಹಸ್ರ ಅಭಿಮಾನಿಗಳು ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದ್ದರು. ನಂತರ ಭೈರಪ್ಪ ಅವರ ದೇಹವನ್ನು ಮೈಸೂರಿನ ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲಿ ಅವರ ಅಭಿಲಾಷೆಯಂತೆ ಹಿಂದೂ ಧರ್ಮಶಾಸ್ತ್ರದನ್ವಯ ಅಂತ್ಯಕ್ರಿಯೆ ವಿಧಿ ವಿಧಾನವನ್ನು ನೆರವೇರಿಸಲಾಯಿತು. ಇದೇ ವೇಳೆ ಭೈರಪ್ಪ ಅವರಿಗೆ ಸರ್ಕಾರಿ ಗೌರವ ಸಲ್ಲಿಸುವ ಕಾರ್ಯವೂ ನಡೆಯಿತು. ರಾಜ್ಯ ಸರ್ಕಾರದ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಕೇಂದ್ರ ಸರ್ಕಾರದ ಪರವಾಗಿ ಕೇಂದ್ರ ಆಹಾರ ▸ 6ನೇ ಪುಟಕ್ಕೆ

ಹಸನ್ಮುಖರಾಗಿ 'ದೂರ ಸರಿದರು'!

ಭೈರಪ್ಪ ಅವರು ವ್ಯಕ್ತಿಗತ ಕೋಪಿಷ್ಠರು. ಕೆಲವು ಬಾರಿ ಹಿಂದೆ ಮುಂದೆ ನೋಡದೆ ತೋಚಿದ ವಿಚಾರವನ್ನು ಕಡ್ಡಿ ಮುರಿದಂತೆ ನೇರವಾಗಿ ಹೇಳುವ ವ್ಯಕ್ತಿತ್ವದವರು. ಜೊತೆಗೆ ಭೈರಪ್ಪನವರು ಹಸನ್ಮುಖಿಯೂ ಹೌದು.

ಕೆಲವು ಸಮಾರಂಭಗಳಲ್ಲಿ ಹಾಸ್ಯ ಚಟಾಕಿ ಹರಿಸಿರುವುದೂ ಉಂಟು. ಅಂತ್ಯಕ್ರಿಯೆ ನಡೆದ ಚಿತಾಗಾರ ಪ್ರವೇಶ ದ್ವಾರದಲ್ಲಿ ಭೈರಪ್ಪ ಅವರ ನಗು ಮುಖದ ಫ್ಲೆಕ್ಸ್ ಹಾಕಲಾಗಿತ್ತು.


ಅಂತ್ಯ ಸಂಸ್ಕಾರ ನಡೆಯುವ ವೇಳೆ ನೀರವ ಮೌನ ಆವರಿಸಿತ್ತು. ಕಾದಂಬರಿಗಳ ಮೂಲಕ ಹಲವು ಪಾತ್ರ ಸೃಷ್ಟಿಸಿದ್ದ ಭೈರಪ್ಪನವರು ಇನ್ನು ನೆನಪು ಮಾತ್ರ ಎಂಬ ಭಾವ ಪ್ರತಿಯೊಬ್ಬರ ಮನದಲ್ಲಿತ್ತು. ಉಸಿರು ನಿಲ್ಲಿಸಿದ್ದ ಭೈರಪ್ಪ ನಮ್ಮ ನೆನಪಿನಲ್ಲಿ ಹಸನ್ಮುಖ ಭಾವದಲ್ಲಿ ಉಳಿಯುತ್ತಾರೆ ಎಂಬುದು ಹಲವರ ಆಶಯವಾಗಿತ್ತು



ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಖ್ಯಾತ ಸಾಹಿತಿ ಎಲ್.ಎಲ್.ಭೈರಪ್ಪ ಅವರ ಅಂತ್ಯಕ್ರಿಯೆಗೂ ಮುನ್ನ ಪೊಲೀಸರು 3 ಸುತ್ತು ಗುಂಡು ಹಾರಿಸಿ ಗೌರವ ವಂದನೆ ಸಲ್ಲಿಸಿದರು.

ಹುಟ್ಟಿದೂರಿನ ಪಾಲಿಗೆ 'ಭಗೀರಥ'...

ಭೈರಪ್ಪ ಅವರ ಅಂತ್ಯಕ್ರಿಯೆಯಲ್ಲಿ ಸಂತೇಶಿವರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು. ಈ ವೇಳೆ ಭೈರಪ್ಪ ಅವರು ತಮ್ಮೂರಿನ ಪಾಲಿಗೆ ಭಗೀರಥರಾದ ವಿಚಾರವನ್ನು ಮೆಲುಕು ಹಾಕಿದರು. ಸಂತೇಶಿವರ ಸೇರಿದಂತೆ ಹತ್ತಾರು ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿತ್ತು. ನೂರಾರು ಅಡಿ ಬೋರ್ ವೇಲ್ ಕೊರೆಸಿದರೂ ನೀರು ಬರುತ್ತಿರಲಿಲ್ಲ. ಇದರಿಂದ ಸುತ್ತಮುತ್ತಲಿನ ಊರಿನ ಜನರು ವಲಸೆ ಹೋಗುತ್ತಿದ್ದರು.



ಎಸ್.ಎಲ್.ಭೈರಪ್ಪ

ಒಮ್ಮೆ ಭೈರಪ್ಪ ಅವರು ಊರಿಗೆ ಬಂದಾಗ ಈ ವಿಚಾರವನ್ನು ಅವರ ಗಮನಕ್ಕೆ ತಂದರು. ಕೆಲ ದಿನಗಳ ನಂತರ ಭೈರಪ್ಪ ಬೆಂಗಳೂರಿನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ತಮ್ಮೂರಿನ ಸಮಸ್ಯೆ ತಿಳಿಸಿದರು. ಭೈರಪ್ಪ ಅವರ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಬಸವರಾಜ ಬೊಮ್ಮಾಯಿ, ಅವರ ಸುತ್ತಮುತ್ತಲಿನ ಊರುಗಳ ಕೆರೆಗಳಿಗೆ ನೀರು ಹರಿಸಿದರು. ತಮ್ಮೂರಿನ ಸಾಹಿತ್ಯ ಒಡೆಯನ ನೆನಪನ್ನು ಇಂದು ಗ್ರಾಮಸ್ಥರು ನೆನಪಿಸಿಕೊಂಡು, ಸಂತಾಪ ಸೂಚಿಸಿದರು.

ಲಾಸ್ಟ್ ಪೋಸ್ಟ್ ಅಂತಿಮ ನಮನ

ಸಾಹಿತ್ಯ ಕ್ಷೇತ್ರದ ದಿಗ್ಗಜ ಎಸ್.ಎಲ್. ಭೈರಪ್ಪ ಅವರಿಗೆ ಇಂದು ಹೆಡ್ ಮಾರ್ಚ್ ಮೂಲಕ ಪೊಲೀಸರು ಸಕಲ ಸರ್ಕಾರಿ ಗೌರವ ಸಲ್ಲಿಸಿದರು. ಭೈರಪ್ಪ ಅವರ ಅಂತ್ಯಕ್ರಿಯೆಗೆ ಮುನ್ನ ಪೊಲೀಸರು ಸಂಪ್ರದಾಯದಂತೆ ಗೌರವ ಸಲ್ಲಿಸಿದರು. ಕಮಾಂಡೆಂಟ್ ನೀಡಿದ ಸೂಚನೆ ಮೇರೆಗೆ ಪೊಲೀಸರು ಶೋಕ ಶಸ್ತ್ರ ಹೆಸರಿನಲ್ಲಿ ಆಕಾಶದತ್ತ ಮೂರು ಸುತ್ತು ಗುಂಡು ಹಾರಿಸಿದರು. ಈ ವೇಳೆ ಪೊಲೀಸ್ ವಾದ್ಯಗೋಷ್ಠಿಯವರು ರಾಷ್ಟ್ರಗೀತೆ ಮೊಳಗಿಸುವ ಮೂಲಕ ಗೌರವ ವಂದನೆ ಸಲ್ಲಿಸಿದರು. ಪೊಲೀಸ್ ವಾದ್ಯಗೋಷ್ಠಿಯ ಕಲಾವಿದರು ರೀತ್ ▸ 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 27 ಸೆಪ್ಟೆಂಬರ್ 2025

ಫಾರ್ಮಾಸಿಸ್ಟ್ಸ್ ದಿನಾಚರಣೆಯ ಮೆಮೋರಿ ವಾಕ್



ಇಂಡಿಯಾ ಅಲ್ಜೈಮರ್ಸ್ ಮತ್ತು ಸಂಬಂಧಿತ ಡಿಸ್‌ಆರ್ಡರ್ಸ್ ಸೊಸೈಟಿಯ ಮೈಸೂರು ಚಾಪ್ಟರ್ ಹಾಗೂ ಮೈಸೂರು ಶಾರದಾ ವಿಲಾಸ್ ಫಾರ್ಮಸಿ ಕಾಲೇಜು ವತಿಯಿಂದ ಏರ್ಪಡಿಸಿದ್ದ ವಿಶ್ವ ಫಾರ್ಮಾಸಿಸ್ಟ್ಸ್ ದಿನಾಚರಣೆ ಸಮಾರಂಭದಲ್ಲಿ ಮೆಮೋರಿ ವಾಕ್‌ಗೆ ರಘುಲಾಲ್ ಅಂಡ್ ಕಂಪನಿಯ ಮುಖ್ಯಸ್ಥರಾದ ಎನ್. ರಾಘವನ್ ನಿಶಾನೆ ತೋರಿ ಚಾಲನೆ ನೀಡಿದರು. ಈ ವೇಳೆ ಶಾರದ ವಿಲಾಸ ಶೈಕ್ಷಣಿಕ ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್. ದಿನೇಶ್, ಗವರ್ನಿಂಗ್ ಕೌನ್ಸಿಲ್‌ಮೆಂಬರ್ ಆರ್. ನರಸಿಂಹ, ಶಾರದಾ ವಿಲಾಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ ಇತರರು ಉಪಸ್ಥಿತರಿದ್ದಾರೆ.

ಪಾರಂಪರಿಕ ನಡಿಗೆಯಲ್ಲಿ ಮೈಸೂರು ಪರಂಪರೆ ಮನವರಿಕೆ



ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಆಯೋಜಿಸಿದ್ದ 'ಪಾರಂಪರಿಕ ನಡಿಗೆ'ಯಲ್ಲಿ ನೂರಾರು ಮಂದಿ ಹೆಜ್ಜೆ ಹಾಕಿದರು.

ಮೈಸೂರು, ಸೆ.26(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಪಾರಂಪರಿಕ ಕಟ್ಟಡಗಳು, ಪ್ರಮುಖ ವೃತ್ತ ಮತ್ತು ರಸ್ತೆಗಳ ಇತಿಹಾಸ ಅರಿಯುತ್ತಾ ಹೆಜ್ಜೆ ಹಾಕಿದ ನೂರಾರು ಮಂದಿ 'ಮೈಸೂರು ಪರಂಪರೆಯ ರಕ್ಷಣೆ ನಮ್ಮೆಲ್ಲರ ಹೊಣೆ' ಎಂದು ಸಾರಿದರು...

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಪಾರಂಪರಿಕ ನಡಿಗೆ'ಯಲ್ಲಿ ಸಾಗಿದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಕುತೂಹಲದಿಂದ ಮೈಸೂರಿನ ಪ್ರಮುಖ ವೃತ್ತ, ರಸ್ತೆ ಹಾಗೂ ಪಾರಂಪರಿಕ ಕಟ್ಟಡಗಳ ಇತಿಹಾಸ ತಿಳಿದುಕೊಂಡರು.

ಹಾಗೆಯೇ 'ಪ್ರಾಚೀನ ಕಲಾಕೃತಿಗಳ ಕಳ್ಳ ಸಾಗಾಣಿಕೆ ದೇಶ ದ್ರೋಹ', 'ಶಿಲ್ಪಗಳಿಗೆ ಸುಣ್ಣ ಅಥವಾ ಎಣ್ಣೆ ಹಚ್ಚುವುದು ತಪ್ಪು', 'ಪ್ರಾಚೀನ ಸ್ಮಾರಕಗಳು ನಾಡಿನ ಸಂಪತ್ತು, ಅವುಗಳನ್ನು ಅಂದಗೆಡಿಸಬೇಡಿ', 'ಸ್ಮಾರಕಗಳು ಜೂಜು ಕಟ್ಟೆಯಲ್ಲ', 'ಕಲಾ ದೇಗುಲಗಳು ನಮ್ಮ ನಾಡಿನ ಆಸ್ತಿ ಎಂಬಿತ್ಯಾದಿ ಘೋಷಣೆಗಳೊಂದಿಗೆ ಪಾರಂಪರಿಕ ಆಸ್ತಿಗಳ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದರು.

ಟೌನ್‌ಹಾಲ್‌ನಿಂದ ಆರಂಭವಾದ ಪಾರಂಪರಿಕ ನಡಿಗೆ, ದೊಡ್ಡ ಗಡಿಯಾರ, 10ನೇ ಚಾಮರಾಜ ಒಡೆಯರ್ ವೃತ್ತ, ಅಂಬಾ ವಿಲಾಸ ಅರಮನೆ, ಕೆ.ಆರ್.ವೃತ್ತ, ಚಿಕ್ಕಗಡಿಯಾರ, ದೇವರಾಜ ಮಾರುಕಟ್ಟೆ ರಸ್ತೆ, ಕೆ.ಆರ್.ಆಸ್ಪತ್ರೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ ಮೂಲಕ ಸಾಗಿ, ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್ ಮೂಲಕ ಕಾವೇರಿ ಎಂಪೋರಿಯಂ ಮಾರ್ಗವಾಗಿ ಗಾಂಧಿ ವೃತ್ತದಿಂದ ವಾಪಸ್ ಟೌನ್‌ಹಾಲ್ ಆವರಣದಲ್ಲಿ ಮುಕ್ತಾಯಗೊಂಡಿತು.

ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದು ಎಲ್ಲರ ಹೊಣೆ: ಪಾರಂಪರಿಕ ನಡಿಗೆ ಆರಂಭಕ್ಕೂ ಮುನ್ನ ಮಾತನಾಡಿದ ಇತಿಹಾಸ ತಜ್ಞ ಡಾ.ಶೆಲ್ವಪಿಳ್ಳೆ ಅಯ್ಯಂಗಾರ್, ನಮ್ಮ ಪರಂಪರೆ ಮತ್ತು ಪಾರಂಪರಿಕ ಕಟ್ಟಡಗಳನ್ನು ಕಾಪಾಡುವ, ಸಂರಕ್ಷಣೆ ಮಾಡುವ ಹೊಣೆ ನಮ್ಮೆಲ್ಲರದಾಗಿದೆ ಎಂದರು.

ಪುರಭವನಕ್ಕೆ ನಿಯೊ ಕ್ಲಾಸಿಕಲ್ ಸ್ಟೈಲ್ ಎಂಬ ಮತ್ತೊಂದು ಹೆಸರಿದ್ದು, 1884ರಲ್ಲಿ ಸಿಮೆಂಟ್ ಬಳಸದೇ ಕಟ್ಟಿಸಲಾಗಿದೆ. ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳನ್ನು 1880ರಿಂದೀಚೆಗೆ ಕಟ್ಟಿಸಲಾಗಿದ್ದು, ಅವುಗಳ ಸಂರಕ್ಷಣೆ ನಮ್ಮೆಲ್ಲರದ್ದಾಗಿದೆ ಎಂದು ತಿಳಿಸಿದರು. ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಪಾರಂಪರಿಕ ನಡಿಗೆಗೆ ಚಾಲನೆ ನೀಡಿದರು. ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ. ದೇವರಾಜು, ಉಪ ನಿರ್ದೇಶಕಿ ಡಾ.ಸಿ.ಎನ್. ಮಂಜುಳಾ, ಇತಿಹಾಸ ತಜ್ಞ ಡಾ.ಎಂ.ಎಸ್. ರಂಗರಾಜು, ತಾರಕೇಶ್, ಅಂಬರೀಶ್ ಮತ್ತಿತರರಿದ್ದರು.

ನಿರ್ದೇಶಕರಾಗಿ ಆಯ್ಕೆ...



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಯಾದ ವಿಕಾಶ್ ವೈ, ವಸಂತ ಮನೀಶ್, ಮಂಚಪ್ಪ ಅವರಿಗೆ ಚುನಾವಣಾಧಿಕಾರಿ ರಾಜು ಅವರು ಪ್ರಮಾಣಪತ್ರವನ್ನು ನೀಡಿದರು. ಈ ಸಂದರ್ಭದಲ್ಲಿ ಮೈಸೂರು ಪಾಲಿಕೆ ಸದಸ್ಯರೂ ಆದ ಬ್ಯಾಂಕ್‌ನ ನಿರ್ದೇಶಕ ಎಸ್‌ಬಿಎಂ ಮಂಜು, ಬ್ಯಾಂಕ್ ಅಧ್ಯಕ್ಷರಾದ ಯೋಗೇಶ್, ಉಪಾಧ್ಯಕ್ಷ ರವಿ, ನಿರ್ದೇಶಕರಾದ ರಾಜೇಶ್ವರಿ, ರಾಜಕೀಯ ರವಿ, ಸೋಮಣ್ಣ ಇತರರು ಉಪಸ್ಥಿತರಿದ್ದರು.

ಎಸ್.ಎಲ್.ಭೈರಪ್ಪ ನಿಧನಕ್ಕೆ ಗಣಪತಿ ಸಚ್ಚಿದಾನಂದ ಶ್ರೀಗಳ ಸಂತಾಪ



ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು, ಸೆ.26(ಎಸ್‌ಪಿಎನ್)– ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠರೂ ಅಗ್ರಗಣ್ಯರೂ ಆಗಿದ್ದ ಡಾ.ಎಸ್.ಎಲ್. ಭೈರಪ್ಪನವರು ನಿಧನರಾಗಿರುವುದು ಸಾರಸ್ವತ ಲೋಕಕ್ಕೆ, ಅದರಲ್ಲೂ ಅವರ ಓದುಗ ಬಳಗಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಂತಾಪ ಸೂಚಿಸಿದ್ಧಾರೆ.

ಪದ್ಮಶ್ರೀ, ಪದ್ಮಭೂಷಣ, ಸರಸ್ವತಿ ಸಮ್ಮಾನ ಪುರಸ್ಕೃತರಾಗಿದ್ದ ಭೈರಪ್ಪನವರು ಭಾರತ ದರ್ಶನಗಳನ್ನು, ಪ್ರಾಚೀನ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಈ ಕುರುಹುಗಳು ಅವರ ಚಿಂತನೆಯಲ್ಲಿ, ಕೃತಿಗಳಲ್ಲಿ ಪ್ರತಿಧ್ವನಿಸಿವೆ. ಹಾಗಾಗಿಯೇ ಅವರ ಕೃತಿಗಳು ಸಂಸ್ಕೃತವೂ ಸೇರಿದಂತೆ ಅನೇಕ ದೇಶೀಯ ಭಾಷೆಗಳಿಗೆ ಅನುವಾದವಾಗಿದ್ದು, ಅಪಾರ ಜನಪ್ರಿಯತೆಯನ್ನು ಗಳಿಸಿವೆ.

ಶ್ರೀಯುತರು ಭೌತಿಕವಾಗಿ ದೇಹವನ್ನು ತೊರೆದಿದ್ದಾರೆ. ಆದರೆ, 'ನಾಸ್ತಿ ತೇಷಾವ್ ಯಶಃ ಕಾಯೇ ಜರಾ ಮರಣಜಂ ಭಯಮ್' ಎಂಬ ಆರ್ಯೋಕ್ತಿಯಂತೆ, ಇಂದಿನ ಹಾಗೂ ಮುಂಬರುವ ಜನಮಾನಸದಲ್ಲಿ ಜೀವಂತವಾಗಿ ಇರುತ್ತಾರೆ ಎಂದರೆ ಅತಿಶಯೋಕ್ತಿಯಾಗದು. ಜಗನ್ನಿಯಾಮಕನಾದ ಪರಮಾತ್ಮನು ಅವರಿಗೆ ಪರಮಶಾಂತಿಯನ್ನೂ, ಅವರ ಕುಟುಂಬ ಸದಸ್ಯರಿಗೂ, ಸಾಹಿತ್ಯಪ್ರೇಮಿಗಳಿಗೂ ಈ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನೂ ದಯಪಾಲಿಸಲಿ ಎಂದಿದ್ದಾರೆ.

ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ನವಚೇತನ ಜನಸೇವಾ ಟ್ರಸ್ಟ್ ಅಧ್ಯಕ್ಷ ಚೇತನ್ ವಿಷಕಂಠೇಗೌಡ ಅವರನ್ನು ಶಾಸಕರಾದ ಕೆ. ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ಬಿಜೆಪಿ ಮುಖಂಡ ಡಾ. ಶುಶ್ರುತ್‌ಗೌಡ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ನಿಧನ

ಗಣಪಯ್ಯ ಹೆಬ್ಬಾರ್



ಮೈಸೂರು, ಸೆ.26– ಮೈಸೂರು ಚಾಮರಾಜಪುರಂನ ಲಕ್ಷ್ಮೀ ರಾಮಸ್ವಾಮಿ ಸೌಧ ನಿವಾಸಿ ಗಣಪಯ್ಯ ಹೆಬ್ಬಾರ್ (81) ಇಂದು (ಗುರುವಾರ) ಸಂಜೆ ವಯೋಸಹಜ ಕಾಯಿಲೆಯಿಂದ ನಿಧನರಾದರು.


ಹೋಟೆಲ್ ಉದ್ಯಮಿಯೂ ಆಗಿದ್ದ ಇವರು ಯಕ್ಷಗಾನ ಕಲಾವಿದರು, ಕನ್ನಡ ಕಾವ್ಯಗಳ ಬಗೆಗೆ ಅಪಾರ ಜ್ಞಾನವನ್ನೂ ಹೊಂದಿದ್ದರು. ಮೃತರು ಪತ್ನಿ, ಕವಿ ಹಾಗೂ ಸಂಪನ್ಮೂಲ ವ್ಯಕ್ತಿ ಆದ ಪುತ್ರ ನಾಗೇಂದ್ರ ಹೆಬ್ಬಾರ್ ಹಾಗೂ ಇಬ್ಬರು ಪುತ್ರಿಯರು, ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ. ಅಪೂರ್ವಾನಂದ




ಮೈಸೂರು: ಮೈಸೂರು ರಾಮಕೃಷ್ಣನಗರ ಕೆ ಬ್ಲಾಕ್ ನಿವಾಸಿಗಳಾದ ಕೆ.ಎನ್. ಕೃಷ್ಣಪ್ರಸಾದ್ ಮತ್ತು ಎಸ್. ಸುಧಾ ದಂಪತಿಯ ಪುತ್ರ, ವಕೀಲರೂ ಆದ ಕೆ. ಅಪೂರ್ವಾನಂದ (37) ಕಳೆದ ಸೆಪ್ಟೆಂಬರ್ 21ರಂದು ನಿಧನರಾದರು. ಮೃತರು ತಂದೆ–ತಾಯಿ, ತಾತ–ಅಜ್ಜಿ, ಸಹೋದರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅಂದೇ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಸ್ವಾಮಪ್ಪ



ಮೈಸೂರು, ಸೆ.26– ಸರಗೂರು ತಾಲೂಕು ಬಂಕವಾಡಿ ಗ್ರಾಮದ ಪುಟ್ಟಸ್ವಾಮಪ್ಪ(ಮುತ್ತಪ್ಪ–88) ಅವರು ಶುಕ್ರವಾರ ಮುಂಜಾನೆ ನಿಧನರಾದರು. ಇವರು ಪತ್ನಿ ಕಸ್ತೂರಮ್ಮ, ಪುತ್ರಿಯರಾದ ಗೌರಿ, ಮೀನಾಕ್ಷಿ, ಸವಿತಾ, ಪುತ್ರರಾದ ಪದ್ಮರಾಜು, ರಾಧಾಕೃಷ್ಣ, ವಿನೋದ್, ವಿಜಯ್, ಕುಮಾರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅದೇ ದಿನ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಸಣ್ಣಮ್ಮ



ಮೈಸೂರು, ಸೆ.26– ಮೈಸೂರು ತಾಲೂಕು ಹಲಗಯ್ಯನ ಹುಂಡಿಯ ನಿವಾಸಿ ಶ್ರೀಮತಿ ಸಣ್ಣಮ್ಮ(75) ಗುರುವಾರ ನಿಧನರಾದರು. ಮೃತರು ಪುತ್ರ ಚಲುವರಾಜ್, ಪುತ್ರಿ ಮಧುರ, ಮೊಮ್ಮಕ್ಕಳು ವಿನಯ್, ಭಾರ್ಗವಿ, ಸುದೀಕ್ಷಾ, ವಿಜಯ್ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅಂದೇ ಸ್ವಗ್ರಾಮ ಹಲಗಯ್ಯನಹುಂಡಿಯಲ್ಲಿ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.09.2025 ಶನಿವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಐಶ್ವರ್ಯ ರಿಯಾಲಿಟೀಸ್:** ಚಾಮುಂಡೇಶ್ವರಿ ಸೆಲೆಬ್ರಿಟಿ ಪ್ರೀಮಿಯರ್ ಲೀಗ್, ವೈಟ್ ಬಾಲ್ ಕ್ರಿಕೆಟ್ ಟೂರ್ನಮೆಂಟ್, ಸ್ಥಳ: ಗ್ಲೈಡ್ಸ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9 ರಿಂದ.

■ **ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್ :** ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಉದ್ಘಾಟನೆ : ಎಂಆರ್‌ಸಿ ಚಾರಿಟಬಲ್ ಟ್ರಸ್ಟ್ ಟ್ರಸ್ಟಿ, ಅಧ್ಯಕ್ಷ ಜಿ. ವೆಂಕಟೇಶ್, ಸ್ಥಳ: ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ, ಬೆಳಗ್ಗೆ 9.30 ರಿಂದ.

■ **ಟೆರೇಷಿಯನ್ ಕಾಲೇಜು :** ಆರೋಗ್ಯ ಜಾಗೃತಿ ರ‍್ಯಾಲಿ, ಸ್ಥಳ:ಟೆರೇಷಿಯನ್ ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಉತ್ಸವ, ಸಹಸ್ರಾಮ ಹೋಮ, ಸಾಯಂಕಾಲ ಶೇಷ ವಾಹನೋತ್ಸವ, ಮಹಾಮಂಗಳಾರತಿ, ಸ್ಥಳ : ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಪಂಚಮಿ ಶ್ರೀ ಗಾಯತ್ರಿ ಅಲಂಕಾರ, ಶ್ರೀ ಗಾಯತ್ರಿ ಹೋಮ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ಶ್ರೀ ಸೂಕ್ತ ಹೋಮ, ಶ್ರೀ ಇಂದ್ರಾಣಿ (ಗಜವಾಹಿನಿ) ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಕುಮಾರಿ ಭಾರತಿ ಹುರುಗಲ್ ಅವರಿಂದ ಭಕ್ತಿ ಗೀತೆ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9 ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದ್ವಾನ್ ಶ್ರೀರಾಮ್ ಪರಶುರಾಮ್ ಅವರಿಂದ ಕರ್ನಾಟಕ ಪಿಟೀಲು ವಾದನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ಪರಾಸಕ್ತಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಕೆ.ಎಸ್.ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಕಲಾ ಸಂಭ್ರಮದ ಅಂಗವಾಗಿ ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆ ಹಾಗೂ ಜನಪದ ಗೀತೆ ಗಾಯನ ಸ್ಪರ್ಧೆ, ಉದ್ಘಾಟನೆ : ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಡಾ.ಎಂ.ಜಿ.ಮಂಜುನಾಥ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ನಾಗರಾಜು, ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಮರೀಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ವರ್ಧ್ಯಂತ್ಯೋತ್ಸವ, ಶ್ರೀಮಹಾಗಣಪತಿ ಪುರಸ್ಸರ ಗಂಗಾಭಾಗೀರಥಿ ಪೂಜಾ, ಪುಣ್ಯಾಹವಾಚನ ನಾಂದಿ, ಮಾತೃಕಾರಾಧನಾ, ಪಂಚಗ್ಯಪೂಜಾ, ನವಗ್ರಹಪೂರ್ವಕ ಕಲಶ ಸ್ಥಾಪನೆ, ಜಪಗಳು, ನವಚಂಡಿಕಾರಾಧನೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಹಿರಿಯ ನಾಗರಿಕರ ನಿವಾಸ, ಆಲನಹಳ್ಳಿ ಬಡಾವಣೆ, ನಾಡನಹಳ್ಳಿ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಶಾರದಾ ವಿಲಾಸ ಶಿಕ್ಷಣ ಸಂಸ್ಥೆ :** ಉದ್ಯೋಗ ಮೇಳ, ಮುಖ್ಯ ಅತಿಥಿಗಳು : ಕೆ. ಸತೀಶ್, ಎಸ್., ಸುಭಾಷ್‌ಚಂದ್ರ ಎಸ್., ಸ್ಥಳ: ಶಾರದಾ ವಿಲಾಸ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ನೌಕರರ, ವಾಹನ ಚಾಲಕರ ಮತ್ತು ಡಿ ಗ್ರೂಪ್ ನೌಕರರ ಸಂಘ :** ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ, ಉದ್ಘಾಟನೆ : ಶಾಲಾ ಶಿಕ್ಷಣ ಇಲಾಖೆ ಸಹ ನಿರ್ದೇಶಕ ಕೆ.ಎನ್. ಪ್ರಕಾಶ್, ಪುಷ್ಪಾರ್ಚನೆ : ಪ್ರಿನ್ಸಿಪಾಲ್ ಶ್ರೀಮತಿ ಜೆ. ರಾಜಲಕ್ಷ್ಮಿ, ಸನ್ಮಾನಿಸುವವರು : ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಅಧ್ಯಕ್ಷತೆ : ಸಂಘದ ಜಿಲ್ಲಾಧ್ಯಕ್ಷ ರೇವಣ್ಣ, ಸ್ಥಳ: ನೃಪತುಂಗ ಹಾಲ್, ಡಯಟ್, ವಸಂತ್ ಮಹಲ್, ಬೆಳಗ್ಗೆ 10.30ಕ್ಕೆ

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡಿಕಾಯಾಗ, ಬೆಳಗ್ಗೆ 9.30ಕ್ಕೆ ಸಹಸ್ರ ಚಂಡಿಕಾಯಾಗ, ಕಾತ್ಯಾಯಿನಿದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಜಿಲ್ಲಾ ಕಸಾಪ ಕಾರ್ಯದರ್ಶಿ ಶ್ರೀಮತಿ ಮ.ನ. ಲತಾ ಮೋಹನ್ ಅವರ ಕೃತಿಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಭೈರಿ, ಕೃತಿ ಬಿಡುಗಡೆ : ಮಹಾಕವಯಿತ್ರಿ ಡಾ. ಲತಾ ರಾಜಶೇಖರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಜಿಲ್ಲಾ ಬ್ರಾಹ್ಮಣ ಮಹಾಸಭಾ ಜಿಲ್ಲಾಧ್ಯಕ್ಷ ಡಾ. ಬಿ.ಆರ್. ನಟರಾಜ ಜೋಯಿಸ್, ಉಪಸ್ಥಿತರು : ಶ್ರೀಮತಿ ಜಿ.ಆರ್. ನಾಗರತ್ನ, ಶ್ರೀಮತಿ ಸುಮತಿ ಸುಬ್ರಹ್ಮಣ್ಯ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಸ್ಕಂದಮಾತಾ, ಶ್ರೀವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಲಲಿತಾ ಮಹಾಯಾಗ ಮತ್ತು ಶ್ರೀ ದಶಮಹಾವಿದ್ಯಾ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಆದಿತ್ಯಾದಿ ನವಗ್ರಹ ಪುರಸ್ಸರ ಗಾಯತ್ರಿ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30 ರಿಂದ ಜೆ.ಪಿ. ನಗರದ ಶಾರದಾ ಸಂಗೀತ ಬಳಗದಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಸ್ಪತ್ರೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಶತೋತ್ತರ ದಶಮಾನೋತ್ಸವ ಆಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ಶ್ರೀ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ. ಬಿ. ದಿನೇಶ್, ವೀರಶೈವ–ಲಿಂಗಾಯತ ಮಹಾವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರ್, ಗೌರವ ಅತಿಥಿಗಳು : ತೋಟಗಾರಿಕೆ ಇಲಾಖೆ ನಿರ್ದೇಶಕ ಎನ್.ಎಂ. ಶಿವಶಂಕರಪ್ಪ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ಶಂಕರ್ ಅಶ್ವಥ್, ಯುವರಾಜ ಕಾಲೇಜು ವಿದ್ಯಾರ್ಥಿಗಳಿಂದ ನನ್ನ ಮೆಚ್ಚಿನ ಪುಸ್ತಕ ಓದು, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ಕ್ಕೆ.

■ **ಅರ್ಕ ಫೌಂಡೇಷನ್ :** ಶ್ರೀನಿವಾಸ ಅರ್ಕ ಅವರ ಬಿಕಮಿಂಗ್ ಇನ್ಸ್ಪೈರ್ಡ್ ಇಂಗ್ಲಿಷ್ ಪುಸ್ತಕ ಬಿಡುಗಡೆ ಮತ್ತು ಜನ್ಮ ದಿನದ ಸಂಭ್ರಮಾಚರಣೆ, ಉದ್ಘಾಟನೆ : ಡಾ. ಶ್ರೀ ಸೋಮಶೇಖರ ಸ್ವಾಮೀಜಿ, ಉಪನ್ಯಾಸ: ಹಿರಿಯ ವಿದ್ವಾಂಸ ಡಾ. ಕೆ. ಅನಂತರಾಮು ಅವರಿಂದ, ಪುಸ್ತಕ ಪರಿಚಯ : ಡಾ. ಪಿ. ಸತ್ಯನಾರಾಯಣ ಭಟ್, ಪುಸ್ತಕ ಬಿಡುಗಡೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಸ್ಥಳ : ಅರ್ಕಧಾಮ, ಬೋಗಾದಿ–ಗದ್ದಿಗೆ ಮುಖ್ಯ ರಸ್ತೆ, ಮಧ್ಯಾಹ್ನ 12ಕ್ಕೆ

■ **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಯಲದ ಎದುರು, ಸಂಜೆ 4.30 ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 899, ಕಥೆ ಹೇಳುವವರು: ಜಯರಾಮ ಭಟ್, ನಿವೃತ್ತ ಮುಖ್ಯೋಪಾಧ್ಯಾಯರು, ಕೆ ಬೆಳತ್ತೂರು, ಎಚ್ ಡಿ ಕೋಟೆ ತಾಲೂಕು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ದಸರಾ ಪ್ರಯುಕ್ತ ವಿಶೇಷ ಕರ್ನಾಟಕ ಸಂಗೀತ ಕಾರ್ಯಕ್ರಮ, ಉಪಸ್ಥಿತರು : ಪ್ರೊ.ಬಿ.ಎಸ್. ಪ್ರೇಮಕುಮಾರಿ, ವಿದ್ವಾನ್ ಮಾನಸನಯನ ಅವರಿಂದ ಹಾಡುಗಾರಿಕೆ, ವಿದ್ವಾನ್ ಅಮೋಘ್ ನಡಾದುರ್– ವಯೋಲಿನ್, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 5ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ, ಕೃತಿಗಳ ಬಿಡುಗಡೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಮಹದೇವ ಸ್ವಾಮೀಜಿ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ಕೃತಿಗಳ ಬಿಡುಗಡೆ : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಮ್ ಪ್ಯಾರಬಲ್ಸ್ ಆಫ್ ಶ್ರೀ ರಾಮಕೃಷ್ಣ–9 ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಕಿಸ್ಕಿಟ್ ಕ್ವಾಂಟಮ್ ಅಡ್ವೋಕೇಟ್ ಪ್ರೊ. ಬಿ.ಎಸ್. ಲೋಕೇಶ್ ಅವರಿಂದ ಕ್ವಾಂಟಮ್ ಕಂಪ್ಯೂಟಿಂಗ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ .ಎಸ್., 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು– ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು –ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಮೈಸೂರು ಬ್ರಾಂಡ್ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ – ತ್ಯಾಗ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಾವಯವ ಕೃಷಿಯಲ್ಲಿ ಹಸಿರೆಲೆ ಗೊಬ್ಬರದ ಮಹತ್ವ ಕುರಿತು ಸಂವಾದ. ಭಾಗವಹಿಸುತ್ತಾರೆ– ಚಾಮರಾಜನಗರ ತಾಲ್ಲೂಕು, ಹರದನ ಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಎಂ.ಕೆ. ಶ್ರುತಿ ಹಾಗೂ ಕೊಳ್ಳೇಗಾಲ ತಾಲೂಕು ಕುಂತೂರು ಗ್ರಾಮದ ನಂಜುಂಡಸ್ವಾಮಿ, ಪ್ರಸುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಅಭಿಷೇಕ್ ಲಹಿರಿ – ಸರೋದ್ ವಾದನ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ 'ಬೆಸ್ತರು' ಎಂದು ಬರೆಸಲು ಮನವಿ

ಮೈಸೂರು, ಸೆ.26(ಜಿಎ)–ರಾಜ್ಯ ಸರ್ಕಾರ ನಡೆಸುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ವೇಳೆ ಸುಮಾರು 37 ಹೆಸರುಗಳಿಂದ ಕರೆಯಲ್ಪಡುತ್ತಿರುವ ಬೆಸ್ತ ಸಮುದಾಯದವರು ಜಾತಿ ಕಾಲಂನಲ್ಲಿ ಬೆಸ್ತರು ಎಂದೇ ಬರೆಸಬೇಕೆಂದು ಗಂಗಾಮತಸ್ಥರ ಬೆಸ್ತರ ಸಂಘ ಹಾಗೂ ಪ್ರಥಮ ಆದಿ ಗಣನಾಥ ಸೇವಾ ಭಕ್ತ ಮಂಡಳಿ ಮನವಿ ಮಾಡಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಸಂಘದ ನಿರ್ದೇಶಕ ನಾಗೇಂದ್ರ ಈ ವಿಷಯ ತಿಳಿಸಿ, ಸಮುದಾಯದ ಸಂಖ್ಯೆ ರಾಜ್ಯದಲ್ಲಿ ಸುಮಾರು 30 ಲಕ್ಷ ಇದ್ದರೂ ಸಹ ಸುಮಾರು 14 ಲಕ್ಷ ಎಂದು ಕಳೆದ ಗಣತಿ ವೇಳೆ ತಿಳಿಸಿರುವುದು ಸರಿಯಲ್ಲ. ಹೀಗಾಗಿ ಈ ಬಾರಿಯ ಸಮೀಕ್ಷೆ ವೇಳೆ ಸಮುದಾಯದವರು ಬೆಸ್ತರು ಎಂದು ಜಾತಿ ಕಾಲಂನಲ್ಲಿ ಬರೆಯಿಸಬೇಕು ಎಂದು ಕೋರಿದರು.

ಜಾತಿ ಕಾಲಂನಲ್ಲಿ ಶಿವಾರ್ಚಕ, ಧರ್ಮ ಕಾಲಂನಲ್ಲಿ ಹಿಂದೂ ಎಂದು ನಮೊದಿಸಿ

ಮೈಸೂರು,ಸೆ.26(ಜಿಎ)– ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಶಿವಾರ್ಚಕ ಸಮುದಾಯದವರು ಜಾತಿ ಕಾಲಂನಲ್ಲಿ ಶಿವಾರ್ಚಕ, ಧರ್ಮ ಕಾಲಂನಲ್ಲಿ ಹಿಂದೂ ಎಂದು ನಮೂದಿಸಬೇಕು. ಆದರೆ ಉಪ ಜಾತಿ ಕಾಲಂನಲ್ಲಿ ಏನನ್ನೂ ನಮೂದಿಸಬಾರದು ಎಂದು ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ ಈ ವಿಷಯ ತಿಳಿಸಿ, ಶಿವಾರ್ಚಕ ಸಮುದಾಯದವರು ರಾಜ್ಯದಾದ್ಯಂತ ಹಂಚಿ ಹರಡಿ ಹೋಗಿದ್ದಾರೆ. ಈ ಹಿಂದೆ ಜಾತಿ ಗಣತಿ ವೇಳೆ ಪ್ರತ್ಯೇಕ ಕಾಲಂ ಇರಲಿಲ್ಲ. ಇದೀಗ ಪ್ರತ್ಯೇಕವಾಗಿ ಕ್ರಮ ಸಂಖ್ಯೆ ನೀಡಲಾಗಿದೆ. ಹೀಗಾಗಿ ಶಿವಾರ್ಚಕರು ಈ ಅವಕಾಶ ಬಳಸಿಕೊಂಡು ಜಾತಿ ಕಾಲಂನಲ್ಲಿ ಕೇವಲ ಶಿವಾರ್ಚಕ, ಧರ್ಮ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕು ಎಂದು ತಿಳಿಸಿದರು.

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218
ದೂರವಾಣಿ ಸಂಖ್ಯೆ: 08274-257332 |
ಇ–ಮೇಲ್: itstaff_ulb_virajpet@yahoo.com |
ವೆಬ್‌ಸೈಟ್: www.virajpettown.mrc.gov.in

ಕ್ರ.ಸಂ.ನಂ.ಪು.ವಿ/ಅಮೃತ 2.0ಉ/ಟೆ–05/2025–26 ದಿನಾಂಕ: 26–9–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ :	27–09–2025 ರಿಂದ 13–10–2025 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ :	13–10–2025 ಸಂಜೆ 17:30 ಗಂಟೆವರೆಗೆ
3. ಟೆಂಡರ್ ತೆರೆಯುವ ದಿನಾಂಕ :	15/10/2025 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ :	ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/– (ಶ್ರೀಮತಿ ಎಂ.ಕೆ ದೇಚಮ್ಮನವರು) ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.
ಸಹಿ/– (ಶ್ರೀಮತಿ ಫಸಿಹಾ ತಬಸಮ್) ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ
ಸಹಿ/– (ಶ್ರೀ ಎಂ.ಕೆ. ಅಬ್ದುಲ್ ಜಲೀಲ್) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ
ಸಹಿ/– (ಶ್ರೀ ನಾಚಪ್ಪ ಪಿ.ಕೆ) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಿದ್ರೆ ಮಾತ್ರೆ ತಿಂದರೆ ನಿದ್ದೆ ಬರುತ್ತೆ.
ಗಂಡ : ಹೌದು!?
ಹೆಂಡತಿ : ಹಾಗಾದರೆ ಜ್ವರದ ಮಾತ್ರೆ ತಿಂದರೆ ಜ್ವರ ಬರುತ್ತಾ!?

ಮೈಸೂರು ಮಿತ್ರ
ಶನಿವಾರ, 27 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಮನುಷ್ಯ ಮನೆ ಮನೆಯಲ್ಲೂ ಜನಿಸುತ್ತಾನೆ. ಆದರೆ ಮನುಷ್ಯತ್ವ ಎಂಬುದು ಕೆಲವರಲ್ಲಿ ಮಾತ್ರ ಜನಿಸಲು ಸಾಧ್ಯ.

ವೇದ ಸುಳ್ಳಾದರೂ { ಎತ್ತು ಏರಿಗೆಳೀತು,
ಗಾದೆ ಸುಳ್ಳಾಗದು { ಕೋಣ ನೀರಿಗೆಳೀತು.

ನಿಮ್ಮ ಪತ್ರಗಳು

■ ಎಸ್.ಎಲ್. ಭೈರಪ್ಪನವರು ವಿರಳದಲ್ಲಿ ವಿರಳ...

ಮಾನ್ಯರೆ,



ಕನ್ನಡದ ಖ್ಯಾತ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪನವರು ಕನ್ನಡ ಸಾರಸ್ವತ ಲೋಕದಿಂದ ಈಗ ದೂರ ಸರಿದಿದ್ದಾರೆ. ತಮ್ಮ ಬಹುತೇಕ ಕಾದಂಬರಿಗಳಲ್ಲಿ ಓದುಗರು ಕಾದಂಬರಿಯ ಲೋಕವನ್ನೇ ಪ್ರವೇಶಿಸಿದಂತೆ,ಒಳಗೊಳ್ಳುವಂತೆ ಅಲ್ಲಿನ ಪಾತ್ರಗಳು, ವಿಷಯಗಳನ್ನು ಹೆಣೆಯುತ್ತಿದ್ದರು. ವಂಶವೃಕ್ಷ, ನಾಯಿ ನೆರಳು, ಗೃಹ ಭಂಗ, ದಾಟು, ಪರ್ವ ಇದಕ್ಕೆ ಉದಾಹರಣೆಗಳು.

ಮೊನ್ನೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೆಂಗಳೂರಿನಲ್ಲಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡುತ್ತಾ, ಅವರ ಕಾದಂಬರಿಗಳು ಭಾರತ ಸೇರಿ ವಿಶ್ವದ 40 ಭಾಷೆಗಳಿಗೆ ಅನುವಾದಗೊಂಡಿವೆ. ಬಹುಶಃ ಭಾರತದ ಬೇರೆ ಯಾವ ಸಾಹಿತಿಗೂ ಇಂತಹ ಮನ್ನಣೆ ದೊರೆತಿಲ್ಲ ಎಂದು ಹೇಳಿದರು.ಇದೇ ಭೈರಪ್ಪನವರ ಜನಪ್ರಿಯತೆಗೆ ಸಾಕ್ಷಿ.

ಕನ್ನಡ ಸಾಹಿತ್ಯ ಲೋಕವು 8 ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿದೆ, ಇತ್ತೀಚೆಗೆ ಹಿಂದಿ ಭಾಷೆಯು 59ನೇ ಜ್ಞಾನಪೀಠ ಪ್ರಶಸ್ತಿಯನ್ನು ಗಳಿಸಿ 12 ಜ್ಞಾನ ಪೀಠ ಪಡೆದ ಭಾಷೆಯಾಯಿತು. ಖಾಸಗಿ ಸಂಶೋಧನೆ ಮತ್ತು ಸಾಂಸ್ಕೃತಿಕ ಸಂಸ್ಥೆ, ಭಾರತೀಯ ಜ್ಞಾನ ಪೀಠ ಹೆಸರಿನಲ್ಲಿ ಕೊಡ ಮಾಡುವ, ಭಾರತೀಯ ಸಾಹಿತ್ಯದ ಉತ್ಕೃಷ್ಠ ಪ್ರಶಸ್ತಿ ಯಾದ ಜ್ಞಾನಪೀಠ ಪ್ರಶಸ್ತಿ ಎಸ್.ಎಲ್. ಭೈರಪ್ಪನವರಿಗೆ ಸಿಗದಿರುವ ಬಗ್ಗೆ ನಾನು 'ಮೈಸೂರು ಮಿತ್ರ'ದಲ್ಲಿ ಪತ್ರ ಕೂಡ ಬರೆದಿದ್ದೆ.

ಜಗತ್ತಿನ ಎಲ್ಲಾ ಖಂಡಗಳನ್ನೂ ಸುತ್ತಿರುವ ಭೈರಪ್ಪನವರಿಗೆ ಜ್ಞಾನಪೀಠ ಪ್ರಶಸ್ತಿ ಬರಲಿಲ್ಲ. ಕೇವಲ ಒಂದು ಕಾದಂಬರಿ ಇಂಗ್ಲೀಷ್ ಭಾಷೆಗೆ ತರ್ಜುಮೆಗೊಂಡದ್ದಕ್ಕೇ ಕೆಲವರಿಗೆ ಬೂಕರ್ ಪ್ರಶಸ್ತಿ ಸಿಕ್ಕಿದೆ. ನೊಬೆಲ್ ಪ್ರಶಸ್ತಿ ಕೂಡ ದಕ್ಕಿದೆ,ಇಂಗ್ಲೀಷ್, ಸ್ಪಾನಿಷ್, ರಶಿಯನ್, ಚೀನಿ ಸೇರಿದಂತೆ ಜಗತ್ತಿನ 20ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡು ಸಾಹಿತ್ಯ ಪ್ರಿಯರಿಗೆ ಗೋಚರವಾದರೂ, ಅದು ಜ್ಞಾನಪೀಠ ಪ್ರತಿಷ್ಠಾನ, ಬೂಕರ್ ಪ್ರತಿಷ್ಠಾನ, ನೊಬೆಲ್ ಪ್ರತಿಷ್ಠಾನಗಳಿಗೆ ತಲುಪಲಿಲ್ಲ. ಇದಕ್ಕೆ ಅನೇಕ ಕಾರಣಗಳಿರಬಹುದು, ಜ್ಞಾನಪೀಠ ಪ್ರಶಸ್ತಿ, ನೊಬೆಲ್ ಪ್ರಶಸ್ತಿಗಾಗಿ ಲಾಬಿ ಮಾಡಿದವರು,ಲಾಬಿ ಮಾಡಿ ಪ್ರಶಸ್ತಿ ಪಡೆದವರೂ ಇರಬಹುದು. ಆದರೆ ಭೈರಪ್ಪನವರು ಬಲಪಂಥೀಯ ಲೇಖಕ ಎಂದು ತಿಳಿದು ಅವರನ್ನು ಪ್ರಶಸ್ತಿಗಳಿಂದ ದೂರವಿಟ್ಟರು. ಇದರಿಂದ ಪ್ರಶಸ್ತಿಗಳ ಮೌಲ್ಯ ಕಡಿಮೆಯಾಯಿತು. ಆದರೆ ಭೈರಪ್ಪನವರ ಅದಕ್ಕಿಂತ ಹೆಚ್ಚಿನ ಓದುಗರ ಗರಿಯನ್ನು ಮೂಡಿಗೇರಿಸಿ ಕೊಂಡಿದ್ದರು. ಮೂರ್ನಾಲ್ಕು ತಲೆಮಾರುಗಳ ಓದುಗರನ್ನು ಅವರು ಹೊಂದಿದ್ದಾರೆ. ಅವರ ಕಾದಂಬರಿಗಳು 70–75ಕ್ಕೂ ಹೆಚ್ಚು ಬಾರಿ ಮರು ಮುದ್ರಣ ಗೊಂಡಿವೆ ಎನ್ನುವುದು ಅವರ ಜನಪ್ರಿಯತೆಗೆ ಸಾಕ್ಷಿ. ಪ್ರಶಸ್ತಿಗಳಿಂದ ದೂರವೇ ಇದ್ದವರು ಅವರು, ಆದರೂ ಹಲವು ಪ್ರಶಸ್ತಿಗಳು ಅವರನ್ನು ಹುಡುಕಿ ಕೊಂಡು ಬಂದಿವೆ. ನನಗೆ ಪ್ರಶಸ್ತಿ ಸಿಗಲಿಲ್ಲ, ನನಗೆ ಪ್ರಶಸ್ತಿ ಕೊಡಿ ಎಂದು ಅಂಗಲಾಚುವವರ ಮಧ್ಯೆ ಎಸ್.ಎಲ್. ಭೈರಪ್ಪನವರಂತಹವರು ವಿರಳರಲ್ಲಿ ವಿರಳ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

■ ಭೈರಪ್ಪ ಸಾಹಿತ್ಯ ಲೋಕದ ಅನರ್ಘ್ಯ ರತ್ನ

ಮಾನ್ಯರೆ,

ಕನ್ನಡ ಸಾಹಿತ್ಯ ಲೋಕ ತನ್ನ ಅನರ್ಘ್ಯ ರತ್ನಗಳಲ್ಲಿ ಒಬ್ಬರಾದ ಡಾ. ಎಸ್.ಎಲ್. ಭೈರಪ್ಪ ಅವರನ್ನು ಕಳೆದುಕೊಂಡು ಬಡವಾಗಿದೆ. ಅವರು ಕೇವಲ ಬರೆದಿದ್ದಲ್ಲ, ಬದುಕಿದ್ದರು. ಅವರ ಬರಹಗಳಲ್ಲಿ ಜೀವನದ ಆಳವಾದ ಸತ್ಯ, ಸಂಕೀರ್ಣ ಸಂಬಂಧಗಳು ಮತ್ತು ಮೌಲ್ಯಗಳ ಅನಾವರಣವಿತ್ತು. ವಾರಾನ್ನದ ಬದುಕು ನಡೆಸಿ ಬಂದ ಹಿರಿಯ ಚೇತನ, ಕನ್ನಡ ಮಾತ್ರವಲ್ಲದೆ ಇಡೀ ಭಾರತೀಯ ಸಾಹಿತ್ಯ ಲೋಕಕ್ಕೆ ತಮ್ಮ ಕಾದಂಬರಿಗಳ ಮೂಲಕ ಅಕ್ಷರ ಮೃಷ್ಟಾನ್ನವನ್ನು ಉಣಬಡಿಸಿದರು. ಅವರ ಕಾದಂಬರಿಗಳು ಕೇವಲ ಮನರಂಜನೆಗೆ ಸೀಮಿತವಾಗದೆ, ಸಮಾಜದ ವಾಸ್ತವಗಳನ್ನು ಅನಾವರಣ ಗೊಳಿಸಿ, ಓದುಗರಿಗೆ ಒಂದು ಹೊಸ ದೃಷ್ಟಿಕೋನವನ್ನು ನೀಡಿದವು.

'ವಂಶವೃಕ್ಷ' ಕುಟುಂಬ ಸಂಬಂಧಗಳ ಸೂಕ್ಷ್ಮತೆಯನ್ನು ಕಟ್ಟಿಕೊಟ್ಟರೆ, ಬೃಹತ್ ಕಾದಂಬರಿ 'ಪರ್ವ'ಮಹಾಭಾರತದ ಮೌಲ್ಯಗಳನ್ನು ಹೊಸ ದೃಷ್ಟಿಯಲ್ಲಿ ನೋಡುವಂತೆ ಮಾಡಿತು. 'ಆವರಣ' ಸಮಾಜದ ಸೂಕ್ಷ್ಮ ವಿಚಾರಗಳ ಬಗ್ಗೆ ಚರ್ಚೆಯನ್ನು ಹುಟ್ಟುಹಾಕಿ, ಓದುಗರನ್ನು ಚಿಂತನೆಗೆ ಹಚ್ಚಿದವು. ಹೀಗೆ, ತಮ್ಮ ಬದುಕಿನುದ್ದಕ್ಕೂ ಮೌಲ್ಯಬದ್ಧ ಜೀವನ ನಡೆಸಿ, ತಮ್ಮ ಬರಹಗಳ ಮೂಲಕ ಅಸಂಖ್ಯಾತ ಓದುಗರ ಹೃದಯದಲ್ಲಿ ಸ್ಥಾನ ಪಡೆದಿರುವ ಈ ಹಿರಿಯ ಚೇತನದ ನಿರ್ಗಮನ ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟ, ಭಗವಂತನು ಆ ಮಹಾನ್ ಚೇತನಕ್ಕೆ ಶಾಂತಿ ಕರುಣಿಸಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಭೈರಪ್ಪನವರ ಕೊಡುಗೆ ಅವಿಸ್ಮರಣೀಯ

ಮಾನ್ಯರೆ,

ಕನ್ನಡ ಸಾರಸ್ವತ ಲೋಕದ ಮಹಾನ್ ದಿಗ್ಗಜ, ಮೇರು ಸಾಹಿತಿ , ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಎಸ್.ಎಲ್.ಭೈರಪ್ಪನವರ ನಿಧನದಿಂದಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ನಷ್ಟವುಂಟಾಗಿದೆ. 94 ವರ್ಷಗಳ ತುಂಬು ಜೀವನ ನಡೆಸಿದ ಭೈರಪ್ಪನವರು ಯಾವುದೇ ವಿವಾದಗಳಿಗೆ ಗುರಿಯಾಗದೇ ತಮ್ಮದೇ ತತ್ವ–ಸಿದ್ಧಾಂತಗಳಿಗೆ ಬದ್ಧರಾಗಿ ತಮ್ಮ ಅಪಾರ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ ಧೀಮಂತ ಸಾಹಿತಿ.

ವಂಶವೃಕ್ಷ, ಗೃಹಭಂಗ, ನೆಲೆ, ಸಾಕ್ಷಿ, ನಾಯಿ ನೆರಳು, ಮತದಾನ, ದಾಟು, ಪರ್ವ, ನಿರಾಕರಣ ಸೇರಿದಂತೆ ಅವರ ಬಹುತೇಕ ಕಾದಂಬರಿಗಳು ಚಲನಚಿತ್ರವಾಗಿ, ಕಿರು ತೆರೆ ಧಾರವಾಹಿಯಾಗಿ ಹೊರಹೊಮ್ಮುವ ಮೂಲಕ ಹಲವು ಪ್ರಶಸ್ತಿಗಳಿಗೆ ಭಾಜನವಾಗಿವೆ.

ಎಸ್.ಎಲ್.ಭೈರಪ್ಪನವರ ಕೃತಿಗಳೆಂದರೆ ಚಿನ್ನದ ಖಣಿಗಳಿದ್ದಂತೆ, ಅವರ ಕಾದಂಬರಿಗಳು ಓದುಗರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗಿದ್ದವು. ಸಮಾಜದಲ್ಲಿ ನಡೆಯುವ ದೃಷ್ಟಾಂತ ಗಳನ್ನೆ ವಿಷಯವಾಗಿಟ್ಟುಕೊಂಡು ಬರೆಯುತ್ತಿದ್ದ ಅವರ ಕೃತಿ ಓದುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದವು. ಕನ್ನಡ ಸಾಹಿತ್ಯ ಲೋಕಕ್ಕೆ ಎಸ್ ಎಲ್ ಭೈರಪ್ಪನವರು ನೀಡಿರುವ ಕೊಡುಗೆ ಸದಾ ಅವಿಸ್ಮರಣೀಯ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.


■ ದಸರಾ ನಿರ್ಗತಿಕ ಕುಟುಂಬಗಳ ಬದುಕಿಗೆ ಆಧಾರ

ಮಾನ್ಯರೆ,

ರಸ್ತೆಯ ಆಸುಪಾಸಿನಲ್ಲಿ ಕೆಲವು ವಸ್ತುಗಳನ್ನು ಮಾರಿ ತಮ್ಮ ಜೀವನ ಕಟ್ಟಿಕೊಳ್ಳಲು ದೂರದ ಊರು, ನಗರಗಳಿಂದ ನೂರಾರು ಕುಟುಂಬಗಳು ಬಂದಿವೆ. ನಮ್ಮ ಸಾಂಸ್ಕೃತಿಕ ನಗರಿ, ತಾಯಿ ಚಾಮುಂಡೇಶ್ವರಿಯ ತವರೂರು ಮೈಸೂರಿನಲ್ಲಿ ಇಂತಹ ನಿರ್ಗತಿಕ ಕುಟುಂಬಗಳಿಗೆ ನಾವೆಲ್ಲರೂ ಸಹಾಯ ಮಾಡಿದಲ್ಲಿ ಅವರ ಬದುಕಿನ ದಿಕ್ಕೆ ಬದಲಾಗಿ ಒಂದೊಳ್ಳೆ ಬದುಕು ಕಟ್ಟಿಕೊಳ್ಳುವ ಹಾದಿಹೆಡೆಗೆ ಸಾಗುತ್ತದೆ.

– ಮಂಜೇಶ್ ದೇವಗಳ್ಳಿ, ಮೈಸೂರು.

ಅರಿತು ಬಾಳಿದರೆ ಬದುಕಿಗೂ ಅರ್ಥ!



" ಅರ್ಧಂಬರ್ಧ ಕಲಿತವರು, ಪೂರ್ಣ ಕಲಿತವರು ಎಂಬ ವರ್ಗೀಕರಣವೇ ತಪ್ಪು, ಏಕೆಂದರೆ ಪೂರ್ಣವಾಗಿ ಕಲಿತವರು ವಿಶ್ವದಲ್ಲಿ ಯಾರೂ ಇಲ್ಲವಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ ಅರ್ಧವನ್ನು ಕೂಡ ಕಲಿತಿರುವುದಿಲ್ಲ. ಕಲಿತೆವೆಂದು ಅಷ್ಟಕ್ಕೇ ವಿರಾಮ ನೀಡಲಾಗುವುದಿಲ್ಲ. ಏಕೆಂದರೆ ಕಲಿಕೆ ನಿರಂತರ, ಕಲಿತಷ್ಟು ಇನ್ನಷ್ಟು ಕಲಿಯಬೇಕು ಎನ್ನುವ ಕಾತುರತೆ ಹೆಚ್ಚಿರುತ್ತದೆ. ಪೂರ್ಣವಾಗಿ ಕಲಿತವರು ಯಾರೂ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಇದ್ದರೂ ಇರಬಹುದು ಎನ್ನುವುದು ಸಾಧ್ಯವಿಲ್ಲದ್ದು ಹಾಗೂ ಸಾಧಿಸಲಾಗದ್ದು.


ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ನನಗೆ ಎಲ್ಲಾ ಗೊತ್ತಿದೆ ಎನ್ನುವ ಜನರೇ ಸಮಾಜದಲ್ಲಿ ತುಂಬಿ ತುಳುಕುತ್ತಿದ್ದಾರೆ. ಅದರಲ್ಲೂ ತಿಳಿಯದೆಯೂ ತಿಳಿದಂತೆ ವರ್ತಿಸುವ ಇವರು 'ಅಹಂ'ನ್ನೂ ಕೂಡ ತಮ್ಮ ತಲೆಯಲ್ಲಿ ಯಥೇಚ್ಚವಾಗಿ ತುಂಬಿಕೊಂಡಿದ್ದಾರೆ. 'ನಿನಗೆ ಗೊತ್ತಿಲ್ಲದ ವಿಚಾರವನ್ನು ಗೊತ್ತಿಲ್ಲ ಎಂದು ನಮ್ರನಾಗಿ ಒಪ್ಪಿಕೊ, ಅದೇ ನಿನ್ನ ಜ್ಞಾನಕಿಂಡಿಯನ್ನು ತೆರೆಯಬಲ್ಲದು' ಎಂದು ಕನ್‌ಫ್ಯೂಶಿಯಸ್ ಎಂಬ ಚೀನಿ ಚಿಂತಕ ಹೇಳಿರುವುದರಲ್ಲಿ ಬಹಳಷ್ಟು ಅರ್ಥವಿದೆ, ವಿನಯವಿದೆ ಮತ್ತು ಜ್ಞಾನಾರ್ಜನೆಗೆ ದಾರಿ ಇದೆ. ವಿನಯವಂತಿಕೆ ನಮ್ಮನ್ನು ಕಲಿಯುವಂತೆ ಮಾಡುತ್ತದೆ, ಕಲಿತವನು ಬದುಕಿನಲ್ಲಿ ಯಾವುದಕ್ಕೂ ಅಂಜುವ ಪ್ರಮೇಯವೇ ಇರುವುದಿಲ್ಲ.

ಕಲಿತೆವೆಂದು ಅಷ್ಟಕ್ಕೇ ವಿರಾಮ ನೀಡಲಾಗುವುದಿಲ್ಲ. ಏಕೆಂದರೆ ಕಲಿಕೆ ನಿರಂತರ, ಕಲಿತಷ್ಟು ಇನ್ನಷ್ಟು ಕಲಿಯಬೇಕು ಎನ್ನುವ ಕಾತುರತೆ ಹೆಚ್ಚಿಸುತ್ತದೆ. ಪೂರ್ಣವಾಗಿ ಕಲಿತವರು ಯಾರೂ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಇದ್ದರೂ ಇರಬಹುದು ಎನ್ನುವುದು ಸಾಧ್ಯವಿಲ್ಲದ್ದು ಹಾಗೂ ಸಾಧಿಸಲಾಗದ್ದು.

ಅರ್ಧಂಬರ್ಧ ಕಲಿತವರು ಪೂರ್ಣ ಕಲಿತವರು ಎಂಬ ವರ್ಗೀಕರಣವೇ ತಪ್ಪು, ಏಕೆಂದರೆ ಪೂರ್ಣವಾಗಿ ಕಲಿತವರು ವಿಶ್ವದಲ್ಲಿ ಯಾರೂ ಇಲ್ಲವಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ ಅರ್ಧವನ್ನು ಕೂಡ ಕಲಿತಿರುವುದಿಲ್ಲ.

ನಾನತ್ವದ ದುರಹಾಂಕಾರಿಗಳಿಗೆ ಅರ್ಧಂಬರ್ಧ ಕಲಿತವರೆಂದು, ವಿನಯವಂತರಿಗೆ ಮತ್ತು ಬೇರೆಯವರ ಅಭಿಪ್ರಾಯಕ್ಕೂ ಮನ್ನಣೆ ಕೊಡುವವರನ್ನು ಪೂರ್ಣವಾಗಿ ಕಲಿತವರೆಂದು ನಿರ್ಧರಿಸಬಹುದಷ್ಟೆ. ರಕ್ತಮಾಂಸ ನರವ್ಯೂಹಗಳಿಂದ ಕೂಡಿದ ಈ ದೇಹ ರಚನೆ ಒಂದೇ ತರನಾಗಿ ಸೃಷ್ಟಿಸಲ್ಪಟ್ಟಿದೆ. ಆದರೆ ಕಲಿಕೆಯಲ್ಲಿ ಎಷ್ಟೊಂದು ವ್ಯತ್ಯಾಸವಿದೆ, ಈ ವ್ಯತ್ಯಾಸಕ್ಕೆ ಕಾರಣಗಳನ್ನು ಹುಡುಕುವುದು ಕಷ್ಟ.

ಎಲ್ಲಾ ಕೋನಗಳಿಂದಲೂ ಸರಿಸಾಟಿ ಆಗದ, ಅಟ್ಟಹಾಸ ಗೈಯ್ಯುವ ದುರಹಾಂಕಾರಿಗಳನ್ನು ಹಲವು ಬಾರಿ ಎದುರಿಸಿ ಮನನೊಂದು ಅದುವೇ ಈ ಲೇಖನದ ವಸ್ತುವಾದದ್ದು ನನಗೊಂದು ಲಾಭವಾಯ್ತು. ನನ್ನಂತೆಯೆ ಗರ್ವಿಗಳ, ದುರಹಾಂಕಾರಿಗಳ ಮಾತಿಗೆ ಆಹಾರವಾಗಿ ನೊಂದಿರುವ ಸಾಕಷ್ಟು ಓದುಗರಿಗೆ ಇದು ಸಾಂತ್ವನ ನೀಡುವ ಲೇಖನವಾದೀತು.

ಅಹಂ ಮತ್ತು ನಾನತ್ವ ಅಧಿಕಾರದಲ್ಲಿ ಇರುವವರೆಗೆ ಹೆಚ್ಚು ಇರುವುದರಲ್ಲಿ ಸಂಶಯವಿಲ್ಲ. ಅಧಿಕಾರದ ಹಂತ ಮೇಲ್ದರ್ಜೆಗೆ ಏರಿದಂತೆ ನಾನತ್ವ, ದರ್ಪ, ಅಹಂಕಾರ ಮತ್ತು ಗರ್ವದ ಪ್ರಮಾಣವು ಕೂಡ ಹೆಚ್ಚುವುದನ್ನು ಸಾಮಾನ್ಯವಾಗಿ ಸರ್ಕಾರಿ ಉದ್ಯೋಗಿಗಳಲ್ಲಿ ಮತ್ತು ಕಂಪನಿಗಳಲ್ಲಿ ಕೆಲಸ ಮಾಡುವವರಲ್ಲಿ ಕಂಡು ಬರುತ್ತದೆ.

ಮೊನ್ನೆಮೊನ್ನೆ ವರೆಗೂ ಜೊತೆಯಲ್ಲೇ ಸರಿಸಮನಾದ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಆ ಹುದ್ದೆಯಲ್ಲಿ ಆತ ಕಡಿದು ಗುಡ್ಡೆ ಹಾಕಿರುವುದು ಅಷ್ಟರಲ್ಲೇ. ಸೀನಿಯಾರಿಟಿ, ಸ್ಪರ್ಧಾತ್ಮಕ ಪರೀಕ್ಷೆ ಅಥವಾ ಮೀಸಲಾತಿಯ ಕಾರಣದಿಂದ ಬಡ್ತಿ ಹೊಂದಿ ಮೇಲಿನ ಹಂತದ ಹುದ್ದೆಗೆ ಹೋದಾಗ ಅವನ ನಡವಳಿಕೆ, ಹಾವಭಾವಗಳು ತಕ್ಷಣ ಬದಲಾಗುವುದನ್ನು ಕಾಣುತ್ತೇವೆ. ಅವನಿಗಿಂತ ಬುದ್ದಿವಂತನಾಗಿದ್ದು, ಕಾರ್ಯಕ್ಷಮತೆ ಇದ್ದ ಜೊತೆಗಾರನನ್ನು ಅಧೀನಾಧಿಕಾರಿ ಎಂಬ ಕಾರಣಕ್ಕೆ ಅಣಕಿಸುವುದನ್ನು ಸ್ವತಃ ಅನುಭವಿಸಿದ್ದೇವೆ ಮತ್ತು ನೋಡುತ್ತಿದ್ದೇವೆ.

ಕುಟುಂಬದಲ್ಲು ಇದೇ ರೀತಿಯಾದ ಪರಿವರ್ತನೆಯನ್ನು ಕಾಣಬಹುದಾಗಿದೆ, ಅಪ್ಪನು ಮಕ್ಕಳನ್ನು ನಡೆಸಿಕೊಳ್ಳುವ ರೀತಿ, ಇದೇ ಮಕ್ಕಳು ಮುಂದೆ ಅಪ್ಪನಾಗಿ ಬೆಳೆದಾಗ ಅವನ ಮಕ್ಕಳನ್ನು ನಡೆಸಿಕೊಳ್ಳುವ ರೀತಿ. ಅಷ್ಟೇಕೆ ಶಾಲಾ ಕಾಲೇಜುಗಳಲ್ಲಿ ಗುರುಗಳಾದವರು ವಿದ್ಯಾರ್ಥಿಗಳಿಗೆ ಪಾಠಪ್ರವಚನ ಕಲಿಕೆಯಲ್ಲಿ ಇನ್ನಿಲ್ಲದ ಹಿಂಸೆ ಕೊಡುವುದನ್ನು ವಿದ್ಯಾರ್ಥಿಗಳಾಗಿ ಎಲ್ಲರೂ ಅನುಭವಿಸಿದ್ದೇವೆ. ತಾವು ಸಾಮಾನ್ಯ ದರ್ಜೆಯಲ್ಲಿ ಪಾಸಾಗಿರುತ್ತಾರೆ. ಹಲವು ಶಿಕ್ಷಕರು ನಾಲ್ಕಾರು ಬಾರಿ ಫೇಲಾಗಿ ಪಾಸಾಗಿದ್ದರೂ ಗುರುಗಳೆಂಬ ಕಾರಣಕ್ಕೆ ಮಕ್ಕಳನ್ನು ಹೆಚ್ಚು ಅಂಕ ಗಳಿಸುವಂತೆ ಪೀಡಿಸಿ ಮಾನಸಿಕ ಒತ್ತಡಕ್ಕೆ ಕಾರಣಕರ್ತರಾಗುವರು.

ಒಬ್ಬ ವಿದ್ಯಾರ್ಥಿಗೆ ಪರೀಕ್ಷೆಗಳನ್ನು ಎದುರಿಸುವ ಕ್ರಿಯೆ ತನ್ನ ಮೂರನೇ ವಯಸ್ಸಿಗೆ ಬೇಬಿಸಿಟ್ಟಿಂಗ್ ನಲ್ಲಿ ಪ್ರಾರಂಭವಾದದ್ದು ಪದವಿ ಪಡೆಯುವವರೆಗೆ, ಬೆಳೆಯುವ ವಯಸ್ಸು ಮುಗಿಯುವವರೆಗೂ ನಿರಂತರವಾಗಿ ಕಾಡುತ್ತಿರುತ್ತದೆ. ಮಾನಸಿಕವಾಗಿ ಕುಗ್ಗಲು ಮತ್ತು ಬದುಕಿರುವವರೆಗೆ ಜೀವಂತವಾಗಿ ಕಿತ್ತು ತಿನ್ನುವ ಕೆಲವು ರೋಗಗಳು ಅತೀ ಹೆಚ್ಚು ಜನರಲ್ಲಿ ಇಂದು ಕಾಣಬರುತ್ತಿರುವುದಕ್ಕೆ ಈ ಪರೀಕ್ಷೆ ಎಂಬ ಗುಮ್ಮವು ಕಾರಣ ಇರಬಹುದೆ?.

ಪರೀಕ್ಷೆಗಳನ್ನು ಎದುರಿಸಿ ಹೆಚ್ಚು ಅಂಕಗಳನ್ನು ಪಡೆದು ಡಿಸ್ಟಿಂಕ್ಷನ್‌ನಲ್ಲಿ ಪಾಸಾದವರು ಮತ್ತು ಅವರ ಪೋಷಕರು ಫೇಲಾದ ಮತ್ತು ಕಡಿಮೆ ಅಂಕ ಗಳಿಸಿ ಪಾಸಾದವರನ್ನು ಕಾಣುವ ಪರಿ ಬೇರೆಯದೇ ಆಗಿರುತ್ತದೆ. ಕೆಲವೇ ದಿನಗಳಲ್ಲಿ ವಿದ್ಯಾರ್ಥಿಯ ಬದುಕಿನ ತಿರುವುಗಳಾದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳು ಮುಗಿದು ಫಲಿತಾಂಶ ಬರುವುದಿದೆ. ಆ ಸಂದರ್ಭಕ್ಕೆ ಮಕ್ಕಳು ಮತ್ತು ಪೋಷಕರ ವರ್ತನೆಗಳು ವಿಭಿನ್ನವಾಗಿರುತ್ತವೆ. ಹೆಚ್ಚು ಅಂಕ ಗಳಿಸಿದವರು ಕಡಿಮೆ ಅಂಕ ಗಳಿಸಿದವರನ್ನು ನಿಕೃಷ್ಟವಾಗಿ ಕಾಣುವ ಕೆಟ್ಟ ಗುಣದ ಕಾರಣದಿಂದಾಗಿ ಕೆಲವು ಮಕ್ಕಳು ಪ್ರಾಣ ಕಳೆದುಕೊಳ್ಳುವುದು ಪ್ರತೀ ವರ್ಷ ಸಹಜವಾಗಿ ಸಂಭವಿಸುತ್ತಿದೆ.

ಮನುಷ್ಯನಲ್ಲಿ ನಾನತ್ವದ ಗುಣವು ಮೇಲಾದಾಗ ದುರ್ಘಟನೆಗಳಿಗೆ ಕಾರಣವಾಗುವುದು. ಎಲ್ಲಾ ಕ್ಷೇತ್ರಗಳಲ್ಲಿ ಇರುವ ಈ ಭೂತ ಬಹುಶಃ ನಾಶವಾಗದು. ಇದನ್ನು ತಡೆಯುವುದು ಮತ್ತು ಎದುರಿಸುವುದು ನಮ್ಮ ಮನಸ್ಸಿಗೆ ಒಂದು ಸವಾಲು. ಮನಸ್ಸನ್ನು ನಿಯಂತ್ರಿಸುವ ತಂತ್ರಗಳನ್ನು ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಾಧನದಿಂದ ಮಾತ್ರ ಸಾಧ್ಯ.

ಆದಿ ಮತ್ತು ಅಂತ್ಯದಲ್ಲಿ ಎಲ್ಲರೂ ಒಂದೇ, ಇಲ್ಲಿ ವರ್ಗ ಸಂಘರ್ಷವಿಲ್ಲ. ಮೇಲುಕೀಳಿನ ಭಾವನೆ ಇಲ್ಲ. ಏಕೆಂದರೆ ಆದಿಗೂ ಯೋಚಿಸುವ ಸಾಮರ್ಥ್ಯವಿಲ್ಲ ಅಂತ್ಯಕ್ಕೂ ಇರುವುದಿಲ್ಲ. ಮನುಷ್ಯನಲ್ಲಿ ಯೋಚನಾ ಶಕ್ತಿ ಇರುವಷ್ಟು ಕಾಲ ಮೆರೆಯುತ್ತಾನೆ. ಮೆರೆಯುವಾಗ ಮತ್ತೊಬ್ಬರ ಹಿತಾಸಕ್ತಿಯನ್ನು ಪರಿಗಣಿಸಿದರೆ ಆತ ಯೋಗ್ಯನೆನಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಮೊದಲೇ ಹೇಳಿದಂತೆ ಕೆಟ್ಟವನು, ಅಹಂಕಾರಿ, ದುಷ್ಟ, ದುರುಳ..... ಇತ್ಯಾದಿ ಋಣಾತ್ಮಕ ಗುಣವುಳ್ಳವನಾಗುತ್ತಾನೆ.

ಜೋರು ಮಳೆ ಬಿದ್ದರೂ ಕೆರೆಗಳು ತುಂಬುವುದಿಲ್ಲ, ತುಂಬಿದರೂ ನೀರು ನಿಲ್ಲುವುದಿಲ್ಲ. ಏಕೆಂದರೆ ಕೆರೆಯೊಡೆದು ಪೋಲಾಗುವುದು ನಿರ್ವಹಣೆ ಇಲ್ಲದೆ. ನಮ್ಮ ಬುದ್ದಿಯೂ ಹಾಗೆಯೇ ಇದೆ. ಅದೇ ರೀತಿಯಾಗಿ ತುಂಬಿದ ಕೊಡ ತುಳುಕುವುದಿಲ್ಲ. ಹೌದು, ಖಾಲಿ ಕೊಡವೂ ತುಳುಕುವುದಿಲ್ಲ, ನಲ್ಲಿಯಲ್ಲಿ ನೀರು ಬಂದು ಕೊಡ ತುಂಬಿದರೆ ಅದು ತುಳಕದು, ನೀರಿಗಾಗಿ ನಲ್ಲಿಯ ಕೆಳಗೆ ಕಾದು ಕುಳಿತ ಖಾಲಿ ಕೊಡದ ಸ್ಥಿತಿಯೂ ಅದೇ ಆಗಿರುತ್ತದೆ. ಯಾವುದೂ ತುಳುಕುವುದಿಲ್ಲ. ಮರೆತೆ, ಅರ್ಧ ತುಂಬಿದ ಕೊಡ ತುಳುಕುವುದೆಂದು ಗಾದೆಯಲ್ಲಿ ಕೇಳಿದ್ದೇನೆ ಅದನ್ನು ಅಲುಗಾಡಿಸುವವನು ಇದ್ದಾಗ ಈ ಸಮಸ್ಯೆ ಅಲ್ಲವೇ?, ತುಂಬಿದ್ದನ್ನು ಅಲ್ಲಾಡಿಸಿದರೆ ಅದು ಸಹ ತುಳುಕುವುದು.

ಬುದ್ದಿವಂತ–ದಡ್ಡ, ಮೇಲು–ಕೀಳು, ಹೆಣ್ಣು–ಗಂಡು, ಅಧಿಕಾರಸ್ಥ–ನಿರಧಿಕಾರಸ್ಥ, ವಿದ್ಯಾವಂತ–ಅವಿದ್ಯಾವಂತ, ಬಡವ–ಶ್ರೀಮಂತ....., ಇತ್ಯಾದಿ ಎಲ್ಲವಕ್ಕೂ ಬೆಲೆ ಇಲ್ಲ, ಎಲ್ಲವೂ ಒಂದೇ. ಸಮಯ–ಸಂದರ್ಭಗಳು ನಮ್ಮನ್ನು ವಿಭಿನ್ನ ಪಾತ್ರಧಾರಿಗಳನ್ನಾಗಿ ಮಾಡುತ್ತವೆ. ಸಜ್ಜನರನ್ನು ಮತ್ತು ದುರ್ಜನರನ್ನು ಅಂತ್ಯ ಕಾಲದಲ್ಲಿ ಹೇಗೆ ನೋಡುವರು ಎನ್ನುವುದಕ್ಕೆ ಸಾಯುವವರೆಗೂ ಕಾಯಬೇಕಾಗಿಲ್ಲ. ನಿವೃತ್ತನಾದ ಒಬ್ಬ ದುರಹಂಕಾರಿ ಅಧಿಕಾರಿಯ ನಿವೃತ್ತ ಬದುಕನ್ನು ನೋಡಿದರೆ ಗೊತ್ತಾಗುವುದು. ಬದುಕಿನಲ್ಲಿ ನಾನತ್ವ ಹಾಗೂ ಅಹಂಕಾರವನ್ನು ಮೈಗೂಡಿಸಿಕೊಂಡಿದ್ದರ ಪರಿಣಾಮವು ಕಡೆಯಲ್ಲಿ ಯಾವಾಗಲೂ ದುರಂತವೆ ಆಗಿರುತ್ತದೆ.

ಲೇಖನವನ್ನು ಓದಿದ ಬಳಿಕ ನಿಮ್ಮೊಳಗಿನ ಚಿಂತನೆಯಲ್ಲಿ ಬದಲಾವಣೆ ಕಂಡರೆ ನನ್ನ ಉದ್ದೇಶ ಸಾರ್ಥಕವಾದಂತೆ. ಪರಿವರ್ತನೆ ಆಗಿದ್ದರೆ ಈಗಲೇ ಬಿಡೋಣ ನಮ್ಮಲ್ಲಿರುವ ಅಹಂ, ದರ್ಪ, ನಾನತ್ವಗಳನ್ನು, ಬದುಕೋಣ ಮನುಷ್ಯರ ಜೊತೆ ಮನುಷ್ಯರಾಗಿ.

ಮುಜರಾಯಿ ಇಲಾಖೆ ವ್ಯಾಪ್ತಿಯ ಯಾವ ದೇವಸ್ಥಾನವನ್ನೂ ಮುಕ್ತ ಮಾಡಲ್ಲ; ಧರ್ಮಸ್ಥಳ ಇಲಾಖಾ ವ್ಯಾಪ್ತಿಗೆ ತರಲ್ಲ

ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ

ಬೆಂಗಳೂರು, ಸೆ.26(ಕೆಎಂಶಿ)–ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿನ ಯಾವುದೇ ದೇವಾಲಯಗಳನ್ನು ಮುಕ್ತಗೊಳಿಸುವುದಿಲ್ಲ ಎಂದು ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ರಾಮಲಿಂಗಾ ರೆಡ್ಡಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರು ರಾಷ್ಟ್ರಾದ್ಯಂತ ಹೊಸ ಕಾನೂನು ತಂದು ಇಲಾಖೆ ವ್ಯಾಪ್ತಿಯಿಂದ ದೇವಾಲಯಗಳನ್ನು ಹೊರಗಿಡುವ ಕೆಲಸ ಮಾಡಲಿ ಎಂದರು.

ಈ ಹಿಂದೆ ಧಾರ್ಮಿಕ ದತ್ತಿ ಇಲಾಖೆ ಇರಲಿಲ್ಲ. ಅನುವಂಶಿಕವಾಗಿ ನಡೆದು ಬರುತ್ತಿತ್ತು. ಆ ಸಂದರ್ಭದಲ್ಲಿ ಕಿತ್ತಾಟಗಳು ನಡೆದು ಪೂಜೆ ಮಾಡುವ ಕುಟುಂಬಗಳ ಮಧ್ಯೆ ವಿವಾದ ಉಂಟಾಗುತ್ತಿತ್ತು.

ಈ ಗೊಂದಲದಿಂದ ಬಹಳಷ್ಟು ದೇಗುಲಗಳಿಗೆ ತೊಂದರೆ ಎದುರಾಗಿತ್ತು, ಇದನ್ನು ಗಮನದಲ್ಲಿ ಇಟ್ಟುಕೊಂಡು ಮುಜರಾಯಿ ಇಲಾಖೆ ವ್ಯಾಪ್ತಿಗೆ ದೇವಾಲಯಗಳನ್ನು ತರಲಾಯಿತು. ವಿಶ್ವ ಹಿಂದೂ ಪರಿಷತ್ ಯಾವ ಉದ್ದೇಶಕ್ಕಾಗಿ ಮುಜರಾಯಿ ವ್ಯಾಪ್ತಿಯಿಂದ ದೇವಾಲಯಗಳನ್ನು ಹೊರಗಿಡಬೇಕೆಂಬ ಹೋರಾಟ ನಡೆಸುತ್ತಿದೆಯೋ ತಿಳಿಯದು, ಆದರೆ, ನಾವು ಮಾತ್ರ ಇಲಾಖಾ ವ್ಯಾಪ್ತಿ ದೇವಸ್ಥಾನಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆ ಎಂದರು. ಮುಜರಾಯಿ ಇಲಾಖೆ ಅರ್ಚಕರಿಗೆ 10 ಲಕ್ಷ ರೂ. ವಿಮೆ, ಅವರ ಮಕ್ಕಳಿಗೆ ಶಿಕ್ಷಣ, 'ಸಿ' ಗ್ರೇಡ್ ದೇಗುಲಗಳಿಗೆ ಇತ್ತು. ಇದಕ್ಕಾಗಿ ಮಸೂದೆ ತರಲು ಮುಂದಾದಾಗ ಬಿಜೆಪಿ ವಿರೋಧಿಸಿತ್ತು, ನಾವು ಅದನ್ನು ಹಾಗೇ ಬಿಟ್ಟೆವು, ಅವರು ಮಾಡಲ್ಲ, ನಾವು ಮಾಡಲು ಬಿಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರ್ಮಸ್ಥಳ ಕ್ಷೇತ್ರವನ್ನು ಮುಜರಾಯಿ ಇಲಾಖೆ ವ್ಯಾಪ್ತಿಗೆ ತರುವ ಉದ್ದೇಶವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ದಸರಾ ವೇಳೆ ಮೈಸೂರು ಸ್ವಚ್ಛ, ಸುಂದರ

ಇದಕ್ಕಾಗಿ ಸ್ವಚ್ಛತಾ ವಿಶೇಷ ಅಭಿಯಾನ



ಮೈಸೂರು ಮಹಾನಗರ ಪಾಲಿಕೆ ಹಳೆ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪಸಮಿತಿ ಅಧ್ಯಕ್ಷ ಸುಭಾನ್ ಮಾತನಾಡಿದರು.

ಮೈಸೂರು,ಸೆ.26(ಎಂಟಿವೈ)– ದಸರಾ ಮಹೋತ್ಸವದಲ್ಲಿ ಮೈಸೂರು ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರೊಂದಿಗೆ ಹೆಚ್ಚುವರಿಗೆ 500 ಮಂದಿ ಸ್ವಚ್ಛತಾ ಸಿಬ್ಬಂದಿ ಮೂರು ಪಾಳಿಯಲ್ಲಿ ದಿನದ 24 ಗಂಟೆಯೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪಸಮಿತಿ ಅಧ್ಯಕ್ಷ ಸುಭಾನ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಶುಕ್ರವಾರ ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪ ಸಮಿತಿಯ ಸದಸ್ಯರು ಪದಾಧಿಕಾರಿಗಳು ಹಾಗೂ ಸದಸ್ಯರ ಸಭೆಯಲ್ಲಿ ಅಧಿಕಾರಿಗಳು ಸ್ವಚ್ಛತಾ ವಿಶೇಷ ಅಭಿಯಾನ ಕುರಿತು ನೀಡಿದ ಮಾಹಿತಿ ಪಡೆದರು.

ಸಭೆಯಲ್ಲಿ ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪಸಮಿತಿ ಕಾರ್ಯಾಧ್ಯಕ್ಷ ದಾಸೇಗೌಡ ಮಾತನಾಡಿ, ನಾಡಹಬ್ಬ ದಸರಾ ಮಹೋತ್ಸವದಲ್ಲಿ ಮೈಸೂರು ನಗರವನ್ನ ಸ್ವಚ್ಛ ಹಾಗೂ ಸುಂದರ ನಗರವನ್ನಾಗಿಸಲು ಮಹಾನಗರ ಪಾಲಿಕೆ ಹಾಗೂ ಸ್ವಚ್ಛತಾ ದಸರಾ ಉಪಸಮಿತಿ ವತಿಯಿಂದ ಸೆ22ರಿಂದ ಅ.4ರವರೆಗೆ ಸ್ವಚ್ಛತಾ ವಿಶೇಷ ಅಭಿಯಾನ ನಡೆಸಲಾಗುತ್ತಿದೆ. ಮಹಾನಗರ ಪಾಲಿಕೆಯ 2 ಸಾವಿರ ಪೌರಕಾರ್ಮಿಕರೊಂದಿಗೆ ನಾಲ್ಕು ಪ್ಯಾಕೇಜ್‌ಗಳಲ್ಲಿ 500 ಮಂದಿ ಹೆಚ್ಚುವರಿ ಸ್ವಚ್ಛತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ನಾಲ್ಕು ಪಾಳಿಗಳಲ್ಲಿ ಸಿಬ್ಬಂದಿಯನ್ನು ವಿಂಗಡಿಸಿ, ಸ್ವಚ್ಛತಾ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ ಎಂದರು.

ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪ ಸಮಿತಿ ಅಧ್ಯಕ್ಷ ಸುಭಾನ್ ಮಾತನಾಡಿ, ಸ್ವಚ್ಛತಾ ವಿಶೇಷ ಅಭಿಯಾನದಲ್ಲಿ ನಾಲ್ಕನೇ ಪ್ಯಾಕೇಜ್‌ನಲ್ಲಿ 200 ಮಂದಿ, ಉಳಿದ 1ರಿಂದ 3 ಪ್ಯಾಕೇಜ್‌ಗಳಲ್ಲಿ ತಲಾ 100 ಮಂದಿ ಸ್ವಚ್ಛತಾ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಪ್ಯಾಕೇಜ್ 1–3ರ ಸಿಬ್ಬಂದಿ ಮೈಸೂರಿನ ಮುಖ್ಯ ರಸ್ತೆಯನ್ನು ಸ್ವಚ್ಛಗೊಳಿಸಲಿದ್ದಾರೆ. ಪ್ಯಾಕೇಜ್ 4ರ ಸಿಬ್ಬಂದಿ ದಸರಾ ಕಾರ್ಯಕ್ರಮ ನಡೆಯುವ ವೇದಿಕೆ ಹಾಗೂ ಸ್ಥಳದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮೊದಲ ಪಾಳಿಯಲ್ಲಿ ಸ್ವಚ್ಛತಾ ಸಿಬ್ಬಂದಿ ಬೆಳಗ್ಗೆ 6ರಿಂದ ಮಧ್ಯಾಹ್ನ 2 ಗಂಟೆ, ಎರಡನೇ ಪಾಳಿಯ ಸಿಬ್ಬಂದಿ ಮಧ್ಯಾಹ್ನ 2ರಿಂದ ರಾತ್ರಿ 10 ಗಂಟೆ, ಮೂರನೇ ಪಾಳಿ ಸಿಬ್ಬಂದಿ ರಾತ್ರಿ 10ರಿಂದ ಮುಂಜಾನೆ 6 ಗಂಟೆವರೆಗೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಲಿದ್ದಾರೆ. ದಸರಾ ಕಾರ್ಯಕ್ರಮ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಮುಜುಗರ ಉಂಟಾಗದಂತೆ ತ್ವರಿತಗತಿಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ ಎಂದರು.

ಸಭೆಯಲ್ಲಿ ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪಸಮಿತಿಯ ಉಪಾಧ್ಯಕ್ಷರು, ಸದಸ್ಯರು ಹಾಗೂ ಕಾರ್ಯದರ್ಶಿ ಮಂಜುನಾಥ್, ಡಾ.ವೆಂಕಟೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರೈಲು ನಿಲ್ದಾಣದ ಗೋಪುರ ಗಡಿಯಾರ ನಿಂತಿದೆ!



ಮೈಸೂರು,ಸೆ.26– ಮೈಸೂರು ರೈಲ್ವೆ ನಿಲ್ದಾಣ ಪ್ರವೇಶದ್ವಾರ ಗೋಪುರದ ದೊಡ್ಡ ಗಡಿಯಾರ ಎಂದೋ ಕೆಟ್ಟು ನಿಂತಿದ್ದು, ಈ ಬಗ್ಗೆ ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದಾರೆ.



ರೈಲುಗಳಲ್ಲಿ ನಿತ್ಯ ಪ್ರಯಾಣಿಸುವವರು ರೈಲ್ವೆ ನಿಲ್ದಾಣ ಪ್ರವೇಶಿಸುವಾಗ ಇಲ್ಲ ಹೊರ ಬರುವಾಗ ಒಮ್ಮೆ ಕತ್ತೆತ್ತಿ ನೋಡಿ ಈ ಗಡಿಯಾರದಲ್ಲಿರುವಂತೆಯೇ ತಮ್ಮ ಕೈ ಗಡಿಯಾರದ ಸಮಯವನ್ನು ಹೊಂದಿಸಿಕೊಳ್ಳುತ್ತಾರೆ. ಒಂದೆರಡು ನಿಮಿಷ ವ್ಯತ್ಯಾಸವಾದರೂ ರೈಲು ತಪ್ಪಬಹುದು ಎಂಬ ಆತಂಕದಿಂದ ಆಗಾಗ್ಗೆ ಎರಡೂ ಗಡಿಯಾರಗಳ ಪರಿಶೀಲಿಸಿಕೊಳ್ಳುತ್ತಾರೆ. ಆದರೆ, ನಿಲ್ದಾಣದ ಗಡಿಯಾರವೇ ಎಂದೋ 8.25ಕ್ಕೆ ನಿಂತುಹೋಗಿ, ಪ್ರಯಾಣಿಕರು ಈಗ ಗೊಂದಲಕ್ಕೀಡಾಗಿದ್ದಾರೆ.

ದಸರಾಗೆಂದು ವಿವಿಧೆಡೆಯಿಂದ ಹೆಚ್ಚಿನ ಪ್ರವಾಸಿಗರು ರೈಲಿನ ಮೂಲಕ ಮೈಸೂರಿಗೆ ಆಗಮಿಸುತ್ತಾರೆ. ಆ ವೇಳೆ ಸಹಜವಾಗಿ ರೈಲು ನಿಲ್ದಾಣದ ಗಡಿಯಾರ ಕೆಟ್ಟಿರುವುದನ್ನು ಗಮನಿಸಿದರೆ ರೈಲ್ವೆ ಇಲಾಖೆಗೇ ಮುಜುಗರ ಆಗುವುದಿಲ್ಲವೇ? ಕೂಡಲೇ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ವಹಿಸಿ, ಗಡಿಯಾರ ದುರಸ್ತಿ ಮಾಡಿಸಬೇಕು. ಮತ್ತೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಪ್ರಯಾಣಿಕರು ಆಗ್ರಹಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಶನಿವಾರ 27 ಸೆಪ್ಟೆಂಬರ್ 2025

ರಾಜ್ಯದ 34 ನಿಗಮ–ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರ ನೇಮಕ

ಹೆಚ್.ಡಿ.ಗಣೇಶ್ ಮೈಲ್ಯಾಕ್ ಅಧ್ಯಕ್ಷ


ಹೆಚ್.ಡಿ.ಗಣೇಶ್


ಅರುಣ್ ಮಾಚಯ್ಯ


ಐಶ್ವರ್ಯ


ಪ್ಯಾರಿ ಜಾನ್

ಬೆಂಗಳೂರೂ, ಸೆ.26–ರಾಜ್ಯ ಸರ್ಕಾರ 34 ನಿಗಮ–ಮಂಡಳಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ.

ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ (ಮೈಲ್ಯಾಕ್) ಅಧ್ಯಕ್ಷರಾಗಿ ಪಿರಿಯಾಪಟ್ಟಣ ಕಾಂಗ್ರೆಸ್ ಮುಖಂಡ ಹೆಚ್.ಡಿ.ಗಣೇಶ್, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಪಟೇಲ್ ಶಿವಣ್ಣ, ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ಮೈಸೂರಿನ ಪ್ಯಾರಿ ಜಾನ್, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ಮಾಜಿ ಶಾಸಕ ದಿ. ಮಂಚನಹಳ್ಳಿ ಮಹದೇವ ಅವರ ಪುತ್ರಿ ಐಶ್ವರ್ಯ ಮಹದೇವ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ವಿಧಾನ ಪರಿಷತ್ ಮಾಜಿ ಸದಸ್ಯ, ಕೊಡಗಿನ ಅರುಣ್ ಮಾಚಯ್ಯ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾಗಿ ಮಂಡ್ಯದ ವಿಜಯಲಕ್ಷ್ಮಿ ಅವರನ್ನು ನೇಮಕ ಮಾಡಲಾಗಿದೆ.

ಕೊಡಗಿನ ನಿವೃತ್ತ ಲೆಫ್ಟಿನೆಂಟ್ ಜನರಲ್ ಬಿ.ಎನ್.ಬಿ.ಎಂ.ಪ್ರಸಾದ್, ನಿವೃತ್ತ ಮೇಜರ್ ದಿ.ಎಂ.ಸಿ. ಮುತ್ತಣ್ಣ ಅವರ ಪತ್ನಿ ರೀನಾ ಮುತ್ತಣ್ಣ ಅವರನ್ನು ನ್ಯಾಷನಲ್ ಮಿಲಿಟರಿ ಮೆಮೋರಿಯಲ್ ಮ್ಯಾನೇಜ್‌ಮೆಂಟ್ ಟ್ರಸ್ಟ್ ಸದಸ್ಯರಾಗಿ ನೇಮಕ ಮಾಡಲಾಗಿದೆ.

ದಕ್ಷಯಜ್ಞ ಅಥವಾ ಬೃಗುಮುನಿಯ ಗರ್ವಭಂಗ ಪೌರಾಣಿಕ ನಾಟಕ


ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪುರಭವನ (ಟೌನ್ ಹಾಲ್)ದಲ್ಲಿ ದಕ್ಷಯಜ್ಞ ಅಥವಾ ಬೃಗುಮುನಿಯ ಗರ್ವಭಂಗ ಎಂಬ ಪೌರಾಣಿಕ ನಾಟಕ ನಡೆಯಿತು. ನಾಟಕದಲ್ಲಿ ದಕ್ಷಬ್ರಹ್ಮನ ಪಾತ್ರದಲ್ಲಿ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ, ಚಂದ್ರಮನ ಪಾತ್ರದಲ್ಲಿ ಮಂಜೇಶ್, ವಸುಂದರನ ಪಾತ್ರದಲ್ಲಿ ಸೋಮಶೇಖರ್, ಜಾಲಬ್ರಹ್ಮನ ಪಾತ್ರದಲ್ಲಿ ಮರೀಗೌಡ, ರೋಹಿಣಿ ಪಾತ್ರದಲ್ಲಿ ಜ್ಯೋತಿ ಅವರು ಅಭಿನಯಿಸಿದರು.

ದಸರಾ ಪುಸ್ತಕ ಮೇಳದಲ್ಲಿ ಇನ್ನು ನಾಲ್ಕು ಪುಸ್ತಕ ಬಿಡುಗಡೆ


'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಶುಕ್ರವಾರ 4 ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಸೆ.26(ಎಂಕೆ)– ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಪುಸ್ತಕ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಶುಕ್ರವಾರ 4 ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಡಾ.ನರಸಿಂಹಮೂರ್ತಿ ಹೂವಿನಹಳ್ಳಿ ರಚಿತ 'ತುಂಬಿ ಬಂದಿತ್ತಾ ಬೇಂದ್ರೆ ಕಾವ್ಯದ ಅಧ್ಯಯನ, ಪ್ರೊ.ಜಿ.ಅಬ್ದುಲ್ ಬಷೀರ್ ರಚಿತ 'ಚಿಂತನ ಮತ್ತು ಮನದಂಗಳದ ಮಾತುಕತೆ', ಡಾ.ರೇಣುಕಾತಾಯಿ ರಚಿತ 'ದಿಲ್‌ಕಶ್ ಗಜಲ್' ಕೃತಿಗಳನ್ನು ಡಾ.ಬೋರೇಗೌಡ ಚಿಕ್ಕಮರಳಿ ಲೋಕಾರ್ಪಣೆಗೊಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಧ್ಯಕ್ಷತೆ ವಹಿಸಿದ್ದರು. ಉಪಸಮಿತಿ ಸದಸ್ಯರಾದ ಕವಯತ್ರಿ ಸುಚಿತ್ರ ಹೆಗಡೆ, ರಾಜಶೇಖರ ಕದಂಬ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರಿದ್ದರು.

ಯೋಗ ಆಧುನಿಕ ಜೀವನದ ಭಾಗವಾಗಬೇಕಿದೆ

ಯೋಗ ದಸರಾ ಉಪಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್ ಅಭಿಮತ


ಯೋಗ ದಸರಾ ಉಪಸಮಿತಿ ವತಿಯಿಂದ ಯೋಜಿಸಿದ್ದ ಯೋಗ ವೈಜ್ಞಾನಿಕ ವಿಚಾರ ಸಂಕಿರಣವನ್ನು ಗಣ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು.

ಮೈಸೂರು, ಸೆ.26– ಆರೋಗ್ಯಕರ ಜೀವನ ಶೈಲಿಗೆ ಪೂರಕವಾದ ಯೋಗಾಭ್ಯಾಸ, ಎಲ್ಲರ ಜೀವನದ ಒಂದು ಭಾಗವಾಗಬೇಕಿದೆ ಎಂದು ಯೋಗ ದಸರಾ ಉಪಸಮಿತಿ ಅಧ್ಯಕ್ಷ ಎನ್.ಆರ್.ನಾಗೇಶ್ ಹೇಳಿದರು.

ನಗರದ ಜೆ.ಕೆ.ಮೈದಾನದ ವೈದ್ಯಕೀಯ ಕಾಲೇಜು ಅಮೃತ ಮಹೋತ್ಸವ ಭವನದಲ್ಲಿ ಯೋಗ ದಸರಾ ಉಪಸಮಿತಿ ವತಿಯಿಂದ 'ಅಂತರಂಗ ಅರಿವು ಮತ್ತು ಜಾಗತಿಕ ಕ್ಷೇಮಕ್ಕಾಗಿ ಯೋಗ' ಘೋಷ ವಾಕ್ಯದೊಂದಿಗೆ ಗುರುವಾರ ಆಯೋಜಿಸಿದ್ದ ಯೋಗ ವೈಜ್ಞಾನಿಕ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಪೂರಕವಾಗಿದೆ. ನಿತ್ಯ ಯೋಗಾಭ್ಯಾಸ ಮಾಡುವುದರಿಂದ ಖಂಡಿತವಾಗಿ ಉತ್ತಮ ಆರೋಗ್ಯವಂತರಾಗಬಹುದು ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಸಾಂಸ್ಕೃತಿಕ ರಾಜಧಾನಿ ಮೈಸೂರಿಗೂ ಯೋಗಕ್ಕೂ ಅವಿನಾಭಾವ ನಂಟಿದೆ. ವಿಶ್ವದಲ್ಲೇ ಪ್ರಮುಖ ಯೋಗ ಕಲಿಕೆಯ ಕೇಂದ್ರವಾಗಿ ಮೈಸೂರು ಬೆಳೆದಿದೆ. ಇಲ್ಲಿನ ವಿವಿಧ ಯೋಗ ಸಂಸ್ಥೆಗಳು ಸಂಘಟಿತವಾಗಿ ಯೋಗ ತರಬೇತಿ ಚಟುವಟಿಕೆಯನ್ನು ಒಂದೆಡೆ ಸಂಘಟಿಸಿರುವುದು ವಿಶೇಷವಾಗಿದೆ ಎಂದು ಶ್ಲಾಘಿಸಿದರು.

ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಶ್ರೀವತ್ಸ ಮಾತನಾಡಿ, ಮಾನಸಿಕ ಮತ್ತು ದೈಹಿಕ ಆರೋಗ್ಯದೊಂದಿಗೆ ಆಧ್ಯಾತ್ಮಿಕತೆಯೊಂದಿಗೆ ಶಾಂತಿ–ಸಂಯಮ ಕಾಯ್ದುಕೊಳ್ಳಲು ಯೋಗ ಮಾರ್ಗವನ್ನು ಅನುಸರಿಸಲಾಗುತ್ತಿದೆ ಆಸನ ಅಭ್ಯಾಸಕ್ಕೂ ಮೊದಲು ತಜ್ಞರ ಮಾರ್ಗದರ್ಶನ ಪಡೆಯುವುದು ಒಳ್ಳೆಯದು. ಹಂತ ಹಂತವಾಗಿ ಆಸನಗಳ ಅಭ್ಯಾಸ ಶುರು ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಯೋಗ ಪ್ರಾಣಾಯಾಮ ಸಂಪೂರ್ಣತೆ, ಶೈಕ್ಷಣಿಕ ಕ್ಷೇತ್ರದಲ್ಲಿ ಯೋಗ–ಪ್ರಾಣಾಯಾಮದ ಮಹತ್ವ, ಇದರಿಂದ ಪ್ರಯೋಜನ ಪಡೆದವರ ನಿದರ್ಶನಗಳು ಸೇರಿದಂತೆ ಹಲವು ವಿಚಾರಗಳ ಕುರಿತು ತಜ್ಞರು ವಿಚಾರ ಮಂಡಿಸಿದರು.

ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಕೇರ್ ಇಂಡಿಯಾ ಸಂಸ್ಥೆಯ ಡಾ.ರಾಜಶೇಖರ್ ರೆಡ್ಡಿ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಷನ್‌ನ ಅಧ್ಯಕ್ಷೆ ಡಾ.ದೇವಕಿ ಮಾಧವ್, ಇಂಡಿಯನ್ ಯೋಗ ಅಸೋಸಿಯೇಷನ್ ಕಾರ್ಯದರ್ಶಿ ಡಾ.ಸುಬ್ರಮಣಿಯನ್, ಎಂ.ಹರೀಶ್, ಸಿ.ಆರ್.ಹೇಮಲತಾ, ಕೃಷ್ಣ ಪ್ರಸಾದ್, ಉಪಸಮಿತಿ ಉಪಾಧ್ಯಕ್ಷ ದೇವರಾಜು, ಅನೂಪ್, ಎಂ.ಮಹೇಶ್ ಮತ್ತಿತರರಿದ್ದರು.

ದಸರಾ ಕುಸ್ತಿಯಲ್ಲಿ ಅದ್ಭುತ ಬಲಾಬಲ ಪ್ರದರ್ಶನ




ದಸರಾ ನಾಡಕುಸ್ತಿ ಪಂದ್ಯಾವಳಿಯಲ್ಲಿ ಶುಕ್ರವಾರ ಅಖಾಡದಲ್ಲಿ ಪಟ್ಟು ಹಾಕಿದ ಪೈಲ್ವಾನರು.

ಮೈಸೂರು, ಸೆ.26– ದಸರಾ ನಾಡಕುಸ್ತಿ ಪಂದ್ಯಾವಳಿಯಲ್ಲಿ ಶುಕ್ರವಾರ ಪೈ.ಶ್ರೀರಾಮ್ ಅವರನ್ನು ಪಾಲಹಳ್ಳಿಯ ವಿಕಾಶ್ 17 ಸೆಕೆಂಡ್‌ಗಳಲ್ಲಿ ಚಿತ್ ಮಾಡಿ, ಈ ಬಾರಿಯ ದಾಖಲೆ ಬರೆದರು.

ಗಿರಿದರ್ಶಿನಿ ಲೇಔಟ್ ಪೈ.ಋಷಿ ವಿ.ಕುಮಾರ್ ಕುಂಬಾರಕೊಪ್ಪಲು ಪೈ.ಮೋನಿಕ ಆರ್.ಗೌಡ ಅವರನ್ನು 35 ಸೆಕೆಂಡ್‌ಗಳಲ್ಲಿ ಮಣಿಸಿದರು. ಬನ್ನೂರಿನ ಪೈ.ಅರ್ಬಾನ್ ಖಾನ್ ಎದುರಾಳಿ ಶ್ರೀರಂಗಪಟ್ಟಣದ ಪೈ.ಪುನೀತ್‌ಕುಮಾರ್ ಅವರನ್ನು 1 ನಿಮಿಷ 11 ಸೆಕೆಂಡ್‌ಗಳಲ್ಲಿ ಸೋಲಿಸಿದರು. ಬನ್ನೂರಿನ ಪೈ.ಬಿ.ಎಸ್. ಚಂದ್ರಶೇಖರ್ ಎದುರಾಳಿ ಪಾಲಹಳ್ಳಿಯ ಪೈ.ಪಿ.ಎ.ಪ್ರೀತಂ ಅವರನ್ನು ಒಂದೂವರೆ ನಿಮಿಷದಲ್ಲಿ ಮಣಿಸಿದರು.

ಹಳಿಯಾಳದ ಪೈ.ರೋಹನ್ ಎದುರಾಳಿ ಶಿರವಾಳದ ಪೈ.ಭೀಮ ಅವರನ್ನು, ಹಾಗೂ ಕುಮಾರಬೀಡು ಪೈ.ದರ್ಶನ್ ಎದುರಾಳಿ ಮೇಳಾಪುರದ ಫಾಜಿಲ್ ಪಾಷಾ ಅವರನ್ನು, 3 ನಿಮಿಷದಲ್ಲಿ ಚಿತ್ ಮಾಡಿದರು. ಚಾಮುಂಡಿ ಕ್ರೀಡಾಂಗಣದ ಪೈ.ದೀಕ್ಷ ಹಾಗೂ ಹೊಳೆನರಸೀಪುರದ ಪೈ.ತಿರುಮಲ ನಡುವೆ 4 ನಿಮಿಷ 32 ಸೆಕೆಂಡ್ ಮತ್ತು ಬೆಂಗಳೂರಿನ ಪೈ.ಪ್ರಕಾಶ್ ಹಾಗೂ ಎಲೆಕೆರೆ ಪೈ.ರಕ್ಷಿತ್ ನಡುವೆ 4 ನಿಮಿಷ 44 ಸೆಕೆಂಡ್ ಸೆಣಸಾಟ ನಡೆಯಿತು. ಇವರಲ್ಲಿ ದೀಕ್ಷ ಹಾಗೂ ರಕ್ಷಿತ್ ಗೆಲುವು ಪಡೆದರು.

ಇಂದಿನ ಪಂದ್ಯಾವಳಿಯಲ್ಲಿ 17 ಜೋಡಿ ಪೈಲ್ವಾನರು ಸಮಬಲ ಸಾಧಿಸಿದರೆ, ಎದುರಾಳಿಗಳು ಗೈರಾಗಿದ್ದರಿಂದ ಪೈ.ಚೈತನ್ಯ (ಮಿಲ್ಟ್ರಿ), ನಂಜನಗೂಡಿನ ಪೈ.ಎಸ್. ಜೀವನ್, ಕುರುಬರಹಳ್ಳಿಯ ಪೈ. ರೋಶನ್, ರಮ್ಮನಹಳ್ಳಿ ಪೈ.ಪ್ರಜ್ವಲ್, ಪಾಲಹಳ್ಳಿ ಸುಂದರೇಂದರ್‌ಗೌಡ, ನಂಜನಗೂಡಿನ ಆರ್.ಸಾಗರ್, ಕನಕನಗರದ ಹೆಚ್.ವಿ.ಮಹೇಶ್ ಅವರನ್ನು ವಿಜೇತರನ್ನಾಗಿ ಘೋಷಿಸಲಾಯಿತು.

ಕಾವೇರಿ ಇಂಜಿನಿಯರಿಂಗ್ ಕಾಲೇಜಲ್ಲಿ ಪ್ರೇರಣಾ ಕಾರ್ಯಕ್ರಮ


ಮೈಸೂರಿನ ಕಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಪ್ರೇರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು.

ಮೈಸೂರು, ಸೆ.26– ಮೈಸೂರಿನ ಪ್ರತಿಷ್ಠಿತ ಡಾ.ಚಂದ್ರಶೇಖರ್ ಫೌಂಡೇಷನ್ ಅಂಗಸಂಸ್ಥೆಯಾದ ಕಾವೇರಿ ಸಮೂಹ ವಿದ್ಯಾಸಂಸ್ಥೆಗಳ ಘಟಕ ಕಾವೇರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 2025–26ನೇ ಸಾಲಿನ ಪ್ರಾರಂಭೋತ್ಸವ ಹಾಗೂ ವಿದ್ಯಾರ್ಥಿ ಪ್ರೇರಣಾ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಮಾತನಾಡಿ, ಡಿಜಿಟಲ್ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದ ವೇಗ ಮತ್ತು ಬೆಳವಣಿಗೆಯ ಬಗ್ಗೆ ವಿದ್ಯಾರ್ಥಿಗಳು ಅರಿತು, ಹೊಸ ಆವಿಷ್ಕಾರಗಳತ್ತ ಹೆಜ್ಜೆ ಹಾಕಬೇಕೆಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಡಾ.ಜಿ.ಆರ್. ಚಂದ್ರಶೇಖರ್ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬಹಳ ಮುಖ್ಯ. ಆಧುನಿಕ ಯುಗದಲ್ಲಿ ಶಿಕ್ಷಣದ ಜೊತೆಗೆ ವ್ಯಕ್ತಿತ್ವ ನಿರ್ಮಾಣದ ಬಗ್ಗೆ ಎಲ್ಲರೂ ಗಮನ ಹರಿಸಬೇಕೆಂದು ಕಿವಿಮಾತು ಹೇಳಿದರು.

ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಲೋಕೇಶ್ ಮಾತನಾಡಿ, ನಮ್ಮ ಕಾಲೇಜಿನ ತತ್ವ ಮತ್ತು ಧ್ಯೇಯದ ಬಗ್ಗೆ ನಿಮಗೆಲ್ಲಾ ತಿಳಿದಿದೆ. ವಿದ್ಯಾರ್ಥಿಗಳು ಶಿಸ್ತು ಪಾಲನೆ ಮೂಲಕ ಉತ್ತಮತೆ ಹಾಗೂ ಅಖಂಡತೆಯನ್ನು ಕಾಯ್ದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸರಳಾ ಚಂದ್ರಶೇಖರ್, ಸಂಸ್ಥೆಯ ಡೀನ್ ಪ್ರೊ.ಎನ್. ಶ್ರೀಕಂಠಸ್ವಾಮಿ, ವಿದ್ಯಾರ್ಥಿಗಳು, ಪೋಷಕರು, ಬೋಧಕ ಹಾಗೂ ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ಫಾರ್ಮಾಸಿಸ್ಟ್‌ಗಳಿಗೆ ಸನ್ಮಾನ


ಡ್ರಗ್ಸ್ ಕಂಟ್ರೋಲ್ ಇಲಾಖೆಯಿಂದ ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ ಸಮಾರಂಭದಲ್ಲಿ ಫಾರ್ಮಾಸಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಮಂಜುನಾಥ್, ಹಿರಿಯ ಫಾರ್ಮಾಸಿಸ್ಟ್ ಹಾಗೂ ರಘುಲಾಲ್ ಅಂಡ್ ಕಂಪನಿ ಮಾಲೀಕರೂ ಆದ ಎನ್. ರಾಘವನ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಅಸಿಸ್ಟೆಂಟ್ ಡ್ರಗ್ಸ್ ಕಂಟ್ರೋಲರ್‌ಗಳಾದ ಆಶಾಲತಾ, ವಾಸೀಂ ಷರೀಫ್, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆಹಾರ ಮೇಳದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲು ಸ್ವಚ್ಛತಾ ಉಪ ಸಮಿತಿ ಪದಾಧಿಕಾರಿಗಳ ಶಪಥ


ದಸರಾ ಆಹಾರ ಮೇಳದಲ್ಲಿ ಸ್ವಚ್ಛತಾ ಪ್ರತಿಜ್ಞಾ ವಿಧಿ ಸ್ವೀಕಾರ

ಮೈಸೂರು, ಸೆ.26(ಎಂಕೆ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ದಸರಾ ಆಹಾರ ಮೇಳಕ್ಕೆ ಶುಕ್ರವಾರ ಭೇಟಿ ನೀಡಿದ ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಪದಾಧಿಕಾರಿಗಳು, ಕಸ ವಿಲೇವಾರಿ, ಸ್ವಚ್ಛತಾ ನಿರ್ವಹಣೆ ಕುರಿತು ಪರಿಶೀಲನೆ ನಡೆಸಿದರು.

ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪ ಸಮಿತಿ ಅಧ್ಯಕ್ಷ ಸುಭಾನ್ ನೇತೃತ್ವದಲ್ಲಿ ಪ್ರತೀ ಮಳಿಗೆಗೂ ತೆರಳಿ, ಹಸಿಕಸ ಮತ್ತು ಒಣಕಸ ಬೇರ್ಪಡಿಸಿ ಪೌರಕಾರ್ಮಿಕರಿಗೆ ನೀಡಬೇಕು. ಪ್ರತೀ ಮಳಿಗೆದಾರರು ಕಡ್ಡಾಯವಾಗಿ ಎರಡು ಡಸ್ಟ್‌ಬಿನ್‌ಗಳನ್ನು ಬಳಕೆ ಮಾಡಬೇಕು ಎಂದು ತಿಳಿ ಹೇಳಲಾಯಿತು.

ಹಾಗೆಯೇ ನಿಯೋಜಿಸಿರುವ ಪೌರ ಕಾರ್ಮಿಕರಿಗೂ ಆಹಾರ ಮೇಳ ಆವರಣದಲ್ಲಿ ಅನೈರ್ಮಲ್ಯ ಉಂಟಾಗದಂತೆ ಆಗಾಗ ಪರಿಶೀಲಿಸಿ, ಕಸ ವಿಲೇವಾರಿ ಮಾಡಬೇಕು. ಕೈ ತೊಳೆಯುವ ಸ್ಥಳದಲ್ಲಿ ತೆಗೆದಿರುವ ಗುಂಡಿಗಳು ತುಂಬಿದ ಕೂಡಲೇ ನೀರನ್ನು ತೆಗೆದು ಹೊರಹಾಕಬೇಕು ಎಂದು ಸೂಚಿಸಲಾಯಿತು. ಬಳಿಕ ಸ್ವಚ್ಛತಾ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಉಪಸಮಿತಿ ಉಪಾಧ್ಯಕ್ಷರಾದ ಮಂಜುನಾಥ, ವಸಂತ್ ಕುಮಾರ್, ಸದಸ್ಯರಾದ ನಾಗಯ್ಯ, ಯೋಗೇಶ್, ಮಹೇಶ್, ಸಾಗರ್, ಮಹದೇವಸ್ವಾಮಿ, ಪಾಲಿಕೆ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ್, ಪರಿಸರ ಇಂಜಿನಿಯರ್ ಕೃಷ್ಣಮೂರ್ತಿ, ಆರೋಗ್ಯ ನಿರೀಕ್ಷಕರಾದ ಹರಿಶ್, ರಾಜೇಶ್ವರಿ ಮತ್ತಿತರರಿದ್ದರು.

ರೈತರಿಂದ ರೈತ ದಸರಾ ಉದ್ಘಾಟಿಸಿ; ಕೃಷಿ ಸಚಿವರಿಗೆ ರೈತರ ಮನವಿ

ಅನ್ನದಾತರ ಕಡೆಗಣಿಸಿ ರೈತ ದಸರಾ ಮಾಡುತ್ತಿರುವುದು ನಮಗೆ ಮಾಡಿದ ವಂಚನೆ, ಅಪಮಾನ ಎಂದ ರೈತರು


ರೈತ ಮುಖಂಡರಿಂದ ಉದ್ಘಾಟನೆ ಮಾಡಿಸುವಂತೆ ಒತ್ತಾಯಿಸಿ ಮೈಸೂರಿನ ಜೆ.ಕೆ. ಮೈದಾನದಲ್ಲಿ ಕೃಷಿ ಸಚಿವ ಚೆಲುವರಾಯ ಸ್ವಾಮಿಗೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು.

ಮೈಸೂರು,ಸೆ.25(ಜಿಎ)–ರೈತ ದಸರಾವನ್ನು ಜಿಲ್ಲೆ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ರೈತ ಮುಖಂಡರಿಂದ ಉದ್ಘಾಟನೆ ಮಾಡಿಸುವಂತೆ ಒತ್ತಾಯಿಸಿ ಮೈಸೂರಿನ ಜೆ.ಕೆ. ಮೈದಾನದಲ್ಲಿ ಕೃಷಿ ಸಚಿವ ಚೆಲುವರಾಯ ಸ್ವಾಮಿಗೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅವರ ನೇತೃತ್ವದಲ್ಲಿ ಮೈಸೂರು ಜಿಲ್ಲಾ ಘಟಕದ ವತಿಯಿಂದ ಮನವಿ ಸಲ್ಲಿಸಲಾಯಿತು.

ವಿಶ್ವ ವಿಖ್ಯಾತ ನಾಡ ಹಬ್ಬ ಮೈಸೂರು ದಸರಾ ಆಚರಣೆ ಮಾಡುತ್ತಿರುವುದು ರೈತರಿಗೆ ಸಂತಸದ ವಿಷಯ. ಆದರೆ ರೈತರ ಹೆಸರಿನಲ್ಲಿ ರೈತ ದಸರಾ ಆಚರಣೆ ಮಾಡಿ ಮೈಸೂರು ಜಿಲ್ಲೆಯ ರೈತ ಮುಖಂಡರನ್ನು ಕಡೆಗಣಿಸಿ ರೈತ ದಸರಾ ಆಚರಣೆ ಮಾಡುತ್ತಿರುವುದು ರೈತರಿಗೆ ಮಾಡಿದ ಅಪಮಾನವಾಗಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಖಂಡಿಸಿದರು.

ಜಿಲ್ಲೆಯಲ್ಲಿ ಕೃಷಿ ಇಲಾಖೆ ನಿಷ್ಕ್ರಿಯವಾಗಿದ್ದು ರಾಜಕಾರಣಿಗಳ ಕಪಿಮುಷ್ಠಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ, ರಾಷ್ಟ್ರ ಮಟ್ಟದ ರೈತ ಮುಖಂಡ ಹಾಗೂ ರಾಜ್ಯ ಮುಖಂಡರು ಮೈಸೂರು ಜಿಲ್ಲೆಯಲ್ಲಿ ಇರುವುದು ಯಾರಿಗೂ ಕಾಣುತ್ತಿಲ್ಲವೇ? ದಸರಾ ಹಬ್ಬ ಆಚರಣೆ ಮಾಡುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವರು, ಕೃಷಿ ಸಚಿವರು, ಜಿಲ್ಲಾ ಆಡಳಿತ, ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಡಳಿತಕ್ಕೆ ಪಕ್ಷದ ಕಾರ್ಯಕರ್ತರು ಕಾಣುತ್ತಾರೆ, ಆದರೆ ಜಿಲ್ಲೆಯ ರೈತ ಮುಖಂಡರು ಕಾಣುತ್ತಿಲ್ಲವೇ. ರೈತರ ಸಂಕಷ್ಟಗಳಿಗೆ ಸ್ಪಂದಿಸಿ ಹಗಲಿರುಳು ಹೋರಾಟ ಮಾಡುವ ಮೂಲಕ ಸರ್ಕಾರದ ಗಮನ ಸೆಳೆದು ನ್ಯಾಯ ಕೊಡಿಸುವ ರೈತ ಮುಖಂಡರನ್ನು ಕಡೆಗಣಿಸಿ ರೈತ ದಸರಾ ಆಚರಣೆ ಮಾಡುತ್ತಿರುವುದು ರೈತರಿಗೆ ಮಾಡಿದ ವಂಚನೆ ಹಾಗೂ ಅಪಮಾನವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಂಬರುವ ವರ್ಷಗಳಲ್ಲಿ ರೈತ ದಸರಾ ಆಚರಣೆಗೆ ರೈತ ಮುಖಂಡರಿಂದ ಉದ್ಘಾಟನೆ ಮಾಡಿಸಬೇಕು, ರೈತರನ್ನು ಕಡೆಗಣಿಸಿ ರೈತ ದಸರಾ ಆಚರಣೆ ಮಾಡಲು ಮುಂದಾದರೆ, ಜಿಲ್ಲಾ ಉಸ್ತುವಾರಿ ಸಚಿವ, ಕೃಷಿ ಸಚಿವ, ಕೃಷಿ ಇಲಾಖೆ ಅಧಿಕಾರಿಗಳಿಗೆ ಹಾಗೂ ಜಿಲ್ಲಾಡಳಿತಕ್ಕೆ ರೈತರು ಘೇರಾವ್ ಮಾಡಲಾಗುವುದು ಎಂದು ಎಚ್ಚರಿಸಿದರು.

ಮನವಿ ಸ್ವೀಕರಿಸಿದ ಕೃಷಿ ಸಚಿವ ಚೆಲುವರಾಯಸ್ವಾಮಿ, ನಿಮ್ಮ ಮನವಿಯನ್ನು ಉಸ್ತುವಾರಿ ಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ಜಂಟಿ ಕಾರ್ಯದರ್ಶಿ ಬಿ.ಪಿ. ಪರಶಿವಮೂರ್ತಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವರಕೋಡು ನಾಗೇಶ್, ತಾಲೂಕು ಅಧ್ಯಕ್ಷರುಗಳಾದ ಕುರುಬೂರು ಸಿದ್ದೇಶ್, ಲಕ್ಷ್ಮೀಪುರ ವೆಂಕಟೇಶ್, ಕಿರಗಸೂರು ಪ್ರಸಾದ್ ನಾಯಕ, ಬನ್ನೂರು ಸೂರಿ, ಕಾಟೂರು ಮಹದೇವಸ್ವಾಮಿ, ವಾಜಮಂಗಲ ಮಹದೇವು, ಅಂಬಳೆ ಮಂಜುನಾಥ್, ರಂಗರಾಜು, ರಾಮಚಂದ್ರ, ಪುಟ್ಟೇಗೌಡನಹುಂಡಿ ರಾಜು, ಗಿರೀಶ್, ರವಿಕುಮಾರ್, ಪುಟ್ಟಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಜಾತಿ ಗಣತಿ ಮಾಡುವ ಶಿಕ್ಷಕರ ಸಂಭಾವನೆಗೆ 60 ಕೋಟಿ ರೂ. ಬಿಡುಗಡೆ

ಬೆಂಗಳೂರು, ಸೆ.26– ರಾಜ್ಯದಲ್ಲಿ ಆರಂಭವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಂಡಿರುವ 1,20,728 (ಜಿಬಿಎ ಹೊರತುಪಡಿಸಿ) ಸಮೀಕ್ಷಕರಿಗೆ ಮೊದಲ ಕಂತಿನ ರೂಪದಲ್ಲಿ ತಲಾ 5000 ರೂ. ಗೌರವಧನ ಮೊತ್ತವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಟ್ಟು 60,36,40,000 ರೂ. ಬಿಡುಗಡೆ ಮಾಡಿ ಸರಕಾರ ಆದೇಶ ಹೊರಡಿಸಿದೆ.

ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸೆ.22 ರಿಂದ ಆರಂಭಿಸಿರುವ ಸಮೀಕ್ಷೆಯಲ್ಲಿ ಒಟ್ಟು 1.20 ಲಕ್ಷ ಸಮೀಕ್ಷಕರು ಪಾಲ್ಗೊಂಡಿದ್ದಾರೆ. ಸಮೀಕ್ಷಾದಾರರಿಗೆ 5000 ರೂ. ಜತೆಗೆ ಪ್ರತಿ ಮನೆ ಸಮೀಕ್ಷೆಗೆ 100 ರೂ. ಹಾಗೂ ಮೇಲ್ವಿಚಾರಕರಿಗೆ 10,000 ರೂ. ಗೌರವ ಸಂಭಾವನೆ ನಿಗದಿಪಡಿಸಲಾಗಿದೆ.

ಮೊದಲ ಕಂತಿನಲ್ಲಿ60.36 ಕೋಟಿ ರೂ.ಗಳನ್ನು ಎಲ್ಲ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆ/ ಬ್ಯಾಂಕ್ ಖಾತೆಗೆ ಬಿಡುಗಡೆಗೊಳಿಸಿ ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ.ದಯಾನಂದ್ ಆದೇಶ ಹೊರಡಿಸಿದ್ದಾರೆ. ಅನುದಾನ ಬಳಕೆಗೆ ಎರಡು ನಿಬಂಧನೆಗಳನ್ನು ವಿಧಿಸಲಾಗಿದೆ. ಅನುದಾನವನ್ನು ಸಮೀಕ್ಷಾದಾರರಿಗೆ ತಲಾ 5000 ರೂ.ನಂತೆ ಮೊದಲ ಕಂತಿನ ಗೌರವಧನ ನೀಡಲು ಬಳಸಬೇಕು. ಉಳಿದ ಅನುದಾನವನ್ನು ಮುಂದಿನ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು. ಸಮೀಕ್ಷೆಗೆ ಸಂಬಂಧಪಟ್ಟಂತೆ ಬಿಡುಗಡೆ ಮಾಡಲಾದ ಅನುದಾನ, ವೆಚ್ಚದ ವಿವರವನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು ಹಾಗೂ ನಿಯಮಾನುಸಾರ ವೆಚ್ಚಗಳನ್ನು ಭರಿಸಿದ ನಂತರ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಆಯೋಗಕ್ಕೆ ಸಲ್ಲಿಸಬೇಕೆಂದು ಸೂಚಿಸಿದ್ದಾರೆ.

ದಸರಾ ಕವಿಗೋಷ್ಠಿಯಲ್ಲಿ ಜಾನಪದ ಹಾಡುಗಳ ಸವಿದ ಸಾಹಿತ್ಯ ಪ್ರೇಮಿಗಳು


ದಸರಾ ಕವಿಗೋಷ್ಠಿಯ 4ನೇ ದಿನದ 'ಪ್ರತಿಭಾ ಕವಿಗೋಷ್ಠಿ'ಯನ್ನು ಮೈಸೂರು ಪ್ರಸಾರಂಗ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು ಉದ್ಘಾಟಿಸಿದರು

ಮೈಸೂರು, ಸೆ.26(ಎಂಕೆ)– ನಾಡಹಬ್ಬ ಮೈಸೂರು ದಸರಾ ಕವಿಗೋಷ್ಠಿ(ಪ್ರತಿಭಾ ಕವಿಗೋಷ್ಠಿ)ಯಲ್ಲಿ ಜಾನಪದ ಸಂಗಮ...!

ಮೈಸೂರು ವಿವಿ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಆಯೋಜಿಸಿರುವ ದಸರಾ ಕವಿಗೋಷ್ಠಿಯ 4ನೇ ದಿನದ 'ಪ್ರತಿಭಾ ಕವಿಗೋಷ್ಠಿ'ಯಲ್ಲಿ ಗೀಗಿ ಪದ, ಲಾವಣಿ ಪದ, ಸೋಬಾನೆ ಪದಗಳನ್ನು ಕಟ್ಟಿ ಹಾಡಿದ ಕವಿಗಳು ಜಾನಪದ ಸೊಗಡನ್ನು ಪಸರಿಸಿದರು.

ವಿವಿಧ ಜಿಲ್ಲೆಗಳಿಂದ ಆಗಮಿಸಿದ 16 ಕವಿಗಳು, ಕಂಸಾಳೆ, ತಂಬೂರಿ, ತಾಳ, ಮದ್ದಳೆ ಸಂಗೀತದೊಂದಿಗೆ ಸರಸ–ಸಲ್ಲಾಪ, ಬಸುರಿ ಬಯಕೆ, ಜರಿವ ಪದ, ಒಗಟು ಪದ, ತುಳುನಾಡಿನ ದೈವ ಪದ, ಮಲೆ ಮಾದಪ್ಪ ಬಿಳಿಗಿರಿರಂಗಪ್ಪನ ಮೇಲಿನ ಪದಗಳನ್ನು ಹಾಡಿ ರಂಜಿಸಿದರು.

ನಂಜನಗೂಡಿನ ಲೇಖಕಿ ಡಾ.ಎನ್. ಕೆಂಪಮ್ಮ 'ಸೆರಗ ಬಿಡು ರಂಗಯ್ಯ...' ಎಂದು ಪದಕಟ್ಟಿದರೆ, ಲೇಖಕ ಕೃಷ್ಣೇಗೌಡ ಕೀಲಾರ 'ಬಸುರಿ ಬಯಕೆ' ಕುರಿತು ಸೊಗಸಾಗಿ ಹಾಡಿದರು. ಗಾಯಕ ದೇವಾನಂದ ವರಪ್ರಸಾದ್, ಕನ್ನಡದ ಪ್ರಸಿದ್ಧ ಗಾದೆಗಳನ್ನು ಹಾಡಿದರೆ, ಲೇಖಕ ನರಸಿಂಹಮೂರ್ತಿ, 'ಮಾದಪ್ಪನ ಬೆಟ್ಟಕ್ಕೆ ಹೋಗೋಣ ಬನ್ನಿ... ಮಾದಪ್ಪನ ಸೇವೆ ಮಾಡೋಣ ಬನ್ನಿ' ಎಂದು ಸುಶ್ರಾವ್ಯವಾಗಿ ಹಾಡಿ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು.

ಜಾನಪದವೇ ಮೂಲ: ಕಹಳೆ ಊದುವ ಮೂಲಕ ಪ್ರತಿಭಾ ಕವಿಗೋಷ್ಠಿ ಉದ್ಘಾಟಿಸಿದ ಮೈಸೂರು ಪ್ರಸಾರಂಗ ನಿರ್ದೇಶಕ ಪ್ರೊ. ನಂಜಯ್ಯ ಹೊಂಗ ನೂರು ಮಾತನಾಡಿ, ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಮೂಲ ಜಾನಪದವೇ ಆಗಿದೆ. ಜಾನಪದವು ಸರಳ, ಸ್ಪಷ್ಟ ಹಾಗೂ ನೇರವಾಗಿರುತ್ತದೆ ಎಂದರು.

ಜಾನಪದ ಹಾಡುಗಾರರು ಈ ನೆಲದ ಅರಿವನ್ನು ವಿಸ್ತರಿಸುತ್ತಾರೆ. ಇವರಿಗೆ ಈ ಹಿಂದೆ ವೇದಿಕೆ ಇರಲಿಲ್ಲ, ಗ್ರಾಮದ ಓಣಿ, ಯಾರದೋ ಮನೆ ಜಗುಲಿ, ಅರಳಿ ಕಟ್ಟೆಯೇ ವೇದಿಕೆಯಾಗಿತ್ತು. ಜೋಳಿಗೆಗೆ ಹಾಕುವ ರಾಗಿ, ಜೋಳ, ಅಕ್ಕಿಯೇ ಅವರ ಸಂಭಾವನೆಯಾಗಿತ್ತು. ಆದರೆ ಕಳೆದ 20 ವರ್ಷದಿಂದೀಚೆಗೆ ಜಾನಪದ ಹಾಡುಗಾರರಿಗೆ ವಿದೇಶದಲ್ಲೂ ವೇದಿಕೆ ದೊರೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರೊ. ಡಿ.ಕೆ.ರಾಜೇಂದ್ರ ಪ್ರತಿಭಾ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಪ್ರೊ.ಶೈಲಜಾ ಹಿರೇಮಠ್, ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷರಾದ ಪ್ರೊ.ಎನ್.ಕೆ.ಲೋಲಾಕ್ಷಿ, ಕಾರ್ಯದರ್ಶಿಗಳಾದ, ಚೇತನ್ ಕುಮಾರ್, ಅಧಿಕಾರೇತರ ಸಮಿತಿಯ ಅಧ್ಯಕ್ಷ ಸುರೇಶ್ ಮತ್ತಿತರರಿದ್ದರು.

ಮೈಸೂರು ಮಿತ್ರ ಶನಿವಾರ 27 ಸೆಪ್ಟೆಂಬರ್ 2025



ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವ ಕೆಆರ್‌ಎಸ್





ರಾಜ್ಯ ಸರ್ಕಾರದಿಂದ ಇದೇ ಮೊದಲ ಬಾರಿಗೆ ಆಯೋಜಿಸಿರುವ ಕನ್ನಡ ನಾಡಿನ ಜೀವನದಿ ಕಾವೇರಿಗೆ ಆರತಿ ಹಾಗೂ ಶ್ರೀರಂಗಪಟ್ಟಣ ದಸರಾ ಮಹೋತ್ಸವ ಅಂಗವಾಗಿ ಕೆಆರ್‌ಎಸ್ ಜಲಾಶಯ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವುದು.

ದಸರಾಗೆ ನಾಂದಿ ಹಾಡಿದ್ದೇ ಶ್ರೀರಂಗಪಟ್ಟಣ: ಸಿಆರ್‌ಎಸ್

ಶ್ರೀರಂಗಪಟ್ಟಣ, ಸೆ.26– ಮೊದಲಿಗೆ ಮೈಸೂರಿನ ರಾಜಧಾನಿಯಾಗಿದ್ದು, ಅಲ್ಲಿಂತಲೂ ಮೊದಲು ಇಲ್ಲಿ ನಾಡಹಬ್ಬ ದಸರಾ ನಡೆಸಲಾಗುತ್ತಿತ್ತು ಎಂಬುದೇ ಶ್ರೀರಂಗಪಟ್ಟಣದ ಹೆಮ್ಮೆ ಎಂದು ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದ ಶ್ರೀರಂಗ ವೇದಿಕೆಯಲ್ಲಿ ದಸರಾ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಮೈಸೂರು ಮತ್ತು ಮಂಡ್ಯ, ಒಂದೇ ಜಿಲ್ಲೆಯಾಗಿತ್ತು. ಅಭಿವೃದ್ಧಿ ಉದ್ದೇಶದಿಂದ ಮಂಡ್ಯವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಸಲಾಯಿತು ಎಂದರು.

ಮೈಸೂರಿನಿಂದ ತಮಿಳುನಾಡಿನವರೆಗೂ ಕುಡಿಯುವ ನೀರಿನಿಂದ ಹಿಡಿದು ಕೃಷಿ ಹಾಗೂ ಇತರೆ ಜೀವನೋಪಾಯಕ್ಕೆ ಅನುಕೂಲವಾಗುತ್ತಿರುವ ಕಾವೇರಿ ಮಾತೆಗೆ ಧಾರ್ಮಿಕವಾಗಿ ಪೂಜೆ ಸಲ್ಲಿಸುವ ಸಲುವಾಗಿ ಕಾವೇರಿ ಆರತಿಯನ್ನು ಸೆ.30ರ ವರೆಗೆ ಸಾಂಕೇತಿಕವಾಗಿ ನಡೆಸಲಾಗುತ್ತಿದೆ ಎಂದರು.

ಸಮಾರಂಭಕ್ಕೆ ಬರುವವರಿಗೆ ಕಾವೇರಿ ನೀರಾವರಿ ನಿಗಮದಿಂದ ಉಚಿತ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ. ಸೆ.28 ರಂದು ಕೆ.ಆರ್‌ಪೇಟೆ, ನಾಗಮಂಗಲ ಮತ್ತು ಸೆ.29ರಂದು ಮದ್ದೂರು, ಸೆ.30ರಂದು ಮಳವಳ್ಳಿಯಿಂದ ಬಸ್ ನಿಗದಿಪಡಿಸಲಾಗಿದೆ. ಸಾರ್ವಜನಿಕರು ಸದುಪಯೋಗ ಪಡಿಸಿಕೊಂಡು ಮಧ್ಯಾಹ್ನವೇ ಕೆಆರ್‌ಎಸ್‌ಗೆ ಆಗಮಿಸಿ ಬೃಂದಾವನವನ್ನು ನೋಡಿಕೊಂಡು ಸಂಜೆ 6 ಗಂಟೆಗೆ ಕಾವೇರಿ ಆರತಿ ಸಮಾರಂಭದಲ್ಲಿ ಭಾಗವಹಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾವೇರಿ ಆರತಿ ಯಶಸ್ವಿಗೊಳಿಸಿ ಎಂದರು.



ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ಶಾಸಕ ರಮೇಶ್‌ಬಾಬು ಮಾತನಾಡಿ, ದಸರಾ ಪ್ರಾರಂಭದಿಂದ ಇಲ್ಲಿವರೆಗೂ ಯಾವುದೇ ವ್ಯತ್ಯಾಸವಿಲ್ಲದ ರೀತಿಯಲ್ಲಿ ಶ್ರೀರಂಗಪಟ್ಟಣ ದಸರಾ ನಡೆಸಿಕೊಂಡು ಬರಲಾಗುತ್ತಿದೆ. ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಸಹಕಾರದೊಂದಿಗೆ ಶ್ರೀರಂಗಪಟ್ಟಣ ಅಭಿವೃದ್ಧಿ ಪಡಿಸಲಾಗುತ್ತಿದೆ. ಸರ್ಕಾರದ ಮಾರ್ಗದರ್ಶನದಂತೆ ಇಲಾಖೆಗಳು ಕೆಲಸ ನಿರ್ವಹಿಸಿಕೊಂಡು ಬರುತ್ತಿದೆ. ಈಗಾಗಲೇ ತಾಲೂಕಿನಲ್ಲಿ ಡಾಂಬರೀಕರಣ ಮತ್ತು ಪ್ರತಿ ಹಳ್ಳಿಗಳಿಗೆ ಕಾವೇರಿ ಕುಡಿಯುವ ನೀರನ್ನು ಒದಗಿಸುವಲ್ಲಿ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ ಎಂದರು.

ಹಿರಿಯ ನಟ ಟಿ.ಎಸ್.ನಾಗಾಭರಣ ಮಾತನಾಡಿ, ಹಬ್ಬವೆಂಬುದು ಕುಟುಂಬ, ಸಮಾಜ, ಸಮೂಹ ಮತ್ತು ರಾಷ್ಟ್ರವನ್ನು ಒಗ್ಗೂಡಿಸುವ ದಿನವಾಗಿದ್ದು, ಅದರಲ್ಲಿ ದಸರಾ ಎಂಬುದು ರಾಜ್ಯದ ಸಂಸ್ಕೃತಿ ಮತ್ತು ಆಚರಣೆಯನ್ನು ಸಾರಿ ಹೇಳುವಂತದ್ದು. ಹಬ್ಬದ ಆಚರಣೆ ಮತ್ತು ಸ್ಮರಣೆಯಿಂದ ಮನಸ್ಸು ಶುದ್ಧವಾಗಿರುತ್ತದೆ ಹಾಗೂ ಒಳ್ಳೆಯ ಆಲೋಚನೆಗಳು ವೃದ್ಧಿಯಾಗುತ್ತದೆ. ದೇವಿ ಆರಾಧನೆ ಯೊಂದಿಗೆ ಎಲ್ಲರೂ ಒಂದಾಗಿ ಸ್ನೇಹ, ಸಹೃದಯತೆಯಿಂದ ಜೀವನ ಸಾಗಿಸೋಣ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ದಿನೇಶ್ ಗೂಳಿಗೌಡ, ದರ್ಶನ್ ಪುಟ್ಟಣ್ಣಯ್ಯ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಿರಂಗೂರು ಗ್ರಾಪಂ ಅಧ್ಯಕ್ಷೆ ಆರ್.ರೂಪ ಪ್ರಭಾಕರ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮತ್ತು ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಎಸಿ ಶ್ರೀನಿವಾಸ್, ಶ್ರೀರಂಗಪಟ್ಟಣ ತಹಸೀಲ್ದಾರ್ ಚೇತನ ಯಾದವ್ ಉಪಸ್ಥಿತರಿದ್ದರು.

ಸೂಳೆಕೆರೆಯಲ್ಲಿ ಮೀನುಗಳ ಮಾರಣ ಹೋಮ



ಕೆರೆಯಲ್ಲಿ ಮೀನುಗಳು ಸಾವನ್ನಪ್ಪಿರುವುದು.

ಭಾರತೀನಗರ, ಸೆ.26– ಇಲ್ಲಿಗೆ ಸಮೀಪದ ಅಂಬರಹಳ್ಳಿ ಬಳಿಯ ಸೂಳೆ ಕೆರೆ ನಾಲೆಗೆ ಮೈಸೂರು ಸಕ್ಕರೆ ಕಾರ್ಖಾನೆಯ ರಾಸಾಯನಿಕ ಮಿಶ್ರಿತ ನೀರು ಹರಿದು ಬಂದು ಮೀನುಗಳ ಮಾರಣ ಹೋಮ ನಡೆದಿದೆ.

ಹೆಬ್ಬಾಳ ನಾಲೆಯಿಂದ ಸೂಳೆಕೆರೆ ನಾಲೆಗೆ ಪ್ರತ್ಯೇಕ ನಾಲೆಯಿಂದ ನೀರು ತುಂಬಿಸಲಾಗುತ್ತಿತ್ತು. ಸೂಳೆಕೆರೆಗೆ ಶ್ರೀ ಜಲದರ್ಶಿನಿ ಮೀನುಗಾರರ ಸಹಕಾರ ಸಂಘದಿಂದ 15 ಲಕ್ಷ ಮೀನು ಮರಿಗಳನ್ನು ಬೀಡಲಾಗಿತ್ತು. ಕಳೆದ ಮೂರ್‍ನಾಲ್ಕು ದಿನಗಳಿಂದ ಮಂಡ್ಯದಲ್ಲಿ ಸುರಿದ ಭಾರಿ ಮಳೆಯಿಂದ ಸೂಳೆಕೆರೆಗೆ ನೀರು ಹರಿದು ಬಂದಿದ್ದು ಈ ನಾಲೆಗೆ ಮೈಸೂರು ಸಕ್ಕರೆ ಕಾರ್ಖಾನೆಯಿಂದ ಹರಿದು ಬಂದ ರಾಸಾಯನಿಕ ನೀರು ಮಳೆಯ ನೀರಿನೊಂದಿಗೆ ಸೇರಿ ಈ ದುರಂತ ಸಂಭವಿಸಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಕಾರ್ಖಾನೆಯ ರಾಸಾಯನಿಕ ಮಿಶ್ರಿತ ನೀರಿನಿಂದ ಸಹಸ್ರಾರು ಮೀನುಗಳು ನಾಲೆಯಿಂದ ರಸ್ತೆಗೆ ಬಿದ್ದು ಸಾವನ್ನಪ್ಪುತ್ತಿದ್ದವು. ಇದನ್ನು ಗಮನಿಸಿದ ಮಾದರಹಳ್ಳಿ, ಶಿಂಗಟಗೆರೆ, ಹರಳಹಳ್ಳಿ, ಹೆಮ್ಮಿಗೆ, ಅಂಬರಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ಜನರು ಸ್ಥಳಕ್ಕಾಗಮಿಸಿ ಪ್ರತಿಯೊಬ್ಬರು 10 ರಿಂದ 25 ಕೆಜಿ ಮೀನುಗಳನ್ನು ಹಿಡಿದು ಕೊಂಡು ಹೋದರು. 2 ದಿನಗಳಿಂದಲೂ ಮೀನಿನ ಮಾರಣ ಹೋಮ ನಡೆಯುತ್ತಿದೆ ಎಂದು ಜಲ ದರ್ಶಿನಿ ಮೀನುಗಾರ ಮಹಾ ಮಂಡಳಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ನೀರು ಹೆಬ್ಬಾಳ ಚನ್ನಯ್ಯ ನಾಲೆಗೆ ಬಿಡದೆ ಪ್ರತ್ಯೇಕ ನಾಲೆ ಮೂಲಕ ಬೇರೆಲ್ಲಾದರೂ ಬಿಟ್ಟುಕೊಳ್ಳಲಿ. ಇದೇ ರೀತಿ ರಾಸಾಯನಿಕ ಮಿಶ್ರಿತ ನೀರು ಹರಿದು ಬಂದು ಜಲಚರಗಳಿಗೆ ಹಾನಿಯಾದರೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕಾವೇರಿ ಆರತಿಗೆ ಉಚಿತ ಪ್ರವೇಶ

ಶ್ರೀರಂಗಪಟ್ಟಣ, ಸೆ 26– ಕಾವೇರಿ ಆರತಿ ವೀಕ್ಷಿಸಲು ಅನುಕೂಲವಾಗುವಂತೆ ಪ್ರವಾಸಿಗರಿಗೆ ಉಚಿತ ಪ್ರವೇಶವನ್ನು ಸರ್ಕಾರ ಕಲ್ಪಿಸಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಇಂದಿನಿಂದ ಆರಂಭವಾದ ಕಾವೇರಿ ಆರತಿ ಅ.2ರವರೆಗೂ ನಡೆಯಲಿದ್ದು, ಬೃಂದಾವನ ವೀಕ್ಷಿಸಲು ಬರುವ ಪ್ರವಾಸಿಗರು, ಸ್ಥಳೀಯರಿಗೆ ಯಾವುದೇ ರೀತಿಯ ಪ್ರವೇಶ ಶುಲ್ಕ ವಿಧಿಸದಿರುವಂತೆ ಅಧಿಕಾರಿಗಳಿಗೆ ಅವರು ಆದೇಶಿಸಿದ್ದಾರೆ.

ಕಾವೇರಿ ಆರತಿ ವಿರೋಧಿಸಿ ರೈತರ ಪ್ರತಿಭಟನೆ

ಶ್ರೀರಂಗಪಟ್ಟಣ, ಸೆ.26–ರಾಜ್ಯ ಸರ್ಕಾರ ಹಮ್ಮಿಕೊಂಡಿರುವ 'ಕಾವೇರಿ ಆರತಿ' ವಿರೋಧಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ, ರೈತ ಸಂಘ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಯ ಕಾರ್ಯಕರ್ತರು ಕಪ್ಪು ಪಟ್ಟಿ ಧರಿಸಿ ಕೆಆರ್‌ಎಸ್‌ನಲ್ಲಿ ಪ್ರತಿಭಟಿಸಿದರು.

ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿ, ಕೆಆರ್‌ಎಸ್ ಅಣೆಕಟ್ಟೆ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ, ಕಾವೇರಿ ಆರತಿ ಯೋಜನೆ ಮಾಡುವುದಕ್ಕೆ ಹಿಂದಿನಿಂದಲೂ ವಿರೋಧ ಮಾಡುತ್ತಲೇ ಬಂದಿದ್ದೇವೆ. ಅಲ್ಲಿ ಕಾವೇರಿ ಆರತಿ ಮಾಡುವ ಮೂಲಕ ಮೂಢನಂಬಿಕೆ ಬಿತ್ತುಲು ಹೊರಟಿರುವುದು ನಾಚಿಕೇಡಿನ ಸಂಗತಿ. ಪ್ರಾಯೋಗಿಕವಾಗಿ ಏನನ್ನೂ ಮಾಡುವುದು ಬೇಡ ಎಂದು ಆಕ್ರೋಶ ವ್ಯಕ್ತಪಡಿಸಿದರು.



'ಕಾವೇರಿ ಆರತಿ' ವಿರೋಧಿಸಿ ರೈತ ಸಂಘ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಯ ಕಾರ್ಯಕರ್ತರು ಕೆಆರ್‌ಎಸ್‌ನಲ್ಲಿ ಪ್ರತಿಭಟಿಸಿದರು.

ಕೆಆರ್‌ಎಸ್ ಅಣೆಕಟ್ಟು ಇತಿಹಾಸ ಹೊಂದಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಯೇ ಆಗಿದೆ. ಅಣೆಕಟ್ಟೆ ಭದ್ರತೆಗೆ ಕಾನೂನು ರೂಪಿಸಿರುವ ಸರ್ಕಾರವೇ ಈಗ ಕಾನೂನು ಉಲ್ಲಂಘಿಸಿರುವುದು ದುರಂತ. ಈ ಎರಡೂ ವಿಚಾರದಲ್ಲಿ ನ್ಯಾಯಾಲಯದ ಮೂಲಕವೇ ಸರ್ಕಾರಕ್ಕೆ ಉತ್ತರಿಸಲು ನಿರ್ಧರಿಸಿದ್ದೇವೆ ಎಂದರು. ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಯ ಎ.ಎಲ್. ಕೆಂಪೂಗೌಡ, ಚಂದ್ರ ಶೇಖರ್, ಸಿ.ಕುಮಾರಿ, ಚಂದ್ರು ಮುದ್ದೇಗೌಡ, ನಾಗಣ್ಣ ಇತರರಿದ್ದರು.

ಸ್ಕೈವಾಕ್ ಕಂಬಕ್ಕೆ ಬೈಕ್ ಡಿಕ್ಕಿ: ಇಬ್ಬರ ಸಾವು

ಮಂಡ್ಯ: ಸ್ಕೈವಾಕ್ ಕಂಬಕ್ಕೆ ಬೈಕ್ ಡಿಕ್ಕಿಯಾದ ಪರಿಣಾಮ ಇಬ್ಬರು ಸ್ಥಳದಲ್ಲೇ ಅಸು ನೀಗಿರುವ ಘಟನೆ ನಗರದ ಸರ್ಕಾರಿ ಮಹಿಳಾ ಕಾಲೇಜು ಬಳಿ ಶುಕ್ರವಾರ ಬೆಳಿಗ್ಗೆ ನಡೆದಿದೆ. ಮಂಡ್ಯ ನಗರದ ಉದಯಗಿರಿ ಮತ್ತು ಯತ್ತಗದ ಹಳ್ಳಿಯ ಡ್ಯಾನಿಲ್(20) ಹಾಗೂ ಜೋಶ್ ಆಯಲ್ಸ್ (20) ಅಪಘಾತದಲ್ಲಿ ಮೃತಪಟ್ಟ ಯುವಕರಾಗಿದ್ದಾರೆ.

ಬೆಂಗಳೂರಿನಿಂದ ಮಂಡ್ಯಕ್ಕೆ ಬೈಕ್‌ನಲ್ಲಿ ಬರುತ್ತಿದ್ದ ಸಂದರ್ಭದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯ ಸ್ಕೈವಾಕ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದ ರಭಸಕ್ಕೆ ರಾಯಲ್ ಎನ್ ಫೀಲ್ಡ್ ಬೈಕ್ ನಜ್ಜುಗುಜ್ಜಾಗಿದ್ದರೆ, ಸವಾರರಿಬ್ಬರ ದೇಹಗಳು ಛಿದ್ರಗೊಂಡಿದ್ದವು. ಶವಗಳನ್ನು ಮಂಡ್ಯ ಮಿಮ್ಸ್ ಶವಾಗಾರದಲ್ಲಿ ಪಂಚನಾಮೆ ನಡೆಸಿ, ವಾರಸುದಾರರಿಗೆ ನೀಡಲಾಯಿತು. ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಕಾವೇರಿ ಮಾತೆಗೆ ಆರತಿ



ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಕಾವೇರಿ ಆರತಿಗೆ ಉಪ ಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಸಚಿವರೂ ಆದ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರಮೇಶ್‌ಬಾಬು, ಡಿ.ಕೆ.ಶಿವಕುಮಾರ್ ಪತ್ನಿ ಶ್ರೀಮತಿ ಉಷಾ ಸೇರಿದಂತೆ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಮಾಡಿ ಬಾಗಿನ ಅರ್ಪಣೆ ಮಾಡಲಾಯಿತು. ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರಾರ್ಥನೆ, ಚಾಮರ ಸೇವೆ. ಮೂರು ದಿಕ್ಕಿಗೂ ಶಂಖನಾದ, ಧೂಪದ ಆರತಿ ಹಾಗೂ ಮಂತ್ರ ಪುಷ್ಪ ಪಠಣ ಮಾಡಲಾಯಿತು. ಕೊನೆಯಲ್ಲಿ ಕುಂಭಾರತಿ, ನಾಗಾರತಿ, ಕಾವೇರಿ ಆರತಿಯೊಂದಿಗೆ ಪೂಜಾ ಕೈಂಕರ್ಯ ಸಂಪನ್ನಗೊಂಡಿತು.

ಲಡ್ಡು ವಿತರಣೆ: 'ಕಾವೇರಿ ಆರತಿ' ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಗೆ ಕಾವೇರಿ ತಾಯಿ ಪ್ರಸಾದವಾಗಿ ಲಡ್ಡುವನ್ನು ಉಚಿತವಾಗಿ ಹಂಚಲು ಜಲಸಂಪನ್ಮೂಲ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ವ್ಯವಸ್ಥೆ ಮಾಡಿದ್ದರು. ಪ್ರತಿನಿತ್ಯ ಪ್ರವಾಸಿಗರಿಗೆ ಲಡ್ಡುವನ್ನು ವಿತರಣೆ ಮಾಡಲಾಗುತ್ತದೆ.

ಸಾಹಸ ಹಾಗೂ ಜಲ ಕ್ರೀಡೆ ಆಯೋಜನೆ: ಈ ಬಾರಿಯ ದಸರಾದಲ್ಲಿ ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗುತ್ತಿರುವ ಕಾವೇರಿ ಆರತಿ ಕಾರ್ಯಕ್ರಮ ಈಗ ಸಾಹಸ ಕ್ರೀಡೆ ಹಾಗೂ ಜಲ ಕ್ರೀಡೆಗಳನ್ನು ಒಳಗೊಳ್ಳುವ ಮೂಲಕ ಪ್ರವಾಸಿಗರಿಗೆ ಅತಿ ರಂಜನೆ, ಆಕರ್ಷಣೆಯಾಗಿ ಪರಿಣಮಿಸಲಿದೆ. ಗಂಗಾ ಆರತಿ ಮಾದರಿಯಲ್ಲಿ ತಾಯಿ ಕಾವೇರಿಗೆ ಪೂಜೆ ಸಲ್ಲಿಸುವ ವರ್ಣರಂಜಿತ ಧಾರ್ಮಿಕ ಕಾರ್ಯಕ್ರಮದ ಜೊತೆಗೆ ಕರ್ನಾಟಕ ಸರ್ಕಾರವು ಪ್ರವಾಸಿಗರಿಗಾಗಿ ಕೆಆರ್‌ಎಸ್ ಅಣೆಕಟ್ಟಿನಲ್ಲಿ ಕ್ರೀಡಾ ಉತ್ಸವಗಳನ್ನು ಆಯೋಜಿಸುತ್ತಿದೆ.

ರಾಜ್ಯ ಸರ್ಕಾರ ಈ ವರ್ಷ ಪ್ರಾಯೋಗಿಕವಾಗಿ ಕಾವೇರಿ ಆರತಿ ಕಾರ್ಯಕ್ರಮವನ್ನು ಮಾಡುತ್ತಿದೆಯಾದರೂ ಪ್ರವಾಸಿಗರ ನಿರೀಕ್ಷೆಗೂ ಮೀರಿ ವರ್ಣರಂಜಿತವಾಗಿ ಕಾರ್ಯಕ್ರಮ ಆಯೋಜಿಸಿದೆ. ವಿಶೇಷವಾಗಿ ಮಕ್ಕಳನ್ನು ಆಕರ್ಷಿಸಲು ಸುಮಾರು 80 ವಿಶಿಷ್ಟ ಕ್ರೀಡೆಗಳನ್ನು ಪರಿಚಯಿಸಲಾಗಿದ್ದು, ವಾರಾಂತ್ಯದಲ್ಲಿ ಕುಟುಂಬ ಸಮೇತರಾಗಿ ಬಂದು ಅಮೂಲ್ಯ ಕ್ಷಣಗಳನ್ನು ಆನಂದಿಸುವ ವಾತಾವರಣ ಕಲ್ಪಿಸಲಾಗಿದೆ. ಪ್ರವಾಸಿಗರು ಹಾಗೂ ರಾಜ್ಯದ ಜನ ವಾರಾಂತ್ಯದಲ್ಲಿ ಕೆಆರ್‌ಎಸ್‌ಗೆ ಆಗಮಿಸಿ ಕಣ್ತುಂಬಿಕೊಳ್ಳಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಇದೇ ವೇಳೆ ಕರೆ ನೀಡಿದ್ದಾರೆ.

ತುಮಕೂರಿನ ಸಿದ್ದಗಂಗಾ ಮಠದ ಪೀಠಾಧಿಪತಿ ಶ್ರೀ ಸಿದ್ದಲಿಂಗಸ್ವಾಮೀಜಿ, ಕೆಂಗೇರಿಯ ಒಕ್ಕಲಿಗರ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದ ಸ್ವಾಮೀಜಿ, ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಚೆಸ್ಕಾಂ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಬಿಡಬ್ಲ್ಯೂಎಸ್‌ಎಸ್‌ಬಿ ಅಧ್ಯಕ್ಷ ರಾಮ್ ಪ್ರಸಾದ್ ಮನೋಹರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತ ಡಾ.ಕೆ.ವೆಂಕಟೇಶ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್. ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲಾ, ಡಿ.ಕೆ.ಶಿವಕುಮಾರ್ ಪತ್ನಿ ಉಷಾ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ನವರಾತ್ರಿ ಶುಭಾಶಯ ಕೋರಿದ ಪ್ರಧಾನಿ

ಅವರು ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ನವರಾತ್ರಿಯ ಈ ಸಮಯದಲ್ಲಿ, ದೇವಿ ಎಲ್ಲಾ ಭಕ್ತರಿಗೆ ಸಂತೋಷ, ಸಮೃದ್ಧಿ ಮತ್ತು ಅದೃಷ್ಟವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ. ಆಕೆಯ ಪ್ರೀತಿಯ ವಾತ್ಸಲ್ಯ ಪ್ರತಿಯೊಬ್ಬರ ಜೀವನದಲ್ಲೂ ಹೊಸ ಶಕ್ತಿ ಮತ್ತು ಉತ್ಸಾಹವನ್ನು ತುಂಬಲಿ' ಎಂದು ಮೋದಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. 'ಹೊಸ ಇತಿಹಾಸ' ಚಿತ್ರದ 'ಕಮಲದ ಮೊಗದೊಳೆ' ಗೀತೆಯನ್ನು ಎಸ್. ಜಾನಕಿ ಹಾಡಿದ್ದಾರೆ. ಶಂಕರ್–ಗಣೇಶ್ ಸಂಗೀತ ನೀಡಿದ್ದಾರೆ. ಚಿ. ಉದಯಶಂಕರ್ ಸಾಹಿತ್ಯ ಬರೆದಿದ್ದಾರೆ.

ಸರ್ಕಾರಿ ಗೌರವದೊಂದಿಗೆ ಭೈರಪ್ಪನವರ ಅಂತ್ಯಕ್ರಿಯೆ

ಮತ್ತು ನಾಗರಿಕ ಸರಬರಾಜು ಹಾಗೂ ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಷಿ ಹಾಜರಿದ್ದರು.

ಈ ವೇಳೆ ಪೊಲೀಸ್ ವಾದ್ಯಗೋಷ್ಠಿಯವರು ರಾಷ್ಟ್ರಗೀತೆ ಮೊಳಗಿಸಿದಾಗ 3 ಸುತ್ತು ಗುಂಡು ಹಾರಿಸಿ ಸರ್ಕಾರದ ಗೌರವ ವಂದನೆ ಸಲ್ಲಿಸಲಾಯಿತು. ಈ ವೇಳೆ ಪೊಲೀಸ್ ಕಮಾಂಡೆಂಟ್ ಭೈರಪ್ಪ ಅವರ ಶವ ಪೆಟ್ಟಿಗೆ ಮೇಲಿದ್ದ ರಾಷ್ಟ್ರ ಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಹಸ್ತಾಂತರಿಸಿದರು. ಅವರು ಅತ್ಯಂತ ನಮ್ರವಾಗಿ ಭೈರಪ್ಪ ಅವರ ಹಿರಿಯ ಪುತ್ರ ರವಿಶಂಕರ್ ಅವರಿಗೆ ಹಸ್ತಾಂತರ ಮಾಡಿದರು.



ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಗುರುವಾರ ಖ್ಯಾತ ಸಾಹಿತಿ ಎಲ್.ಎಲ್.ಭೈರಪ್ಪ ಅವರ ಅಂತ್ಯಕ್ರಿಯೆ ನೆರವೇರಿಸುವ ಮುನ್ನ ಪಾರ್ಥಿವ ಶರೀರದ ಮೇಲೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಭೈರಪ್ಪ ಅವರ ಪುತ್ರ ರವಿಶಂಕರ್ ಅವರಿಗೆ ಹಸ್ತಾಂತರಿಸಿದರು.

ಸರ್ಕಾರದ ವತಿಯಿಂದ ಭೈರಪ್ಪ ಅವರಿಗೆ ಸಕಲ ಗೌರವವನ್ನು ಸಲ್ಲಿಸಿದ ನಂತರ ಅಂತ್ಯಕ್ರಿಯೆ ಮುನ್ನ ನಡೆಸುವ ಧಾರ್ಮಿಕ ವಿಧಿ ವಿಧಾನಗಳು ನಡೆದವು.ಬಳಿಕ 12.40ರ ವೇಳೆಗೆ ಭೈರಪ್ಪ ಅವರ ಹಿರಿಯ ಪುತ್ರ ರವಿಶಂಕರ್ ತಂದೆಯ ಚಿತೆಗೆ, ಅಗ್ನಿ ಸ್ಪರ್ಶ ಮಾಡಿದರು. ಈ ಸಮಯದಲ್ಲಿ ಅವರ ಕಿರಿಯ ಪುತ್ರ ಉದಯಶಂಕರ್, ಸ್ನೇಹಿತೆಯ ಪುತ್ರಿ ಸಹನ ವಿಜಯಕುಮಾರ್ ಕೂಡ ಸಾಥ್ ನೀಡಿದರು. ಕಟ್ಟಿಗೆಯ ಜೊತೆಗೆ ಸಾಂಕೇತಿಕವಾಗಿ ಗಂಧದ ತುಂಡುಗಳು, ಕೆ.ಜಿ. ಗಟ್ಟಲೆ ತುಪ್ಪ ಹಾಗೂ ಕರ್ಪೂರವನ್ನು ಅಗ್ನಿಗೆ ಸಮರ್ಪಿಸಲಾಯಿತು.

ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಶಿವಕುಮಾರ್, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಸ್.ಎ.ರಾಮದಾಸ್, ತೇಜಸ್ವಿನಿ ಅನಂತಕುಮಾರ್ ಸೇರಿದಂತೆ ಹಲವು ಗಣ್ಯರು ಭೈರಪ್ಪ ಅವರ ಅಂತ್ಯ ಸಂಸ್ಕಾರದ ವೇಳೆ ಉಪಸ್ಥಿತರಿದ್ದರು. ಸುಮಾರು ಆರು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕದಲ್ಲಿ ಅಕ್ಷರ ಕ್ರಾಂತಿ ಮಾಡಿದ್ದ ಭೈರಪ್ಪ ಅವರ ಪರ್ವ ಅಂತ್ಯಗೊಂಡಿದೆ. ಭೈರಪ್ಪ ಅವರು ದೈಹಿಕವಾಗಿ ನಮ್ಮೊಡನೆ ಇಲ್ಲದಿರಬಹುದು. ಆದರೆ ತಮ್ಮ ಬರಹಗಳ ಮೂಲಕ ಚಿರಸ್ಥಾಯಿಯಾಗಿದ್ದಾರೆ.

ಭೈರಪ್ಪ ಅವರ ಎರಡು ಕೊನೆ ಆಸೆ ಈಡೇರಲೇ ಇಲ್ಲ

ತನ್ನ ಅಂತ್ಯಕ್ರಿಯೆ ಎಲ್ಲಿ ಮಾಡಬೇಕು, ಯಾರು ಮಾಡಬೇಕು ಎಂಬ ಬಗ್ಗೆ ಭೈರಪ್ಪ ಅವರು ವಿಲ್ (ಉಯಿಲು) ಬರೆದಿದ್ದರು. ಆದರೆ ಅವರ ಈ ಎರಡು ಆಸೆ ಈಡೇರಲಿಲ್ಲ. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೇ ಶಿವರ ಗ್ರಾಮದಲ್ಲಿ ಹಿಂದೂಧಾರ್ಮಿಕ ವಿಧಿವಿಧಾನದಂತೆ ಅಂತ್ಯಕ್ರಿಯೆ ನೆರವೇರಿಸಬೇಕು. ಕಡೆ ಘಳಿಗೆಯಲ್ಲಿ ನನ್ನ ಆರೈಕೆ ಮಾಡಿದ ಸಹನ ವಿಜಯಕುಮಾರ್ ಮಾತ್ರವೇ ಅಗ್ನಿ ಸ್ಪರ್ಶ ನೆರವೇರಿಸಬೇಕು ಎಂದು ವಿಲ್‌ನಲ್ಲಿ ಬರೆದಿದ್ದರು.

ಆದರೆ, ಭೈರಪ್ಪ ಅವರ ಈ ಎರಡು ಕೊನೆಯ ಆಶಯ ನೆರವೇರಲಿಲ್ಲ. ಭೈರಪ್ಪ ಅವರಿಗೆ ಸಂತೇ ಶಿವರ ಜನ್ಮ ಭೂಮಿಯಾಗಿದ್ದರೆ, ಮೈಸೂರು ಭೈರಪ್ಪ ಅವರ ಪಾಲಿಗೆ ಕರ್ಮ ಭೂಮಿಯಾಗಿತ್ತು. ಹಾಗಾಗಿ ಮೈಸೂರಿನಲ್ಲೆ ಭೈರಪ್ಪ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು. ತನ್ನ ಆರೈಕೆ ಮಾಡಿದ ಸಹನ ವಿಜಯಕುಮಾರ್ ಅಗ್ನಿ ಸ್ಪರ್ಶ ಮಾಡಬೇಕೆಂದು ಭೈರಪ್ಪ ಆಸೆಪಟ್ಟಿದ್ದರು. ಆದರೆ ಅವರ ಹಿರಿಯ ಪುತ್ರ ರವಿ ಶಂಕರ್ ಅವರು ಚಿತೆಗೆ ಅಗ್ನಿ ಸರ್ಶ ಮಾಡಿದರು. ಮತ್ತೊಬ್ಬ ಪುತ್ರ ಉದಯಶಂಕರ್ ಅಗ್ನಿ ಸ್ಪರ್ಶ ಮಾಡಿದ ನಂತರ ಸಹನ ವಿಜಯಕುಮಾರ್ ಕೂಡ ಅಗ್ನಿ ಸ್ಪರ್ಶ ಮಾಡಿದರು.

ಲಾಸ್ಟ್ ಪೋಸ್ಟ್ ಅಂತಿಮ ನಮನ

ಮಾರ್ಚ್ ಸಂತಾಪ ಸಂಗೀತವನ್ನು ರಾಷ್ಟ್ರೀಯ ವಂದನೆಯಾಗಿ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಶಾಸಕ ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಭೈರಪ್ಪ ಅವರ ಪಾರ್ಥಿವ ಶರೀರಕ್ಕೆ ಪುಷ್ಪ ನಮನ ಸಲ್ಲಿಸಿದರು. ತರುವಾಯ ಪೊಲೀಸ್ ವಾದ್ಯಗೋಷ್ಠಿಯ ಕಲಾವಿದರು ಲಾಸ್ಟ್ ಪೋಸ್ಟ್ ಅಂತಿಮ ಗೌರವ ವಂದನೆಯನ್ನು ಭೈರಪ್ಪ ಅವರಿಗೆ ಸಲ್ಲಿಸಿದರು.

ದಸರಾ ಸಾಂಸ್ಕೃತಿಕ ಉಪ ಸಮಿತಿ ಉಪಾಧ್ಯಕ್ಷ



ಮೈಸೂರು, ಸೆ.26– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಉಪ ಸಮಿತಿಯ ಉಪಾಧ್ಯಕ್ಷರನ್ನಾಗಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಕುಮಾರ್ ಎಸ್. ಅವರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಹಾಸನಾಂಬೆ ದರ್ಶನಕ್ಕೆ ವಿಶೇಷ ಪ್ಯಾಕೇಜ್



ಬೆಂಗಳೂರು, ಸೆ.26– ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಹಾಸನಾಂಬೆ ದರ್ಶನಕ್ಕೆ ವಿಶೇಷ ಪ್ಯಾಕೇಜ್ ವ್ಯವಸ್ಥೆ ಕಲ್ಪಿಸಲಾಗಿದೆ.

ಅಕ್ಟೋಬರ್ 10 ರಿಂದ 22 ರವರೆಗೆ ಹಾಸನಾಂಬೆ ದರ್ಶನಕ್ಕೆ ವಿಶೇಷ ಪ್ರವಾಸ ಆಯೋಜನೆ ಮಾಡಲಾಗಿದೆ. ಬೆಂಗಳೂರಿನಿಂದ ನುಗ್ಗೆಹಳ್ಳಿ ಲಕ್ಷ್ಮೀ ನರಸಿಂಹಸ್ವಾಮಿ, ನಾಗರ ನವಿಲೇ ನಾಗೇಶ್ವರ ಮತ್ತು ಹಾಸನಾಂಬೆ ದರ್ಶನ ಮುಗಿಸಿ ವಾಪಸ್ ಬರುವುದು. ಬೆಂಗಳೂರಿನಿಂದ ಹೊರಡುವ ಪ್ರವಾಸಿಗರಿಗೆ 2,016 ರೂಪಾಯಿ ನಿಗದಿ. ಮಾಡಲಾಗಿದೆ. ಇದರಲ್ಲಿ ಹಾಸನಾಂಬೆ ದರ್ಶನದ ಪಾಸ್ 1,000 ರೂಪಾಯಿ ಒಳಗೊಂಡಿದೆ. ಮೈಸೂರಿನಿಂದಲೂ ಟೂರ್ ಪ್ಯಾಕೇಜ್ ಇದ್ದು, 1,250 ರೂಪಾಯಿ ನಿಗದಿ ಮಾಡಲಾಗಿದೆ. ಮೈಸೂರು, ಬೇಲೂರು ಹಾಗೂ ಹಳೇಬೀಡು ಮೂರು ಸ್ಥಳಗಳನ್ನು ಹೊಂದಿದೆ.

11 ದಿನದಲ್ಲೇ ಪೂರ್ಣಗೊಳ್ಳಬೇಕು

2 ಕೋಟಿಗೂ ಹೆಚ್ಚು ಕುಟುಂಬಗಳ ಸಮೀಕ್ಷೆ ನಡೆಸಬೇಕಿದ್ದು, ಇದುವರೆಗೆ 2,76,016 ಕುಟುಂಬಗಳ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಲಾಗಿದೆ. ರಾಜ್ಯದ ಪ್ರತಿಯೊಂದು ಕುಟುಂಬಗಳ ಸಮೀಕ್ಷೆ ಕೈಗೊಳ್ಳಬೇಕು, ಯಾವುದೇ ಕುಟುಂಬ ಸಮೀಕ್ಷೆಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು. ಸಮೀಕ್ಷೆ ಕಾರ್ಯಕ್ಕೆ ಒಟ್ಟು 1,20,728 ಗಣತಿದಾರರನ್ನು ನಿಯೋಜಿಸಲಾಗಿದೆ, ಒಟ್ಟು 1,22,085 ಗಣತಿ ಬ್ಲಾಕ್‌ಗಳನ್ನು ಗುರುತಿಸಲಾಗಿದ್ದು, ಅಕ್ಟೋಬರ್ 7ರ ಒಳಗೆ ಗಣತಿ ಕಾರ್ಯ ಪೂರ್ಣಗೊಳ್ಳಬೇಕು.

ಗಣತಿ ನಡೆಸುವ ಶಿಕ್ಷಕರಿಗೆ ಗೌರವಧನದ ಬಗ್ಗೆ ಅನುಮಾನ ಬೇಡ, ಈಗಾಗಲೇ ಗೌರವಧನ ಬಿಡುಗಡೆ ಮಾಡಿದ್ದೇವೆ, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಗಣತಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.

ಇದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಮೀಕ್ಷೆ ಮಾತ್ರವಲ್ಲ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ನಿಗದಿತ ಗುರಿಯ ಪ್ರಗತಿ ಬಗ್ಗೆ ಪ್ರತಿದಿನ ಪರಿಶೀಲನೆ ನಡೆಸಬೇಕು. ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದ್ದೇನೆ. ಕೆಲವು ಜಿಲ್ಲೆಗಳಲ್ಲಿ ಸಮೀಕ್ಷೆ ನಿಧಾನಗತಿಯಲ್ಲಿದ್ದು ಚುರುಕುಗೊಳಿಸಬೇಕು, ಅಗತ್ಯವಿರುವ ಕಡೆ ಅನುದಾನಿತ ಶಾಲೆಗಳ ಶಿಕ್ಷಕರ ಸೇವೆಯನ್ನೂ ಪಡೆದುಕೊಳ್ಳಬೇಕು, ಜಿಲ್ಲಾ ಉಸ್ತುವಾರಿ ಸಚಿವರೊಂದಿಗೂ ಸಂಪರ್ಕದಲ್ಲಿರಬೇಕು.

ಸಮೀಕ್ಷೆ ಕಾರ್ಯದ ಮೇಲ್ವಿಚಾರಣೆಗೆ ಪ್ರತಿ ತಾಲ್ಲೂಕಿಗೆ ಜಿಲ್ಲಾಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಎದುರಾದರೆ ಸ್ಥಳೀಯವಾಗಿ ಸಮಸ್ಯೆ ಬಗೆಹರಿಸಲು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳಲ್ಲಿರುವ ಐಟಿ ತಂತ್ರಜ್ಞರ ನೆರವು ಪಡೆದುಕೊಳ್ಳಬೇಕು ಎಂದರು.

ಗುಡ್ಡಗಾಡು ಪ್ರದೇಶಗಳ ವ್ಯಾಪ್ತಿಯ ಶಾಲೆಗಳಲ್ಲಿ ಸಮೀಕ್ಷಾ ಕೇಂದ್ರಗಳನ್ನು ಆರಂಭಿಸಲು ಅವಕಾಶ ನೀಡಲಾಗಿದೆ, ಜನರು ಕೇಂದ್ರಕ್ಕೆ ಆಗಮಿಸಿ ಸಮೀಕ್ಷೆ ಕಾರ್ಯದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಸಾರಿಗೆ ಬಸ್ ಸರಣಿ ಅಪಘಾತ; ತಪ್ಪಿದ ಭಾರೀ ಅನಾಹುತ

ಜಖಂಗೊಂಡಿದ್ದು, ಬಸ್‌ಗೂ ಹಾನಿಯಾಗಿದೆ.

ಬೆಟ್ಟಕ್ಕೆ ಉಜ್ಜಿದ ಬಸ್: ಚಾಮುಂಡಿಬೆಟ್ಟದಿಂದ ಸಂಜೆ 5 ಗಂಟೆಗೆ ಮೈಸೂರಿನತ್ತ ಬರುತ್ತಿದ್ದ ನಗರ ಸಾರಿಗೆ ಬಸ್(ಕೆಎ.09, ಎಫ್.5260) ವ್ಯೂವ್ ಪಾಯಿಂಟ್‌ನಿಂದ ಮುಂದೆ ಬರುತ್ತಿದ್ದಂತೆ ಚಾಲಕನ ನಿಯಂತ್ರಣ ಕಳೆದುಕೊಂಡಿದೆ. ಎಚ್ಚೆತ್ತ ಚಾಲಕ ಬಸ್ ಹತೋಟಿಗೆ ತೆಗೆದುಕೊಳ್ಳಲು ಯತ್ನಿಸಿ ಕೊನೆಗೆ ಸಾಧ್ಯವಾಗದೇ ಇದ್ದಾಗ ಎಡಬದಿ ಪ್ರಪಾತವಿರುವ ಕಾರಣ ಬಲ ಬದಿಗೆ ನುಗ್ಗಿಸಿದ್ದಾರೆ. ಬಸ್ ಮೊದಲು ಬಲಬದಿಯಲ್ಲಿನ ಬೆಟ್ಟದ ಅಂಚಿಗೆ ಉಜ್ಜಿಕೊಂಡು ಮುಂದೆ ಸಾಗಿದೆ. ಕೊನೆಗೆ ಮುಂದೆ ಸಾಗಿ ಎದುರಿನಿಂದ ಬಂದ ಎರಡು ಕಾರುಗಳಿಗೂ ಡಿಕ್ಕಿ ಹೊಡೆದು, ಬಳಿಕ ಎಡಬದಿಯ ಟ್ರ್ಯಾಕ್‌ಗೆ ಮರಳಿ ರಸ್ತೆ ಬದಿಯ ಐದು ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದು ನಿಂತಿದೆ. ಬಸ್ ಡಿಕ್ಕಿಯಾಗಿ ಐ–20 ಕಾರು(ಕೆಎ.09, ಎಂಇ 1796), ಟ್ಯಾಕ್ಸಿ (ಕೆಎ. 03, ಎಇ.4160) ಜಖಂಗೊಂಡಿವೆ. ಈ ಘಟನೆಯಲ್ಲಿ 15ಕ್ಕೂ ಹೆಚ್ಚು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಾರೀ ಅನಾಹುತ ತಪ್ಪಿದೆ: ಬಸ್ ಬಲಬದಿಗೆ ತಿರುಗದೇ ಎಡಕ್ಕೆ ಚಲಿಸಿದ್ದರೆ ಪ್ರಪಾತಕ್ಕೆ ಉರುಳಿ ಬಿದ್ದು, ಭಾರೀ ಅವಘಡವೇ ಸಂಭವಿಸುತ್ತಿತ್ತು. ಎದುರಿಗೆ ಕಾರುಗಳು ಅಡ್ಡ ಬರದಿದ್ದರೂ ಕಂದಕಕ್ಕೆ ಉರುಳುವ ಸಾಧ್ಯತೆ ಇತ್ತು. ಅದೃಷ್ಟವಶಾತ್ ಅಂತಹ ದೊಡ್ಡ ಅನಾಹುತದಿಂದ ಬಸ್ ಪ್ರಯಾಣಿಕರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಘಟನೆಯಲ್ಲಿ ವಿದ್ಯುತ್ ಕಂಬಗಳು ಮುರಿದು ಕೇಬಲ್ ಬಸ್ ಮೇಲೆ ಬಿದ್ದರೂ ಅವು ಅತ್ಯಾಧುನಿಕ ಮಾದರಿಯದ್ದಾಗಿದ್ದರಿಂದ ವಿದ್ಯುತ್ ಪ್ರವಹಿಸಿಲ್ಲ. ತಾಯಿ ಚಾಮುಂಡೇಶ್ವರಿಯೇ ನಮ್ಮನ್ನು ಕಾಪಾಡಿದ್ದಾಳೆ ಎಂದು ನಿಟ್ಟುಸಿರು ಬಿಟ್ಟಿದ್ದಾರೆ. ಬಸ್ ಅಪಘಾತಕ್ಕೀಡಾಗುತ್ತಿದ್ದಂತೆ ಹಿಂದೆ ಬರುತ್ತಿದ್ದ ವಾಹನ ಸವಾರರು ಬಸ್‌ನಲ್ಲಿದ್ದ ಗಾಯಾಳು ಪ್ರಯಾಣಿಕರ ನೆರವಿಗೆ ದಾವಿಸಿದ್ದಾರೆ. ಇತ್ತ ಕಾರಿನಲ್ಲಿ ಬೆಟ್ಟಕ್ಕೆ ಬರುತ್ತಿದ್ದ ವರಿಗೂ ಗಾಯಗಳಾಗಿದ್ದು, ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗಿದೆ.

ಹೆಚ್ಚಾಯ್ತು ವೇಗ: ವ್ಯೂವ್ ಪಾಯಿಂಟ್ ದಾಟುತ್ತಿದ್ದಂತೆ ಬಸ್ ವೇಗ ಇದ್ದಕ್ಕಿದ್ದ ಹಾಗೆ ಹೆಚ್ಚಾಗಿದೆ. ಚಾಲಕ ನಿಯಂತ್ರಣಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಆದರೆ, ಬ್ರೇಕ್ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅಪಘಾತದ ವೇಳೆ ಮಳೆ ಬರುತ್ತಿದ್ದ ಕಾರಣ ಬಸ್ ನಿಯಂತ್ರಣಕ್ಕೆ ಸಿಕ್ಕಿಲ್ಲ ಎನ್ನಲಾಗಿದೆ. ಈ ಬಸ್ ಚಾಲಕ ಅನುಭವಿಯಾಗಿದ್ದು, ಇನ್ನೇನು 2–3 ತಿಂಗಳಲ್ಲಿ ನಿವೃತ್ತಿಯಾಗಲಿದ್ದಾರೆ. ಸಾರಿಗೆ ಸಂಸ್ಥೆಯ ತಾಂತ್ರಿಕ ಅಧಿಕಾರಿಗಳು ಅಪಘಾತಕ್ಕೆ ಕಾರಣವೇನಿರಬಹುದೆಂದು ಪರಿಶೀಲಿಸುತ್ತಿದ್ದಾರೆ. ಸ್ಥಳಕ್ಕೆ ಸಿದ್ಧಾರ್ಥ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಕೆ.ವಿ.ಶ್ರೀಧರ್, ಸಾರಿಗೆ ಸಂಸ್ಥೆಯ ತಾಂತ್ರಿಕ ಅಧಿಕಾರಿ ಎಂ.ಜಿ.ಜಯಕುಮಾರ್ ಹಾಗೂ ಇನ್ನಿತರ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು ದಸರಾ ಮಹೋತ್ಸವ-2025

ಮೈಸೂರು ದಸರಾ ಮೆಗಾಹಿಟ್ ಯುವ ದಸರಾ-4

ಟಾಲಿವುಡ್ ಮ್ಯೂಸಿಕ್ ಮಾಂತ್ರಿಕ ದೇವಿ ಶ್ರೀ ಪ್ರಸಾದ್ ಸಂಗೀತ ಮೋಡಿ



ಯುವ ದಸರಾ ರಸಸಂಜೆ ಕಾರ್ಯಕ್ರಮದಲ್ಲಿ ದೇವಿ ಶ್ರೀ ಪ್ರಸಾದ್ ಮೋಡಿ

ಮೈಸೂರು, ಸೆ.26(ವಿವಿಹೆಚ್)- ದಕ್ಷಿಣ ಭಾರತದ ರಾಕ್‌ಸ್ಟಾರ್ ಖ್ಯಾತಿಯ ಸಂಗೀತ ಸಂಯೋಜಕ, ಟಾಲಿವುಡ್ ಮ್ಯೂಸಿಕ್ ಮಾಂತ್ರಿಕ ದೇವಿ ಶ್ರೀ ಪ್ರಸಾದ್(ಡಿಎಸ್‌ಪಿ) ಸೃಷ್ಟಿಸಿದ ಸಂಗೀತ ಲೋಕದಲ್ಲಿ ಮೈಸೂರು ಜನರು ಕಳೆದು ಹೋದರು...!

ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಬಳಿಯ ಆವರಣದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಮೆಗಾ ಸಂಗೀತ ರಸಸಂಜೆ ಕಾರ್ಯಕ್ರಮ 'ಯುವ ದಸರಾ'ದ ನಾಲ್ಕನೇ ದಿನವಾದ ಶುಕ್ರವಾರ ಡಿಎಸ್‌ಪಿ ಖ್ಯಾತಿಯ ದೇವಿ ಶ್ರೀ ಪ್ರಸಾದ್ ಸಂಗೀತ ರಸಧಾರೆ ಹರಿಸಿದರು.

ತಮ್ಮ ನೆಚ್ಚಿನ ಗಾಯಕನ ಕಣ್ತುಂಬಿಕೊಳ್ಳಲು ಬಂದಿದ್ದ ಜನ ಸಾಗರದ ಎದೆಯಲ್ಲಿ ಸಂಗೀತ ಅಲೆ ಸೃಷ್ಟಿಸಿದ ಡಿಎಸ್‌ಪಿ, ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಅವರ ಸಂಗೀತ ಮೋಡಿಗೆ ಮರುಳಾದ ಯುವ ಸಮೂಹ ಕುಣಿದು ಕುಪ್ಪಳಿಸಿ, ಮೈಮರೆತರು.

'ಸ ರಿ ಗ ಮ ಪ ದ ನಿ ಸ ಹೇಯ್ ಕಮಾನ್... ಕಮಾನ್.. ಯೂ ಜಲ್ಸಾ' ಹಾಡಿನ ಮೂಲಕ ವೇದಿಕೆ ಏರಿದ ರಾಕ್‌ಸ್ಟಾರ್ ಡಿಎಸ್‌ಪಿ ನನ್ನೊಂದಿಗೆ ಹಾಡಲು, ಸಂಭ್ರಮಿಸಲು ಸಿದ್ದರಿದ್ದೀರಾ.... ಕನ್ನಡ ಜನರು ಎಲ್ಲಾ ಕಲಾವಿದರಿಗೂ ಒಂದೇ ಮಾದರಿಯ ಪ್ರೀತಿ ತೋರುತ್ತೀರಾ. ನೀವು ನೀಡುವ ಏನರ್ಜಿಯಿಂದ ನಾವು ಇಷ್ಟು ಅದ್ಭುತವಾದ ಹಾಡುಗಳನ್ನು ಸಂಯೋಜಿಸಲು ಸಾಧ್ಯವಾಯಿತು ಎಂದು ಕನ್ನಡಿಗರಿಗೆ ಧನ್ಯವಾದ ಹೇಳಿದರು. ಪುಷ್ಪ ಚಿತ್ರದ 'ನೋಟ ಬಂಗಾರವಾಯಿತೇ ಶ್ರೀವಲ್ಲಿ'. 'ಕಾದು, ಕಾದು ನಾ.. ಕುಳಿತಿರುವೆ' ಹಾಡುಗಳನ್ನು ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಹಾಡಿ ನೆರೆದಿದ್ದವರನ್ನು ರಂಜಿಸಿದರು.

ಅಲ್ಲು ಅರ್ಜುನ್ ನಟನೆಯ ಆರ್ಯ-2 ಚಿತ್ರದ 'ಒಪ್ಪೆನಂತಾ ಈ ಪ್ರೇಮಕಿ', ಕನ್ನಡದ ಸ್ಟಾರ್ ನಟ ಗಣೇಶ್ ಅವರ ಸಂಗಮ ಚಿತ್ರದ 'ಎ ದಿಲ್ ಮಾಂಗೆ ಮೋರ್' ಹಾಡು ಹಾಡುತ್ತಿದ್ದಂತೆ ನೆರೆದಿದ್ದ ಪ್ರೇಕ್ಷಕ ವೃಂದ ಅವರೊಂದಿಗೆ ದನಿಗೂಡಿಸಿತು.

ಗಾಯಕಿ ಹರಿಪ್ರಿಯಾ ಜೊತೆಗೂಡಿ 'ರಾಕಿ.. ರಾಕಿ... ಕವಾಸಕಿ', 'ಬಾಸು ವೇರ್ ಇಸ್ ದ ಪಾರ್ಟಿ', 'ಶಂಕರ್ ದಾದಾ ಜಿಂದಾಬಾದ್' ಹಾಡುಗಳ ಜೊತೆಗೆ ತೆಲುಗಿನ ಖ್ಯಾತ ನಟರಾದ ಮಹೇಶ್ ಬಾಬು, ಎನ್‌ಟಿಆರ್, ಅಲ್ಲು ಅರ್ಜುನ್ ಸೇರಿದಂತೆ ಹಲವು ನಟರ ಗೀತೆಗಳನ್ನು ಹಾಡಿ ಭಾರೀ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಂಡರು. ಜೊತೆಗೆ ಹರ್ ಘರ್ ತಿರಂಗಾ ಹಾಡಿಗೆ ಭಾರತದ ತ್ರಿವಣ ಧ್ವಜ ಹಿಡಿದು ವಂದೇ ಮಾತರಂ ವಂದೇ ಮಾತರಂ... ಎಂದು ಕೂಗಿ ಪ್ರೇಕ್ಷರಿಂದಲೂ ಹಾಡಿಸಿ ದೇಶ ಪ್ರೇಮ ಮೆರೆದರು.

ಆಸೀಸ್ ಕೌರ್ ಗಾನಸಂಜೆ: ಇದಕ್ಕೂ ಮುನ್ನಾ ಹಿನ್ನೆಲೆ ಗಾಯಕಿ ಆಸೀಸ್ ಕೌರ್ ಅವರು ಹಿಂದಿ ಹಾಡುಗಳನ್ನು ಹಾಡಿ ಪ್ರೇಕ್ಷಕರ ರಂಜಿಸಿದರು. ಕನ್ನಡ ಹಾಡುಗಳು ನನಗೆ ಅಷ್ಟಾಗಿ ಬರುವುದಿಲ್ಲ, ನಿಮಗಾಗಿ ಪ್ರಯತ್ನಿಸುತ್ತೇನೆ ಎಂದು ದಿವಂಗತ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತ್ಯತೆ.. ಮತ್ತೆ ಹೇಳುತ್ಯೆತೆ... ನೀನೆ ರಾಜಕುಮಾರ' ಹಾಡಿದರು. ಇದರ ಜೊತೆಗೆ ಪುಷ್ಪ ಚಿತ್ರದ 'ಹೂ.. ಅಂತಿಯ ಮಾವ.. ಹುಹು ಅಂತೀಯ ಮಾವ.. ಹಾಡಿಗೆ ನೆರೆದಿದ್ದವರು ಭರ್ಜರಿ ಸ್ಟೆಪ್ಸ್ ಹಾಕಿದರು.



ಗಾಯಕಿ ಹರಿಪ್ರಿಯಾ & ಡಿಎಸ್‌ಪಿ ಗಾಯನ ಮೋಡಿ

ಅರಮನೆ ಅಂಗಳದಲ್ಲಿ ಸಂಗೀತ ಸ್ವರಗಳ ಲೀಲೆ

ಪೊಲೀಸ್ ಬ್ಯಾಂಡ್ ವಾದ್ಯಸಂಗೀತದ ಅಲೆಯಲ್ಲಿ ತೇಲಿದ ಶ್ರೋತೃಗಳು

ಮೈಸೂರು,ಸೆ.26(ಪಿಎಂ)- 'ರಂಗೀಲಾ' ಹಿಂದಿ ಸಿನಿಮಾದ 'ತನ್ಹಾ ತನ್ಹಾ ಯಹಾ ಪೆ ಜೀನಾ...', 'ಕಾದಲನ್' ಸಿನಿಮಾದ 'ಮುಕ್ಕಾಲ ಮುಕ್ಕಾಬಲ ಲೈಲಾ ಓ ಲೈಲಾ...' ಹೀಗೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರ ಸಂಗೀತ ಸಂಯೋಜನೆ ಗೀತೆಗಳನ್ನು ಹೊಮ್ಮಿಸಿದ ವಾದ್ಯಸಂಗೀತಕ್ಕೆ ಶ್ರೋತೃಗಳು ನವೋಲ್ಲಾಸದ ನಾದಮಯ ಅಲೆಯಲ್ಲಿ ತೇಲಿದರು.

ಅರಮನೆ ಆವರಣದಲ್ಲಿ ಇಂತಹ ಸಂಗೀತ ಸ್ವರಗಳ ಲೀಲೆಯು ಪೊಲೀಸ್ ಬ್ಯಾಂಡ್‌ನಲ್ಲಿ ಸೂಸಿತು. ಬಾಲಿವುಡ್ ಚಿತ್ರಗೀತೆಗಳ ವಾದ್ಯ ಸಂಗೀತ ಮಾತ್ರವಲ್ಲದೆ, ಶಾಸ್ತ್ರೀಯ ವಾದ್ಯಸಂಗೀತವೂ ಸಭಿಕರನ್ನು ತಲೆದೂಗುವಂತೆ ಮಾಡಿತು.

ಅರಮನೆ ಆವರಣದಲ್ಲಿ ದಸರಾ ಪ್ರಯುಕ್ತ ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಸಮೂಹ ವಾದ್ಯಮೇಳದಲ್ಲಿ (ಪೊಲೀಸ್ ಮಾಸ್ ಬ್ಯಾಂಡ್) ಆಂಗ್ಲ ವಾದ್ಯವೃಂದ ಹಾಗೂ ಕರ್ನಾಟಕ ವಾದ್ಯವೃಂದ ಪ್ರಸ್ತುತಪಡಿಸಿದ ವಾದ್ಯಸಂಗೀತ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು.

ಎ.ಆರ್.ರೆಹಮಾನ್ ಅವರ ಚಿತ್ರಗೀತೆಗಳನ್ನು ಬಹು ವಾದ್ಯೋಪಕರಣಗಳಲ್ಲಿ ನುಡಿಸುವ ಮೂಲಕ ಆಂಗ್ಲ ವಾದ್ಯವೃಂದವು ಸಭಿಕರಲ್ಲಿ ರೋಮಾಂಚನ ಉಂಟು ಮಾಡಿತು. ಪಾಶ್ಚಾತ್ಯ ಹಾಗೂ ಶಾಸ್ತ್ರೀಯ ಸಂಗೀತದ ಸಮ್ಮಿಲನ ಶ್ರೋತೃಗಳನ್ನು ಸ್ವರಾಗ ತರಂಗದಲ್ಲಿ ತೇಲಿಸಿತು. ಪೊಲೀಸ್ ಸಂಗೀತ ಕಲಾವಿದರ ಕೈಚಳಕದಲ್ಲಿ ಸೂಸಿದ ಸಂಗೀತದ ನಾದ ಮಾಧುರ್ಯಕ್ಕೆ ಸಭಿಕರು ಮನ ಸೋತು ಚಪ್ಪಾಳೆಯ ಮಳೆ ಸುರಿಸಿದರು.

ಮ್ಯಾಂಡೋಲಿನ್, ಪಿಟೀಲು ಹಾಗೂ ಕೊಳಲು ಮೊದಲಾದ ವಾದ್ಯಗಳನ್ನು ಬಳಸಿಕೊಂಡು ವಾದ್ಯಗಾರ ಟೋನಿ ಮ್ಯಾಥ್ಯೂ ಅವರ ನೇತೃತ್ವದಲ್ಲಿ ಎ.ಆರ್.ರೆಹ ಮಾನ್ ಸಂಗೀತ ನಿರ್ದೇಶನದ ಗೀತೆಗಳನ್ನು ಆಂಗ್ಲ ವಾದ್ಯವೃಂದ ಸಾದರಪಡಿಸಿತು. ಆರಂಭದಲ್ಲಿ ರಾಯಲ್ ಫ್ಯಾನ್‌ಫೇರ್-ಹೆರಾಲ್ಡ್ ಟ್ರಂಪೆಟ್ (ರಾಜ ಕಹಳೆ) ಮೊಳಗಿಸುವ ಮೂಲಕ ಅತಿಥಿಗಳನ್ನು ಬರಮಾಡಿಕೊಳ್ಳಲಾಯಿತು.

ಬಳಿಕ ವಿಂಗ್ಸ್ ಮಾರ್ಚ್ ಮೂಲಕ ಅರಮನೆ ಆವರಣದಲ್ಲಿ ಪೊಲೀಸ್ ಬ್ಯಾಂಡ್‌ನ ಎಲ್ಲಾ ತಂಡಗಳು ಸಮಾವೇಶಗೊಂಡವು. ಎಲ್ಲಾ ತಂಡಗಳು ಜನರಲ್ ಸೆಲ್ಯೂಟ್ ಸಾದರಪಡಿಸಿ, 'ಭಾರತ್ ಕೀ ಜವಾನ್...', 'ವಿಜಯ್‌ಭಾರತಿ...' ಮತ್ತು 'ಜಲಪಕ್ಷಿ...' ವಾದ್ಯ ಸಂಗೀತ ಹೊಮ್ಮಿತು.

'ಕ್ವೀಲ್ಸ್ ಕಲರ್' ಸಂಗೀತದೊಂದಿಗೆ ಪ್ರವೀಣ್‌ಕುಮಾರ್ ನೇತೃತ್ವದಲ್ಲಿ 'ಸ್ಟಿಕ್ ಮೇಜರ್ಸ್ ಶೋ' ವಿನ್ಯಾಸ ಮೂಡಿಸಿದ್ದು ಸಭಿಕರ ಮನಸೂರೆಗೊಂಡಿತು. 'ಕದಮ್ ಕದಮ್ ಬಢೇಜಾ...' ಗೀತೆ ಹಾಗೂ 'ಫೈಟರ್' ಸಿನಿಮಾದ 'ವಂದೇ ಮಾತರಂ...' ಗೀತೆಯನ್ನು ಪ್ರಸ್ತುತಪಡಿಸಿದ ಆಂಗ್ಲ ಬ್ಯಾಂಡ್, ದೇಶಾಭಿಮಾನ ಮೆರೆಯಿತು. ಬಳಿಕ ಬ್ಯಾಗ್‌ಪೈಪ್ ವಾದ್ಯಗಳಲ್ಲಿ 'ಸಾರೆ ಜಹಾನ್ ಸೆ ಅಚ್ಚಾ...' ಸೇರಿದಂತೆ ವಿವಿಧ ಗೀತೆಗಳ ಸಂಗೀತ ಸೂಸಿತು.



ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಅರಮನೆ ಆವರಣದಲ್ಲಿ ಶುಕ್ರವಾರ ಸಂಜೆ ಪೊಲೀಸ್ ಸಮೂಹ ವಾದ್ಯಮೇಳ ನಡೆಯಿತು.

ಸಂಗೀತದ ಆಹ್ಲಾದಕರ ಇಡೀ ಅರಮನೆ ಆವರಣ ಸೂಸದೇ ಹಲವರಿಗೆ ನಿರಾಸೆ

ಮೈಸೂರು,ಸೆ.26(ಪಿಎಂ)- ಅರಮನೆ ಆವರಣದಲ್ಲಿ ಶುಕ್ರವಾರ ಸಂಜೆ ನಡೆದ ಪೊಲೀಸ್ ಬ್ಯಾಂಡ್ ಸಮೂಹ ವಾದ್ಯಮೇಳ ಅದ್ಭುತವಾಗಿಯೇನೂ ಮೂಡಿಬಂದಿತು. ಆದರೆ ಈ ರೀತಿ ಆಹದ್ಲಾಕರ ಸೀಮಿತ ಸ್ಥಳಕ್ಕಷ್ಟೇ ಇತ್ತು. ಧ್ವನಿವರ್ಧಕ ಸೂಕ್ತ ರೀತಿಯಲ್ಲಿ ಇಲ್ಲದ ಕಾರಣ ಕಾರ್ಯಕ್ರಮದ ವೇದಿಕೆಯಿಂದ ಸಾಕಷ್ಟು ದೂರದಲ್ಲಿದ್ದ ಜನರಿಗೆ ಸಂಗೀತ ಅಷ್ಟೇನೂ ಸೊಗಸಾಗಿ ಕೇಳಿ ಬರುತ್ತಿರಲಿಲ್ಲ. ಅಲ್ಲದೇ, ನಿರೂಪಕರು ನೀಡುತ್ತಿದ್ದ ಕಾರ್ಯಕ್ರಮ ವಿವರಗಳೂ ಸರಿಯಾಗಿ ಕೇಳುತ್ತಿರಲಿಲ್ಲ. ಇದರಿಂದ ಸಾಕಷ್ಟು ಜನತೆಗೆ ನಿರಾಸೆಯಾಯಿತು.

ಅರ್ಧಕ್ಕೆ ಮೊಟಕು: ಡಾ.ಎಂ.ಮಳವಳ್ಳಿ ಮಹದೇವಸ್ವಾಮಿ ಅವರ ಜಾನಪದ ಗೀತೆ ಕಾರ್ಯಕ್ರಮವನ್ನು ಅರಮನೆ ವೇದಿಕೆಯಲ್ಲಿ ಅರ್ಧಕ್ಕೆ ಮೊಟಕುಗೊಳಿಸಲಾಯಿತು. ಅರ್ಧ ಎನ್ನುವುದಕ್ಕಿಂತ ಮಹದೇವಸ್ವಾಮಿ ಅವರು ಸಾದರಪಡಿಸಿದ ಕೇವಲ ಒಂದೇ ಗೀತೆ ಬಳಿಕ ಅವರ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. 'ಚೆಲ್ಲಿದರೋ ಮಲ್ಲಿಗೆಯ...' ಗೀತೆಯನ್ನು ಮಹದೇವಸ್ವಾಮಿಯವರು ಸುಶ್ರಾವ್ಯವಾಗಿ ಸಾದರಪಡಿಸಿ ಅಭಿಮಾನಿಗಳಿಂದ ಚಪ್ಪಾಳೆ ಗಿಟ್ಟಿಸಿದರು. ಆ ಬಳಿಕ ಮುಂದಿನ ಹಾಡು ಪ್ರಸ್ತುತಪಡಿಸಲು ಮುಂದಾಗುತ್ತಿದ್ದಂತೆ ಮಧ್ಯಪ್ರವೇಶಿಸಿದ ನಿರೂಪಕರು, ಪೊಲೀಸ್ ಬ್ಯಾಂಡ್ ವಾದ್ಯಸಂಗೀತ ಸಂಬಂಧ ಧ್ವನಿ ಪರೀಕ್ಷೆ ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ ಐದು ನಿಮಿಷದ ಬಳಿಕ ಮುಂದಿನ ಹಾಡು ಸಾದರಪಡಿಸಬಹುದು ಎಂದು ಕೋರಿದರು. ಆದರೆ ಅತ್ತ ನಿರ್ಮಿಸಿದ್ದ ಮತ್ತೊಂದು ವೇದಿಕೆಯಲ್ಲಿ ಪೊಲೀಸ್ ಬ್ಯಾಂಡ್ ವಾದ್ಯಮೇಳವೇ ಆರಂಭಗೊಂಡಿತು. ನಂತರ ಮತ್ತೆ ಹಾಡಲು ಅವಕಾಶ ನೀಡಿದ ವೇಳೆ ಮಳವಳ್ಳಿ ಮಹದೇವಸ್ವಾಮಿ ಮಾತನಾಡಿ, ಈ ರೀತಿ ಕಲಾವಿದರನ್ನು ಅವಮಾನಿಸಬೇಡಿ ಎಂದು ಬೇಸರ ವ್ಯಕ್ತಪಡಿಸಿದರು.

ಅಲ್ಲದೆ, ಮುತ್ತಯ್ಯ ಭಾಗವತ್ ಅವರ ಸಂಯೋಜನೆಯ 'ದುರ್ಗಾ ದೇವಿ ದುರಿತ ನಿವಾರಿಣಿ..' ಗೀತೆಯನ್ನು 'ನವರಸ ಕನ್ನಡ' ರಾಗ ಹಾಗೂ 'ಆದಿ' ತಾಳದಲ್ಲಿ ಪ್ರಸ್ತುತಪಡಿಸಿ ದುರ್ಗಾ ಪರಮೇಶ್ವರಿ ಆರಾಧಿಸಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಲಾಯಿತು. ಜೊತೆಗೆ ಪಾಶ್ಚಾತ್ಯ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಸಮ್ಮಿಲನದ ವಾದ್ಯ ಸಂಗೀತಕ್ಕೆ ಶ್ರೋತೃಗಳು ಸಂಭ್ರಮಿಸಿದರು.

ಅರಮನೆ ಆವರಣದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜನರು, ಈ ವಿಶಿಷ್ಟ ಅನುಭವಕ್ಕೆ ಸಾಕ್ಷಿಯಾದರು. ಇದೇ ವೇಳೆ ವಾದ್ಯವೃಂದಗಳ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಪಾರಿತೋಷಕ ವಿತರಣೆ ಮಾಡಲಾಯಿತು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಆರಕ್ಷಕ ಮಹಾನಿರೀಕ್ಷಕ ಡಾ.ಎಂ.ಎ.ಸಲೀಂ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್ ಅವರ ಪತ್ನಿ ಕನ್ನಿಕಾ ಪರಮೇಶ್ವರಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾ ರಾಣಿ, ದಕ್ಷಿಣ ವಲಯ ಡಿಐಜಿಪಿ ಡಾ.ಎಂ. ಬಿ.ಬೋರಲಿಂಗಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ ಮತ್ತಿತರರು ಹಾಜರಿದ್ದರು.

ರೈತ ದಸರಾ ಸಂಭ್ರಮಕ್ಕೆ ಚಾಲನೆ; ಮೆರವಣಿಗೆಯಲ್ಲಿ ಅನ್ನದಾತರ ಬದುಕು ಅನಾವರಣ

ರೈತರ ಬದುಕಿಗೆ ಬೆಂಬಲವಾಗಿ ನಾವೆಲ್ಲಾ ನಿಲ್ಲಬೇಕು: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಮತ

ಮೈಸೂರು, ಸೆ.26(ಎಂಕೆ)- ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ 'ರೈತ ದಸರಾ' ಅದ್ಧೂರಿ ಮೆರವಣಿಗೆಯೊಂದಿಗೆ ಶುಕ್ರವಾರ ಚಾಲನೆ ಪಡೆಯಿತು.

ನಗರದ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಹಸಿರು ವೇದಿಕೆಯಿಂದ ಆರಂಭವಾದ ರೈತ ದಸರಾ ಮೆರವಣಿಗೆಯು ನಂದಿ ಧ್ವಜ, ನಗಾರಿ, ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಚಿಲಿಪಿಲಿ ಗೊಂಬೆ, ನಾದಸ್ವರ ಸೇರಿದಂತೆ ಹತ್ತಾರು ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಸಡಗರ-ಸಂಭ್ರಮದಿಂದ ಜೆ.ಕೆ.ಮೈದಾನದವರೆಗೆ ಸಾಗಿತು.

ಹಸಿರು ಸೀರೆಯುಟ್ಟು ಕಂಗೊಳಿಸುತ್ತಿದ್ದ ರೈತ ಮಹಿಳೆಯರು, ಕಳಸ ಹೊತ್ತು ಸಾಗುತ್ತಾ ಮೆರವಣಿಗೆಗೆ ಮೆರಗು ತಂದರೆ, ಆಂಧ್ರದ ಪುಂಗನೂರು ತಳಿ ಹಾಗೂ ಹಳ್ಳಿಕಾರ್ ತಳಿ ಎತ್ತುಗಳು, ಬಂಡೂರು ಕುರಿಗಳು ಗಮನ ಸೆಳೆದವು. ಹಾಗೆಯೇ ಬೆಳೆಗೆ ಕ್ರಿಮಿನಾಶಕ ಸಿಂಪಡಿಸುವ ಡ್ರೋನ್, ಭತ್ತ ನಾಟಿ ಯಂತ್ರ, ಇಫ್ಕೊ ನ್ಯಾನೋ ಯೂರಿಯಾ ಲಿಕ್ವಿಡ್, ಸ್ವರಾಜ್ ಯಂತ್ರ, ಕಿಸಾನ್ ಬಂಡಿ, ಪವರ್ ಇಂಟರ್ ಕಲ್ಟಿವೇಟರ್ ಯಂತ್ರ, ಕಳೆ ತೆಗೆಯುವ ಯಂತ್ರ, ಹೈಟೆಕ್ ಹಾರ್ವೆಸ್ಟರ್ ಹಬ್, ಬಹು ಬೆಳೆಯ ಒಕ್ಕಣೆ ಯಂತ್ರ, ಭತ್ತದ ಬೇಲರ್, ಕಬ್ಬು ನಾಟಿ ಯಂತ್ರ, ಕಬ್ಬು ಕಟಾವು ಯಂತ್ರೋಪಕರಣಗಳನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಲಾಯಿತು.

ರೈತರಿಂದ ಪರಂಪರೆ ಉಳಿದಿದೆ: ರೈತ ದಸರಾ ಉದ್ಘಾಟಿಸಿ, ಮೆರವಣಿಗೆಗೂ ಚಾಲನೆ ನೀಡಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಮೂರು ದಿನಗಳ ರೈತ ದಸರಾ ಏರ್ಪಡಿಸಲಾಗಿದೆ. ನಮ್ಮ ಪರಿಸರ, ಆಚಾರ-ವಿಚಾರಗಳನ್ನು ಮುಂದುವರೆಸುವಲ್ಲಿ ನಮ್ಮ ನಾಡಿನ ರೈತರು ಎಂದೆಂದಿಗೂ ಮುಂದು. ಈ ಬಾರಿ ರೈತ ದಸರಾದಲ್ಲಿ ರೈತರಿಗೆ ಹೆಚ್ಚು ಅವಕಾಶ ನೀಡಬೇಕು, ರೈತರ ಬದುಕಿಗೆ ಬೆಂಬಲವಾಗಿ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು. ಮೈಸೂರು ದಸರಾ ರಾಜ್ಯ ಮತ್ತು ರಾಷ್ಟ್ರವೇ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವುದು ನಮ್ಮ ದೇಶದ ಹೆಮ್ಮೆಯ ವಿಷಯ ಎಂದರು.

ತಂತ್ರಜ್ಞಾನ ಪರಿಚಯವಾಗಬೇಕು: ಪಶುಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ರೈತ ದಸರಾದಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಪರಿಚಯ ಮಾಡುವುದು, ಅವುಗಳ ಉಪಯೋಗದ ಬಗ್ಗೆ ತಿಳಿಸುವಂತಹ ಕೆಲಸ ಮಾಡುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಕೃಷಿ ದಿನ ಕಳೆದಂತೆ ದುಬಾರಿಯಾಗುತ್ತಿದ್ದು, ರೈತರು ವ್ಯವಸಾಯದಲ್ಲಿ ಆಧುನಿಕ ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಳಿಕ ಎತ್ತಿನ ಗಾಡಿ ಹತ್ತಿದ್ದ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಕೆ.ಹರೀಶ್‌ಗೌಡ ಹಾಗೂ ರವಿಶಂಕರ್ ಜೆ.ಕೆ.ಮೈದಾನದವರೆಗೆ ಸಾಗಿ ಗಮನ ಸೆಳೆದರು. ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ, ರೈತ ದಸರಾ ಉಪಸಮಿತಿ ಅಧ್ಯಕ್ಷ ಕೆ.ಪಿ. ಯೋಗೇಶ್, ಕಾರ್ಯಾಧ್ಯಕ್ಷ ಕೆ.ಹೆಚ್.ರವಿ, ಉಪಾಧ್ಯಕ್ಷ ಹರೀಶ್‌ಮೊಗಣ್ಣ ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.



ಮೈಸೂರು ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ 'ರೈತ ದಸರಾ' ಉದ್ಘಾಟಿಸಿದರು. ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್‌ಗೌಡ, ರವಿಶಂಕರ್, ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿ ಸಿದ್ದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ರೈತ ದಸರಾವಲ್ಲ... ರಾಜಕೀಯ ದಸರಾ...!

ರೈತ ದಸರಾ ಎಂದೇಳಿ ನಮ್ಮನ್ನೆಲ್ಲಾ ಕರೆಸಿ, ಅವಕಾಶ ನೀಡದೆ ಯಾರ್‍ಯಾರಿಗೂ ಹಸಿರು ಶಾಲು ಹೊದಿಸಿ ರೈತರನ್ನು ಅಪಮಾನ ಮಾಡಲಾಗಿದೆ. ಇದು ರೈತ ದಸರಾವಲ್ಲ. ಜನಪ್ರತಿನಿಧಿಗಳ ಹಿಂಬಾಲಕರ ರಾಜಕೀಯ ದಸರಾ ಎಂದು ಕೆಲ ರೈತ ಮುಖಂಡರು ತೀವ್ರ ಅಸಮಾದಾನ ವ್ಯಕ್ತಪಡಿಸಿದರು.

ಉದ್ಘಾಟನೆ ಸಂದರ್ಭದಲ್ಲಿ ವೇದಿಕೆ ಮೇಲೆ ಗುಂಪುಗೂಡಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಕಂಡು ಎಲ್ಲರೂ ರೈತರಾ... ಎಲ್ಲರಿಗೂ ಹೊಲ ಉಳುವುದಕ್ಕೆ ಬರುತ್ತೆದೆಯಾ ಎಂದು ವ್ಯಂಗ್ಯವಾಡಿದ ರೈತ ಮುಖಂಡರು, ರೈತ ದಸರಾ ಉದ್ಘಾಟನೆಗೆಂದು ಅಧಿಕಾರಿಗಳು ನಮ್ಮನ್ನೆಲ್ಲಾ ಕರೆಸಿ, ವೇದಿಕೆ ಮೇಲೆ ನಿಲ್ಲಲೂ ಅವಕಾಶ ಕೊಡದೆ ಅವಮಾನಿಸಿದ್ದಾರೆ ಎಂದು ಬೇಸರ ಹೊರಹಾಕಿದರು.

ಬೆಳೆದ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಿ ಖರೀದಿಸಿದರೆ ಮಾತ್ರವೇ ರೈತರ ಬದುಕು ಹಸನಾಗುವುದು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ರೈತರ ವೇದಿಕೆ ರಾಜಕಾರಣಿಗಳ ಪಾಲಾಗಿರುವುದಕ್ಕೆ ತಾಜಾ ಉದಾಹರಣೆ ಎಂದು ಕಿಡಿಕಾರಿದರು.



ರೈತ ದಸರಾ ಮೆರವಣಿಗೆಯಲ್ಲಿ ಸಾಗಿದ ಸಾಂಸ್ಕೃತಿಕ ಕಲಾ ತಂಡಗಳನ್ನು ಕಾಣಬಹುದು

ರೈತರ ಕೃಷಿ ಜೀವನ ಅನಾವರಣಗೊಳಿಸಿದ ದಸರಾ ಕೃಷಿ ವಸ್ತು ಪ್ರದರ್ಶನ

ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಂದ ಉದ್ಘಾಟನೆ, ಮೆಚ್ಚುಗೆ



ಕೃಷಿ ವಸ್ತು ಪ್ರದರ್ಶನದಲ್ಲಿ ಲಕ್ಷಾಂತರ ಮೌಲ್ಯದ ಹಳ್ಳಿಕಾರ್ ಹಸು

ಮೈಸೂರು,ಸೆ.26(ಜಿಎ)-ದಸರಾ ಮಹೋತ್ಸವದಲ್ಲಿ ರೈತರ ಜೀವನ ಶೈಲಿ ಅನಾವರಣಗೊಳಿಸುವ ಕೃಷಿ ವಸ್ತು ಪ್ರದರ್ಶನಕ್ಕೆ ಕೃಷಿ ಸಚಿವ ಚಲುವರಾಯ ಸ್ವಾಮಿ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ದಸರಾ ಪ್ರಯುಕ್ತ ಜೆ.ಕೆ. ಮೈದಾನದಲ್ಲಿ ದಸರಾ ಮಹೋತ್ಸವದ ಅಂಗವಾಗಿ ರೈತ ದಸರಾ ಉಪ ಸಮಿತಿಯ ವತಿಯಿಂದ ಆಯೋಜಿಸಿದ್ದ ಕೃಷಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದ ಅವರು, ಎಲ್ಲಾ ಮಳಿಗೆಗಳಿಗೆ ಭೇಟಿ ನೀಡಿ, ಸಂತಸ ವ್ಯಕ್ತಪಡಿಸಿದರು.

ಧಾನ್ಯಗಳು, ಪುಷ್ಪ ಕೃಷಿ, ಪ್ರಾಣಿಗಳ ಸಾಕಾಣಿಕೆ ಬಗ್ಗೆ ಮಾಹಿತಿ ನೀಡಲು ವಿಶೇಷ ಪ್ರದರ್ಶನ ಏರ್ಪಡಿಸಲಾಗಿತ್ತು. ಕೃಷಿ, ಮೀನುಗಾರಿಕೆ, ತೋಟಗಾರಿಕೆ, ರೇಷ್ಮೆ, ಕರ್ನಾಟಕ ಪಶು ವೈದ್ಯಕೀಯ, ಬೀದರ್‌ನ ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ, ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಸಾಮಾಜಿಕ ಅರಣ್ಯ ಇಲಾಖೆ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರೈತ ಉತ್ಪಾದಕರ ಸಂಸ್ಥೆ ಸೇರಿದಂತೆ 46 ಮಳಿಗೆಗಳಲ್ಲಿ ಕೃಷಿ ಕುರಿತಂತೆ ಹಲವು ಮಳಿಗೆಗಳಲ್ಲಿ ರೈತರಿಗೆ ಮಾಹಿತಿ ನೀಡಲಾಯಿತು.

ಬರಗಾಲ ನಿರ್ವಹಣೆ ಪರ್ಯಾಯ ಬೆಳೆ ಪದ್ಧತಿ ಹಾಗೂ ಮಣ್ಣು ನೀರು ಸಂರಕ್ಷಣಾ ವಿಧಾನ, ಪಿಎಂ ಕಿಸಾನ್, ರೈತರ ಬೆಳೆ ಸಮೀಕ್ಷೆ, ಪ್ರಧಾನ ಮಂತ್ರಿ ಕೃಷಿ ಸಿಂಚೈ, ರೈತ ಸಂಪರ್ಕ ಕೇಂದ್ರಗಳು, ಸಿರಿಧಾನ್ಯ ವಿವರ ಸೇರಿದಂತೆ ಸರ್ಕಾರದ ಯೋಜನೆಗಳ ಮಾಹಿತಿ ಮತ್ತು ಕೃಷಿ ಮಾಡುವ ವಿಧಾನದ ಕುರಿತು ಮಳಿಗೆಗಳಲ್ಲಿ ಬಿತ್ತಿ ಪತ್ರ ನೀಡಿ, ಅರಿವು ಮೂಡಿಸಿದರು. ಮಂಡ್ಯದ ರೈತರು ತಂದಿದ್ದ ಸಾವಯುವ ಬೆಲ್ಲ ಗಮನ ಸೆಳೆಯಿತು.

ಮೈಸೂರು ಪಶು ಸಂಗೋಪನೆ ಇಲಾಖೆ ವತಿಯಿಂದ ಬಂಡೂರು ಕುರಿ ಪ್ರದರ್ಶನ, ಡಾರ್ಕ್ ಫಾರ್ ಕುರಿ ಪ್ರದರ್ಶನ, ಮೈಸೂರು ನಾಟಿ ಕೋಳಿ, ಕಡಕ್ ನಾಷ್ ಕೋಳಿ, ಆಸಿಲ್ ಕೋಳಿ, ಟರ್ಕಿ ಕೋಳಿ, ಗಿನಿ ಪೌಲ್ ಕೋಳಿ, ಡಕ್ಸ್ ಕೋಳಿ, ಪುಂಗನೂರು ಹಸು ಪ್ರದರ್ಶನ, ಓಂಗೋಲ್ ಹಸು ಪ್ರದರ್ಶನ, ಸಾಹಿವಾಲ್ ಹಸು ಪ್ರದರ್ಶನ, ಗಿರ್ ಹಸು, ಹಳ್ಳಿಕಾರ್ ಹಸು ಹಾಗೂ ಮಲ್ನಾಡು ಗಿಡ್ಡ ತಳಿಗಳನ್ನು ಪ್ರದರ್ಶಿಸಲಾಯಿತು.

ಕೃಷಿ ಇಲಾಖೆ ಸಮಗ್ರ ಕೃಷಿ ಪದ್ಧತಿ ಮಾದರಿ ಮತ್ತು ಇಲಾಖೆಯ ವಿವಿಧ ಯೋಜನೆಗಳ ಮಾಹಿತಿ ನೀಡಲಾಯಿತು. ರೇಷ್ಮೆ ಇಲಾಖೆ- ರೇಷ್ಮೆ ಹುಳು ಸಾಕಾಣಿಕೆ, ರೇಷ್ಮೆ ಗೂಡಿನ ಕರಕುಶಲ ಮತ್ತು ರೇಷ್ಮೆ ಕೃಷಿ ಸಲರಣೆಗಳು ಹಾಗೂ ರೇಷ್ಮೆ ಇಲಾಖೆಯಲ್ಲಿ ಸವಲತ್ತುಗಳ ಪ್ರದರ್ಶನ, ಕೃಷಿ ಅರಣ್ಯದ ಮಾಹಿತಿ, ಶ್ರೀಗಂಧ ಕೃಷಿ ಮಾಹಿತಿ ಮತ್ತು ಜೈವಿಕ ಇಂಧನ, ಕಬ್ಬು ನಾಟಿ ಯಂತ್ರ ಹಾಗೂ ಕಬ್ಬು ಸಸಿಗಳ ಪ್ರದರ್ಶನ, ನೈಸರ್ಗಿಕ ಕೃಷಿ, ಸಿರಿ ಧಾನ್ಯಗಳ ಹಾಗೂ ಹೈನುಗಾರಿಕೆ ಬಗ್ಗೆ ಮಾಹಿತಿ, ಬ್ಯಾಂಕ್ ಸೌಲಭ್ಯಗಳ ಮಾಹಿತಿ, ಅಚ್ಚು ಕಟ್ಟು ಪ್ರದೇಶದ ರೈತರಿಗೆ ಮಣ್ಣು ಮತ್ತು ನೀರಿನ ಮಹತ್ವ ಕುರಿತು ಮಾಹಿತಿ ಪ್ರದರ್ಶನ, ವಿವಿಧ ಸ್ಥಳೀಯ ಭತ್ತದ ತಳಿಗಳ ಪ್ರದರ್ಶನ, ಸಾವಯವ, ಗೊಬ್ಬರಗಳು, ಸಾವಯವ ಕೃಷಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಕೃಷಿ ಹವಾಮಾನದ ಮಾಹಿತಿ, ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ತಾಂತ್ರಿಕತೆ, ಮೌಲ್ಯವರ್ಧಿತ ಆಹಾರ ಉತ್ಪನ್ನಗಳ ಪ್ರದರ್ಶನ, ಗಾಣದಿಂದ ತೆಗೆದ ಕೊಬ್ಬರಿ ಎಣ್ಣೆ, ಹರಳು ಮತ್ತು ಶೇಂಗಾ ಎಣ್ಣೆ, ಹಾಗೂ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಇಲಾಖೆಯ ಮಾಹಿತಿ, ರೇಬಿಸ್ ರೋಗ ಹರಡುವ ಬಗ್ಗೆ ಜಾಗೃತಿ ಹಾಗೂ ಮಾಹಿತಿ ಪ್ರದರ್ಶನ ಏರ್ಪಡಿಸಲಾಗಿತ್ತು.



ಆಕರ್ಷಿಸುತ್ತಿರುವ 12 ದಿನದ ಬಂಡೂರು ಕುರಿ ಮರಿ

ಕಾಫಿ, ಏಲಕ್ಕಿ ಫಸಲು ನಾಶಪಡಿಸಿದ್ದ ಸಿಬ್ಬಂದಿ ವಜಾಕ್ಕೆ ಆಗ್ರಹಿಸಿ

ಅರಣ್ಯ ಭವನಕ್ಕೆ ರೈತರ ಮುತ್ತಿಗೆ

ಭೂಮಿ ಬಿಡುವುದಿಲ್ಲ, ಬದುಕಲು ಬಿಡಿ, ಒಕ್ಕಲೆಬ್ಬಿಸಬೇಡಿ ಎಂದು ಘೋಷಣೆ ಕೂಗಿ ರೈತರ ಆಕ್ರೋಶ



ಅರಣ್ಯ ಭವನಕ್ಕೆ ರೈತರು ಮುತ್ತಿಗೆ ಹಾಕಿರುವುದು.

ಮಡಿಕೇರಿ, ಸೆ.26– ಮುಕ್ಕೋಡ್ಲು ಗ್ರಾಮದಲ್ಲಿ ಬೆಳೆಗಾರರೊಬ್ಬರ 2 ಎಕರೆ ಜಾಗದಲ್ಲಿ ಬೆಳೆದಿದ್ದ ಕಾಫಿ ಮತ್ತು ಏಲಕ್ಕಿ ಗಿಡಗಳನ್ನು ಸಂಪೂರ್ಣವಾಗಿ ನಾಶಪಡಿಸಿರುವ ಅರಣ್ಯ ಇಲಾಖೆಯ ಇಬ್ಬರು ಸಿಬ್ಬಂದಿಯನ್ನು ವಜಾಗೊಳಿಸಬೇಕು ಮತ್ತು ಸಂತ್ರಸ್ತ ಬೆಳೆಗಾರನಿಗೆ 30 ಲಕ್ಷ ರೂ. ಪರಿಹಾರ ನೀಡಲು ಆಗ್ರಹಿಸಿ ಕೊಡಗು ಜಿಲ್ಲಾ ರೈತ ಹೋರಾಟ ಸಮಿತಿಯ ನೇತೃತ್ವದಲ್ಲಿ ನಗರದ ಅರಣ್ಯ ಭವನಕ್ಕೆ ಬೆಳೆಗಾರರು ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ರೈತ ಹೋರಾಟ ಸಮಿತಿಯ ಅಧ್ಯಕ್ಷ ಸುರೇಶ್ ಚಕ್ರವರ್ತಿ ನೇತೃತ್ವದಲ್ಲಿ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದ ನೂರಾರು ಬೆಳೆಗಾರರು ಹಾಗೂ ನೊಂದ ಬೆಳೆಗಾರ ಮುಕ್ಕೋಡ್ಲುವಿನ ಕಾಳಚಂಡ ನಾಣಿಯಪ್ಪ ಮತ್ತು ಅವರ ಪತ್ನಿ ಹಾಗೂ ಗ್ರಾಮಸ್ಥರು ಬೆಳಗ್ಗೆ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ ನ್ಯಾಯಕ್ಕಾಗಿ ಆಗ್ರಹಿಸಿದರು.

ಸಿ ಮತ್ತು ಡಿ ಜಮೀನು, ಸೆಕ್ಷನ್ 4 ಸರ್ವೇ ಮೊದಲಾದ ಕಾರಣಗಳನ್ನು ಮುಂದೊಡ್ಡಿ ಅರಣ್ಯ ಇಲಾಖೆ ಬೆಳೆಗಾರರಿಗೆ ಅನಗತ್ಯ ಸಂಕಷ್ಟವನ್ನು ತಂದೊಡ್ಡುತ್ತಿದೆ. ನಾವು ಯಾವುದೇ ಕಾರಣಕ್ಕೂ ನಮ್ಮ ಭೂಮಿಯನ್ನು ಬಿಟ್ಟು ಕೊಡುವುದಿಲ್ಲ, ನಮಗೆ ಬದುಕಲು ಬಿಡಿ. ನಮ್ಮನ್ನು ಒಕ್ಕಲೆಬ್ಬಿಸುವ ಕಾರ್ಯ ನಡೆಸಕೂಡದು ಎಂದು ಆಗ್ರಹಿಸಿ ಘೋಷಣೆಗಳೊಂದಿಗೆ ಪ್ರತಿಭಟನೆ ನಡೆಸಿದರು.

ಗಡುವಿನ ಬಳಿಕವೂ ಸ್ಪಂದನವಿಲ್ಲ : ಪ್ರತಿಭಟನೆಯ ಸಂದರ್ಭ ಆಗಮಿಸಿದ ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಾಲ್ ವೃಷ್ಣಿ ಮತ್ತು ಡಿಎಫ್‌ಓ ಅಭಿಷೇಕ್ ಅವರುಗಳು ಮನವಿ ನೀಡುವಂತೆ ಪ್ರತಿಭಟನಾಕಾರರಲ್ಲಿ ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ಹೋರಾಟ ಸಮಿತಿಯ ಅಧ್ಯಕ್ಷ ಸುರೇಶ್ ಚಕ್ರವರ್ತಿ ತಿಂಗಳ ಹಿಂದೆಯೇ ನಾವು ಅರಣ್ಯ ಇಲಾಖೆಯ ಇಬ್ಬರು ಸಿಬ್ಬಂದಿಗಳು ತೋಟದ ಗಿಡಗಳನ್ನು ಕಡಿದಿರುವ ಬಗ್ಗೆ ಮಾಹಿತಿ ನೀಡಿ ಅವರನ್ನು ವಜಾಗೊಳಿಸುವಂತೆ ಮತ್ತು ಪರಿಹಾರ ನೀಡುವಂತೆ ಆಗ್ರಹಿಸಿ ತಿಂಗಳ ಗಡುವನ್ನು ನೀಡಿದ್ದೆವು. ಈ ಗಡುವು ಮುಗಿದರೂ ಸೂಕ್ತ ಸ್ಪಂದನ ಇಲಾಖೆಯಿಂದ ದೊರಕಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ತೋಟ ನಾಶಕ್ಕೆ ಕಾರಣರಾದ ಇಬ್ಬರು ಸಿಬ್ಬಂದಿಗಳನ್ನು ವಜಾ ಮಾಡುವಂತೆ ಒತ್ತಾಯಿಸಿದ ಘಟನೆ ನಡೆಯಿತು.

ಹೊಸದಾಗಿ ಹಾಕಿದ ಗಿಡಗಳು!?: ಈ ಸಂದರ್ಭ ಡಿಎಫ್‌ಓ ಅಭಿಷೇಕ್ ಮಾತನಾಡಿ, ಮುಕ್ಕೋಡ್ಲುವಿನಲ್ಲಿ ತೆರವುಗೊಳಿಸಿರುವ ಜಾಗ ಅರಣ್ಯ ಇಲಾಖೆಗೆ ಒಳಪಟ್ಟಿರುವುದು 2014ರ ಸರ್ವೇಯಲ್ಲಿ ಇದೆ. ಆ ಜಾಗದಲ್ಲಿ ಹೊಸದಾಗಿ ಕಾಫಿ ಗಿಡಗಳನ್ನು ನೆಡಲಾಗಿತ್ತು ಎಂದು ತಿಳಿಸಿದರಲ್ಲದೇ, ಆ ಜಾಗ ಇರುವ ಸರ್ವೇ ನಂಬರ್‌ನ ಎಲ್ಲಾ ಜಾಗ 'ಡೀಮ್ಡ್ ಫಾರೆಸ್ಟ್' ಎಂದು ನಮೂದಾಗಿರುವುದಾಗಿ ಕಾರಣವನ್ನು ನೀಡಿದರು.

ಇದರಿಂದ ಮತ್ತಷ್ಟು ಆಕ್ರೋಶಗೊಂಡ ಪ್ರತಿಭಟನಾಕಾರರು ಜಾಗ ಒತ್ತುವರಿ ಎನ್ನುವುದಾದರೆ ಅದನ್ನು ತೆರವು ಗೊಳಿಸುವುದಕ್ಕೆ ಬೆಳೆಗಾರನಿಗೆ ನೋಟಿಸ್ ನೀಡಿದ್ದೀರಾ? ಎಂದು ಪ್ರಶ್ನಿಸಿದರು. ಕಾಳಚಂಡ ನಾಣಿಯಪ್ಪ ಅವರು ತೋಟ ಮಾಡಿರುವ ಜಾಗ ಕಂದಾಯ ಇಲಾಖೆಗೆ ಒಳಪಟ್ಟಿದೆ ಎನ್ನುವುದಕ್ಕೆ ತಮ್ಮ ಬಳಿ ಇರುವ ದಾಖಲೆಗಳನ್ನು ಪ್ರದರ್ಶಿಸಿದರಲ್ಲದೆ, ನೀವು ತಕ್ಷಣ ತೋಟದ ಗಿಡಗಳನ್ನು ಕಡಿದ ಇಲಾಖಾ ಸಿಬ್ಬಂದಿಗಳನ್ನು ವಜಾ ಗೊಳಿಸುವಂತೆ ಪಟ್ಟು ಹಿಡಿದರು.

ಸ್ವತಂತ್ರ ತನಿಖೆಗೆ ಕ್ರಮ: ಮುಖ್ಯ ಅರಣ್ಯ ಸಂರಕ್ಷಾಧಿಕಾರಿ ಸೋನಾಲ್ ವೃಷ್ಣಿ ಅವರು ಪ್ರತಿಭಟನಾಕಾರರೊಂದಿಗೆ ಮಾತನಾಡಿ ಮುಕ್ಕೋಡ್ಲುವಿನಲ್ಲಿ ಕಾಫಿ ಮತ್ತು ಏಲಕ್ಕಿ ಗಿಡಗಳನ್ನು ಕಡಿದಿರುವ ಅರಣ್ಯ ಇಲಾಖೆಯ ಇಬ್ಬರು ಸಿಬ್ಬಂದಿಗಳ ಮೇಲೆ ಈ ತಕ್ಷಣದಿಂದಲೇ ತನ್ನ ಅಧಿಕಾರದ ಪರಿಮಿತಿಯಲ್ಲಿ ಸ್ವತಂತ್ರ ತನಿಖೆಗೆ ಆದೇಶ ಮಾಡುತ್ತಿದ್ದೇನೆ. ಈ ತನಿಖೆಯಿಂದ ಅರಣ್ಯ ಸಿಬ್ಬಂದಿಗಳಿಂದ ತಪ್ಪಾಗಿದ್ದರೆ ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರಲ್ಲದೆ, ವಾರದ ಕಾಲಾವಕಾಶ ಇದಕ್ಕೆ ಬೇಕು ಎಂದು ಹೇಳಿದರು. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮಾತಿಗೆ ಸಹಮತ ವ್ಯಕ್ತಪಡಿಸದ ಬೆಳೆಗಾರರು ಪಟ್ಟು ಬಿಡದೆ ತಕ್ಷಣವೇ ಗಿಡಗಳನ್ನು ಕಡಿದ ಇಲಾಖೆಯ ಇಬ್ಬರನ್ನು ವಜಾಗೊಳಿಸಬೇಕು. ಅವರು ಮಾಡಿರುವುದು ತಪ್ಪು ಎನ್ನುವುದಕ್ಕೆ ನಮ್ಮ ಬಳಿ ಅಗತ್ಯ ಪುರಾವೆಗಳಿವೆ. ತನಿಖೆಯನ್ನು ನೀವು ನಡೆಸಿ, ನಿಮ್ಮ ನಿರ್ಧಾರ ಹೊರ ಬರುವವರೆಗೂ ನಾವು ಅರಣ್ಯ ಭವನದ ಆವರಣದಲ್ಲೆ ಠಿಕಾಣಿ ಹೂಡುವುದಾಗಿ ಹೇಳಿದರು. ಮಾತ್ರವಲ್ಲದೇ, ರಾತ್ರಿಯಾದರೂ ಪ್ರತಿಭಟನೆ ಮುಂದುವರಿಸುವ ಎಚ್ಚರಿಕೆಯನ್ನು ನೀಡಿದರು.

ಜಂಟಿ ಸರ್ವೇಗೆ ಆಗ್ರಹ: ಇದೇ ಸಂದರ್ಭ ಸಮಿತಿ ಅಧ್ಯಕ್ಷ ಸುರೇಶ್ ಚಕ್ರವರ್ತಿ ಸೋಮವಾರಪೇಟೆ ತಾಲೂಕಿನ ವಿವಿಧ ಭಾಗಗಳಲ್ಲಿ ಹಾಗೂ ಭಾಗಮಂಡಲ ತಣ್ಣಿಮಾನಿ ವ್ಯಾಪ್ತಿಯಲ್ಲಿ ಸಿ ಮತ್ತು ಡಿ ಜಮೀನಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಜಿಪಿಆರ್‌ಎಸ್ ಸರ್ವೇ ನಡೆಸುತ್ತಿರುವುದನ್ನು ವಿರೋಧಿಸಿದರು. ಕಂದಾಯ ಇಲಾಖೆಯೊಂದಿಗೆ ಸೇರಿ ಅರಣ್ಯ ಇಲಾಖೆ ಜಂಟಿ ಸರ್ವೇಯನ್ನೆ ನಡೆಸಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಎಫ್‌ಓ ಅಭಿಷೇಕ್, ಸಿ ಮತ್ತು ಡಿ ಜಮೀನಿನ ಗೊಂದಲಗಳ ನಿವಾರಣೆ ಹಿನ್ನೆಲೆಯಲ್ಲಿ ಜಿಲ್ಲೆ, ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿಕೊಂಡು ಸರ್ವೇ ನಡೆಸಲಾಗುತ್ತಿದೆ. ಇದಕ್ಕೆ ಬೆಳೆಗಾರರು ಸಹಕಾರ ನೀಡಿದಲ್ಲಿ ಯಾವ ಭಾಗಗಳಲ್ಲಿ ಜನ ವಾಸವಿದೆ, ತೋಟಗಳಿಗೆ ಎನ್ನುವ ಮಾಹಿತಿ ಲಭ್ಯವಾಗಿ ಅದು ದಾಖಲೆಗೆ ಸೇರುತ್ತದೆ. ಇದರ ಮಾಹಿತಿಯ ಮೂಲಕ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಸರ್ವೇಗೆ ಬೆಳೆಗಾರರು ಸಹಕರಿಸಬೇಕೆಂದು ಮನವಿ ಮಾಡಿದರು. ಇದಕ್ಕೆ ಒಪ್ಪದ ಬೆಳೆಗಾರರು ಅರಣ್ಯ ಮತ್ತು ಕಂದಾಯ ಇಲಾಖೆಯ ಜಂಟಿ ಸರ್ವೇ ಮಾಡಬೇಕೆಂದು ಒತ್ತಾಯಿಸಿದ ಘಟನೆ ನಡೆಯಿತು.

ಈ ಸಂದರ್ಭ ಎಸಿಎಫ್ ಸೆಂಥಿಲ್ ಕುಮಾರ್, ವೈಲ್ಡ್ ಲೈಫ್ ಡಿಎಫ್‌ಓ ನೆಹರು, ಎಸಿಎಫ್ ಗೋಪಾಲ್, ರೈತ ಹೋರಾಟ ಸಮಿತಿ ಕಾರ್ಯದರ್ಶಿ ದಿವಾಕರ್ ಗೌಡ, ಭಾಗಮಂಡಲ ಹೋಬಳಿ ಅಧ್ಯಕ್ಷ ಹೊಸೂರು ಗಿರೀಶ್, ಸಂಘದ ಜಿಲ್ಲಾ ನಿರ್ದೇಶಕ ನಾಗಂಡ ಭವಿನ್, ಮುಕ್ಕೋಡ್ಲು ಗ್ರಾಮದ ಸಜನ್ ನಂದೀರ, ಸೋಮವಾರಪೇಟೆಯ ಬಿ.ಜೆ. ದೀಪಕ್, ಕೂತಿ ದಿನೇಶ್ ಹಾಗೂ ನೂರಾರು ಬೆಳೆಗಾರರು ಪಾಲ್ಗೊಂಡಿದ್ದರು.

ಅಧಿಕಾರಿಗಳ ವರ್ಗಾವಣೆ

ಮುಕ್ಕೋಡ್ಲುವಿನಲ್ಲಿ ಕಾಫಿ ಮತ್ತು ಏಲಕ್ಕಿ ಗಿಡಗಳನ್ನು ಕಡಿದಿರುವ ಅರಣ್ಯ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ತಕ್ಷಣವೇ ವರ್ಗಾವಣೆ ಮಾಡಲಾಗುತ್ತದೆ. ಈ ಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಕ್ವಾಡ್ ಮೂಲಕ ಘಟನೆಯ ಸ್ವತಂತ್ರ ತನಿಖೆ ನಡೆಸಲಾಗುತ್ತಿದೆ. ಮುಂದಿನ 8 ದಿನಗಳ ಒಳಗೆ ವಿಚಾರಣೆ ಪೂರ್ಣಗೊಳಿಸಿ ತಪ್ಪೆಸಗಿರುವುದು ಕಂಡು ಬಂದಲ್ಲಿ ಇಲಾಖೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಾಲ್ ವೃಷ್ಣಿ ಪ್ರತಿಭಟನಾಕಾರರಿಗೆ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಟ್ಟು ಪ್ರತಿಭಟನಾಕಾರರು ತಮ್ಮ ಊರುಗಳಿಗೆ ಮರಳಿದರು.

ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಚೆಪ್ಪುಡಿರ ಎಸ್.ಅರುಣ್ ಮಾಚಯ್ಯ ನೇಮಕ

ಮಡಿಕೇರಿ,ಸೆ.26– ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಚೆಪ್ಪುಡಿರ ಎಸ್.ಅರುಣ್ ಮಾಚಯ್ಯ ನೇಮಕವಾಗಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷರಾಗಿರುವ ಕ್ರೀಡಾ ಪ್ರಾಧಿಕಾರದಲ್ಲಿ ಅಂತರರಾಷ್ಟ್ರೀಯ ಕರಾಟೆ ಪಟುವೂ ಆಗಿರುವ ಚೆಪ್ಪುಡಿರ ಸಿ.ಎಸ್.ಅರುಣ್ ಮಾಚಯ್ಯ ಅವರಿಗೆ ಪ್ರಮುಖ ಹುದ್ದೆ ಒಲಿದಿದೆ. ವಿಧಾನ ಪರಿಷತ್ ಮಾಜಿ ಸದಸ್ಯರೂ ಆಗಿರುವ ಅರುಣ್ ಮಾಚಯ್ಯ ಈ ಕುರಿತು ಸಂತಸ ಹಂಚಿಕೊಂಡಿದ್ದು ಕ್ರೀಡಾ ಪ್ರಾಧಿಕಾರದ ಪ್ರಗತಿಗೆ ಎಲ್ಲಾ ರೀತಿಯಲ್ಲಿಯೂ ಪ್ರಯತ್ನಿಸುವುದಾಗಿ ಹೇಳಿದ್ದಾರೆ.

ಬಿಜೆಪಿಯಿಂದ 'ರಾಸ್ತಾ ರೋಕೋ' ಪ್ರತಿಭಟನೆ



ರಾಜ್ಯ ವ್ಯಾಪಿ ರಸ್ತೆಗಳು ಸಂಪೂರ್ಣ ಹದಗೆಡಲು ಕಾರಣವಾಗುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ಧೋರಣೆಯನ್ನು ಖಂಡಿಸಿ ಕೊಡಗು ಜಿಲ್ಲೆಯ ಪ್ರಮುಖ ಪಟ್ಟಣ ಪ್ರದೇಶಗಳಲ್ಲಿ ಬಿಜೆಪಿಯಿಂದ ಏಕ ಕಾಲಕ್ಕೆ 'ರಾಸ್ತಾ ರೋಕೋ' ಪ್ರತಿಭಟನೆ ನಡೆಸಲಾಯಿತು.

ಪೊನ್ನಂಪೇಟೆ ಬಳಿ ಮುಂದುವರೆದ ಹುಲಿ ದಾಳಿ

ಎರಡು ಗಬ್ಬದ ಹಸುಗಳು ಬಲಿ, ಆತಂಕದಲ್ಲಿ ಗ್ರಾಮಸ್ಥರು

ಮಡಿಕೇರಿ,ಸೆ.26– ಪೊನ್ನಂಪೇಟೆ ತಾಲೂಕಿನ ವಿವಿಧೆಡೆ ಜಾನುವಾರುಗಳ ಮೇಲೆ ಹುಲಿ ದಾಳಿ ಮುಂದುವರೆದಿದೆ ಹುದಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆಳ್ಳೂರು ಗ್ರಾಮದ ಆಂಗೋಡು ಎಂಬಲ್ಲಿ ವ್ಯಾಘ್ರನ ಅಟ್ಟಹಾಸಕ್ಕೆ 2 ದಿನಗಳ ಅಂತರದಲ್ಲಿ 2 ಗಬ್ಬದ ಹಸುಗಳು ಬಲಿಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ.

2 ದಿನದ ಹಿಂದೆ ಬಾಚೀರ ಪೆಮ್ಮಯ್ಯ ಎಂಬುವರಿಗೆ ಸೇರಿದ ಗಬ್ಬದ ಹಸುವನ್ನು ಹುಲಿ ಬಲಿ ಪಡೆದಿತ್ತು. ಎರಡು ದಿನಗಳ ಅಂತರದಲ್ಲಿ ವ್ಯಾಘ್ರ ಮತ್ತೆ ಅಟ್ಟಹಾಸ ಮೆರೆದಿದ್ದು ಬಾಚೀರ ಕಾಶಿ ಕುಶಾಲಪ್ಪ ಎಂಬುವರಿಗೆ ಸೇರಿದ ಗಬ್ಬದ ಹಸುವಿನ ಮೇಲೆ ದಾಳಿ ನಡೆಸಿದ ಹುಲಿ ಹಸುವನ್ನು ಕೊಂದು ಹಾಕಿದೆ.

ಎಂದಿನಂತೆ ಹಸುವನ್ನು ತಮ್ಮ ಪಾಳು ಬಿಟ್ಟ ಬಯಲಿನಲ್ಲಿ ಮೇಯಲು ಕಟ್ಟಿದ್ದ ಸಂದರ್ಭ ಹಸುವಿನ ಮೇಲೆ ದಾಳಿ ನಡೆಸಿದ ಹುಲಿ ಹಸುವನ್ನು ಕೊಂದು ಹಾಕಿದೆ. ಮಾತ್ರವಲ್ಲದೇ ಸುಮಾರು 150 ಅಡಿಗಳಷ್ಟು ದೂರ ಕಾಫಿ ತೋಟದೊಳಗೆ ಎಳೆದೊಯ್ದು ಸ್ವಲ್ಪ ಭಾಗ ತಿಂದು ಹಾಕಿದೆ. ಮೇಯಲು ಕಟ್ಟಿದ್ದ ಸ್ಥಳದಲ್ಲಿ ಹಸು ಕಾಣದ ಹಿನ್ನೆಲೆಯಲ್ಲಿ ಹುಡುಕಾಡಿದಾಗ ಕಾಫಿ ತೋಟದಲ್ಲಿ ಹಸುವಿನ ಕಳೇಬರ ಕಂಡ ಬಾಚೀರ ರೋನ್ ಅವರು ಘಟನೆಯ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಘಟನಾ ಸ್ಥಳಕ್ಕೆ ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಬಿ.ಎಂ.ಶಂಕರ್, ಡಿಆರ್‌ಎಫ್‌ಓ ನಾಗೇಶ್ ಕುಮಾರ್, ದಿವಾಕರ್, ಗಸ್ತು ಅರಣ್ಯ ಪಾಲಕ ಮಣಿಕಂಠ, ಸೋಮನ ಗೌಡ, ಆರ್‌ಆರ್‌ಟಿ ಸಿಬ್ಬಂದಿಗಳಾದ ಅಕಿಲ್, ಸುಬ್ರಮಣಿ, ಪುನೀತ್ ಕುಮಾರ್, ಶೇಷಾಂಕ್, ಕೌಶಿಕ್, ಶೈಲೇಶ್ ಮತ್ತಿತರರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಈ ಸಂದರ್ಭ ಗ್ರಾಮಸ್ಥರು ಅರಣ್ಯ ಇಲಾಖಾಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಹುಲಿಯನ್ನು ಸೆರೆ ಹಿಡಿಯುವಂತೆ ಆಕ್ರೋಶ ವ್ಯಕ್ತಪಡಿಸಿದರು. ಪಶು ವೈದ್ಯಾಧಿಕಾರಿ ಡಾ. ಚಂದ್ರಶೇಖರ್ ಹಸುವಿನ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದರು. ಬಳಿಕ ಹಸುವಿನ ಕಳೇಬರವನ್ನು ಸ್ಥಳದಲ್ಲೇ ಬಿಟ್ಟು ಹುಲಿಯ ಗುರುತನ್ನು ಪತ್ತೆ ಹಚ್ಚಲು 10 ಟ್ರ್ಯಾಪ್ ಕ್ಯಾಮರಾಗಳನ್ನು ಅಳವಡಿಸಲಾಯಿತು. ಕ್ಯಾಮರಾದಲ್ಲಿ ಹುಲಿಯ ಚಲನ ವಲನ ಪತ್ತೆಯಾಗಿದ್ದು, ಹುಲಿ ಸೆರೆ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಸಂದರ್ಭ ಗ್ರಾಮಸ್ಥರಾದ ಮುಕ್ಕಾಟೀರ ಶುಭಾ ಮುತ್ತಪ್ಪ, ಉಮೇಶ್, ಸತೀಶ್, ಗಿರೀಶ್, ಬಾಚೀರ ಶರಣು, ರೋನ್, ಸುರೇಶ್, ಲೋಕೇಶ್, ಮೋನೆ, ಮಂಜು, ಕಾಶಿ, ಪೆಮ್ಮಯ್ಯ, ಈಶ್ವರ, ಬೋಸು, ಉದಯ, ನೂರೇರ ಪ್ರಭು ಇನ್ನಿತರರು ಹಾಜರಿದ್ದರು.



ಪೆರಾಜೆ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಪ್ರಶಸ್ತಿ



ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸ್ಕ್ಯಾಡ್ಸ್ ಮಂಗಳೂರು ವತಿಯಿಂದ ಪ್ರಥಮ ಪ್ರಶಸ್ತಿ ಪಡೆದುಕೊಂಡ ಸಂದರ್ಭ.

ನಾಪೋಕ್ಲು: ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸ್ಕ್ಯಾಡ್ಸ್ ಮಂಗಳೂರು (SKADS) ವತಿಯಿಂದ ಪ್ರಥಮ ಪ್ರಶಸ್ತಿಗೆ ಭಾಜನವಾಗಿದೆ. ಸ್ಕ್ಯಾಡ್ಸ್ ಮಂಗಳೂರು (SKADS) ಸಂಸ್ಥೆಯೊಂದಿಗೆ ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚು ವ್ಯವಹಾರ ನಡೆಸಿದ ಸಹಕಾರ ಸಂಘಕ್ಕೆ ಕೊಡಮಾಡುವ ಪ್ರಶಸ್ತಿಯನ್ನು ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೀಡಿ ಗೌರವಿಸಿದೆ.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ನಾಗೇಶ್ ಕುಂದಲಪಾಡಿ ಪರವಾಗಿ ನಿರ್ದೇಶಕರಾದ ಪ್ರಮೀಳಾ ಬಂಗಾರಕೋಡಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲೋಕೇಶ್ ಹೊದ್ದೆಟ್ಟಿ ರವರು ಪ್ರಶಸ್ತಿ ಸ್ವೀಕರಿಸಿದರು. ಸ್ಕ್ಯಾಡ್ಸ್ ಮಂಗಳೂರು ಸಂಸ್ಥೆ ಅಧ್ಯಕ್ಷ ರವೀಂದ್ರ ಕಂಬಳಿಯವರು ಹಾಗೂ ಸಂಸ್ಥೆ ನಿರ್ದೇಶಕರು ಪ್ರಶಸ್ತಿ ನೀಡಿ ಗೌರವಿಸಿದರು.

ಅ.7ರಂದು ವಾಲ್ಮೀಕಿ ಜಯಂತಿ

ಮಡಿಕೇರಿ: ಜಿಲ್ಲಾಡಳಿತ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಅ.7 ರಂದು ನಗರದ ಗಾಂಧಿ ಭವನದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿ ತಿಳಿಸಿದ್ದಾರೆ.

ಸಂಸದ ಸುನೀಲ್ ಬೋಸ್ ಮನವಿಗೆ ಸ್ಪಂದಿಸಿದ ಕೇಂದ್ರ ಸರ್ಕಾರ

ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿಸಲು ಅನುಮತಿ

ಚಾಮರಾಜನಗರ, ಸೆ26– ಕೇಂದ್ರ ಸರ್ಕಾರವು 2025–26ನೇ ಸಾಲಿನ ಮುಂಗಾರು ಹಂಗಾಮಿನ ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿಸಲು ಅನುಮತಿ ನೀಡಿದ್ದು ಈ ಸಂಬಂಧ ಲೋಕಸಭಾ ಸದಸ್ಯ ಸುನೀಲ್ ಬೋಸ್ ಮಾಡಿದ್ದ ಮನವಿಗೆ ಸ್ಪಂದಿಸಿದೆ.



ಸುನೀಲ್ ಬೋಸ್

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್ 7,721 ರೂ.ಗಳಂತೆ ಸೂರ್ಯಕಾಂತಿಯನ್ನು ಖರೀದಿಸಲು ಆದೇಶವಾಗಿದೆ. ಬೆಂಬಲ ಬೆಲೆ ನಿಗದಿಯಾಗಿದ್ದು, ಖರೀದಿ ಪ್ರಕ್ರಿಯೆ ಶೀಘ್ರದಲ್ಲಿ ಆರಂಭಗೊಳ್ಳುವ ನಿರೀಕ್ಷೆ ಇದೆ.

ಲೋಕಸಭಾ ಸದಸ್ಯ ಸುನೀಲ್ ಬೋಸ್ ಅವರು ಸೂರ್ಯಕಾಂತಿ ಖರೀದಿ ಸಂಬಂಧ ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಸೆ.8ರಂದು ಪತ್ರ ಬರೆದು ಮನವಿ ಮಾಡಿದ್ದರು. ಚಾಮರಾಜನಗರ ಜಿಲ್ಲೆಯಲ್ಲಿ ಈ ಬಾರಿ ಸೂರ್ಯಕಾಂತಿ ಬೆಳೆ ಅಧಿಕವಾಗಿದ್ದು, ರೈತರ ಹಿತ ಕಾಪಾಡಲು ಮತ್ತು ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತಗಳಿಂದ ಅವರಿಗೆ ನಷ್ಟವಾಗುವುದನ್ನು ತಪ್ಪಿಸಲು ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ ಖರೀದಿಸುವುದು ಅತ್ಯಗತ್ಯ ಎಂದು ಪತ್ರದಲ್ಲಿ ಒತ್ತಾಯಿಸಿದ್ದರು. ಅವರ ಸಕಾಲಿಕ ಮನವಿಯನ್ನು ಪರಿಗಣಿಸಿದ್ದು, ಕೇಂದ್ರ ಸರ್ಕಾರ ಪ್ರಸ್ತುತ ಹಂಗಾಮಿಗೆ ಖರೀದಿಗೆ ಹಸಿರು ನಿಶಾನೆ ತೋರಿದೆ. ಇದರಿಂದ ಚಾಮರಾಜನಗರ ಮತ್ತು ಸುತ್ತಮುತ್ತಲಿನ ಸೂರ್ಯಕಾಂತಿ ಬೆಳೆಗಾರರಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಯಲಿದೆ. ಕೇಂದ್ರ ಸರ್ಕಾರವು ರೈತರ ಹಿತಕ್ಕಾಗಿ ಹೆಚ್ಚಿನ ಬೆಲೆಯೊಂದಿಗೆ ಖರೀದಿಗೆ ಅನುಮತಿ ನೀಡಿದೆ. ಜಿಲ್ಲೆಯ ಎಲ್ಲಾ ರೈತ ಬಾಂಧವರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಬೆಂಬಲ ಬೆಲೆ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಶಿಲ್ಪಕಲೆಗೆ ವಿಶ್ವಕರ್ಮರ ಕೊಡುಗೆ ಅಪಾರ



ವಿಶ್ವಕರ್ಮ ಜಯಂತಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಸೆ.26– ವಿಶ್ವವನ್ನೇ ಚಿತ್ರಿಸುವುದರ ಜೊತೆಗೆ ಕೋಟ್ಯಾಂತರ ದೇವಾನುದೇವತೆಗಳ ಪರಿಕಲ್ಪನೆಯನ್ನು ನೀಡಿದ ವಿಶ್ವಕರ್ಮರು ಭಾರತೀಯ ಶಿಲ್ಪಕಲೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ, ಅವರು ಮಾತನಾಡಿದರು.

ದೈವ ಸಾಕ್ಷಾತ್ಕಾರ ಪಡೆದಿದ್ದ ವಿಶ್ವಕರ್ಮರು ಬೇಲೂರು ಹಾಗೂ ಸೋಮನಾಥಪುರದಲ್ಲಿರುವ ಸುಂದರವಾದ ದೇವಸ್ಥಾನಗಳ ನಿರ್ಮಾಣ, ಭವ್ಯವಾದ ಮನೆಗಳು, ವಸ್ತುಗಳ ಸೌಂದರ್ಯಕ್ಕೆ ಮೆರುಗು ನೀಡಿದವರು. ವಿಶ್ವಕರ್ಮ ಜನಾಂಗವು ಮೂಲವೃತ್ತಿಯ ಜೊತೆಗೆ ಶಿಕ್ಷಣಕ್ಕೂ ಆದ್ಯತೆ ನೀಡಬೇಕು. ಮೂಢನಂಬಿಕೆ, ಕಂದಾಚಾರಗಳನ್ನು ಬದಿಗೊತ್ತಿ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಶಾಸಕರು ತಿಳಿಸಿದರು.

ಜಿಲ್ಲಾಕೇಂದ್ರದಲ್ಲಿ ವಿಶ್ವಕರ್ಮ ಜನಾಂಗದ ಸಮುದಾಯ ಭವನಕ್ಕೆ ಸರ್ಕಾರದಿಂದ ಅಗತ್ಯ ಅನುದಾನ ನೀಡಲಾಗುವುದು. ಕೌಶಲ್ಯಾಭಿವೃದ್ಧಿ ಕೇಂದ್ರ ತೆರೆದು ಜನಾಂಗಕ್ಕೆ ಅನುಕೂಲ ಕಲ್ಪಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಸಮೀಕ್ಷೆಯಲ್ಲಿ ವಿಶ್ವಕರ್ಮ ಸಮುದಾಯ ನಿಖರ ಹಾಗೂ ಸ್ಪಷ್ಟ ಮಾಹಿತಿ ನಮೂದಿಸಬೇಕು. ಇದರಿಂದ ಜನಾಂಗಕ್ಕೆ ಸೌಲಭ್ಯ ನೀಡಲು ಸರ್ಕಾರಕ್ಕೆ ಅನುಕೂಲವಾಗಲಿದೆ ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ ಮಾತನಾಡಿ, ಸಾವಿರಾರು ವರ್ಷಗಳ ಹಿಂದೆ ಯಾವುದೇ ವಿಜ್ಞಾನ, ತಂತ್ರಜ್ಞಾನವಿರಲಿಲ್ಲ. ಅಂತಹ ಸಂದರ್ಭದಲ್ಲಿ ಉತ್ಕೃಷ್ಟ ದೇವಾಲಯಗಳನ್ನು ನಿರ್ಮಿಸಿದ ವಿಶ್ವಕರ್ಮ ಅವರು ಅಗ್ರಮಾನ್ಯರಾಗಿದ್ದಾರೆ. ವಿಶ್ವಚಕ್ರವನ್ನು ಕೆತ್ತಿ ತಮ್ಮ ಕಲಾಕೌಶಲ್ಯವನ್ನು ಜಗತ್ತಿಗೆ ಸಾರಿದವರು ವಿಶ್ವಕರ್ಮರು. ಅವರ ಮಾರ್ಗದರ್ಶನದಲ್ಲಿ ಮುನ್ನಡೆಯೋಣ ಎಂದರು. ಮೈಸೂರು ಮಹಾರಾಣಿ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ. ಎಚ್.ಆರ್. ಚಂದ್ರಕಲಾ, ನಗರಸಭೆ ಉಪಾಧ್ಯಕ್ಷೆ ಮಮತಾ, ಎಸ್‌ಪಿ ಡಾ.ಬಿ.ಟಿ.ಕವಿತಾ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜು, ಸಮುದಾಯದ ಮುಖಂಡರಾದ ವಿ. ಶ್ರೀನಿವಾಸ ಪ್ರಸಾದ್, ಅನಂತಕುಮಾರ್, ಲಿಂಗಣ್ಣಾಚಾರ್, ಕುಮಾರ್ ಇತರರು ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಿಂದ ಹಮ್ಮಿಕೊಳ್ಳಲಾಗಿದ್ದ ವಿಶ್ವಕರ್ಮರ ಭಾವಚಿತ್ರ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯಗೊಂಡಿತು.

ಪೌರ ಕಾರ್ಮಿಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಮುಖ್ಯವಾಹಿನಿಗೆ ತನ್ನಿ



ಪೌರಕಾರ್ಮಿಕರ ದಿನಾಚರಣೆಯಲ್ಲಿ ಪೌರಕಾರ್ಮಿಕರಿಗೆ ಸನ್ಮಾನ.

ಗುಂಡ್ಲುಪೇಟೆ, ಸೆ.26– ಪೌರ ಕಾರ್ಮಿಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರೊಂದಿಗೆ ಅವರನ್ನು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಮಾಡಬೇಕು ಎಂದು ಪುರಸಭೆ ಅಧ್ಯಕ್ಷ ಪಿ.ಶಶಿಧರ್ ದೀಪು ಕರೆ ನೀಡಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರು ತಮ್ಮ ಆರೋಗ್ಯವನ್ನು ಲೆಕ್ಕಿಸದೇ ಪಟ್ಟಣದ ಜನತೆಯ ಆರೋಗ್ಯವನ್ನು ಕಾಪಾಡಲು ಶ್ರಮಿಸುತ್ತಿದ್ದಾರೆ. ಅವರಿಗೆ ನಾಗರೀಕರೆಲ್ಲೂ ಕೃತಜ್ಞರಾಗಿರಬೇಕು. ಪೌರ ಕಾರ್ಮಿಕರಿಂದ ಪಟ್ಟಣದ ಸೌಂದರ್ಯ ಹೆಚ್ಚುತ್ತದೆ. ನಾನು ನೂತನವಾಗಿ ಅಧ್ಯಕ್ಷನಾದ ನಂತರದ ಮೊದಲ ಕಾರ್ಯಕ್ರಮವೇ ಪೌರಕಾರ್ಮಿಕರ ದಿನಾಚರಣೆಯಾಗಿದ್ದು ನನಗೆ ಸಂತೋಷ ತಂದಿದೆ. ಇದು ನನ್ನ ಪುಣ್ಯ ಎಂದರು.

ಪುರಸಭೆ ಮುಖ್ಯಾಧಿಕಾರಿ ಶರವಣ ಮಾತನಾಡಿ, ಪೌರಕಾರ್ಮಿಕರಿಲ್ಲದ ನಾಡನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ನಾವುಗಳು ಸಹಕಾರ ನೀಡಿದಾಗ ಮಾತ್ರ ಪಟ್ಟಣವನ್ನು ಅತ್ಯಂತ ಸ್ವಚ್ಛವಾಗಿಡಲು ಸಾಧ್ಯವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಪಟ್ಟಣದ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಶಾಲು ಹೊದಿಸಿ, ಹಾರ ಹಾಕಿ ಗಣ್ಯರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಶ್ರೀನಿವಾಸ್ ಕಣ್ಣಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಸುಧಾ, ಸದಸ್ಯರಾದ ಪಿ.ಗಿರೀಶ್, ಅಣ್ಣಯ್ಯಸ್ವಾಮಿ, ಇಲಿಯಾಸ್, ಪಟ್ಟಾಭಿ, ನಾಗೇಶ್, ಮಧುಸೂದನ್, ನಿರ್ಮಲಾ, ಎನ್.ಕುಮಾರ್, ಕಂದಾಯ ಅಧಿಕಾರಿ ಸವಿತಾ, ಸಿಬ್ಬಂದಿಗಳಾದ ಹೇಮಾ, ಪುಟ್ಟಸ್ವಾಮಿ, ಶಿವು, ಮುಖಂಡ ಕಾರ್ಗಳ್ಳಿ ಸುರೇಶ್ ಇನ್ನಿತರರು ಇದ್ದರು.

ಪಂಡಿತ್ ದೀನದಯಾಳ್ ಜಯಂತಿ ಅಂಗವಾಗಿ ಬಿಜೆಪಿ ಸ್ವಚ್ಛತಾ ಕಾರ್ಯ

ಚಾಮರಾಜನಗರ, ಸೆ.26– ಪಂಡಿತ್ ದೀನದಯಾಳ್ ಉಪಾಧ್ಯಾಯರ ಜಯಂತಿ ಪ್ರಯುಕ್ತ ಬಿಜೆಪಿ ನಗರ ಮಂಡಲ ವತಿಯಿಂದ ನಗರದ ಮಾರಿಗುಡಿ ಆವರಣದಲ್ಲಿ ಸ್ವಚ್ಛತಾ ಸೇವಾ ಕಾರ್ಯ ನಡೆಯಿತು.

ಪಂಡಿತ್ ದೀನದಯಾಳ್ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಗರ ಮಂಡಲ ಪದಾಧಿಕಾರಿಕಾರಿಗಳು, ಕಾರ್ಯಕರ್ತರು ಸ್ವಚ್ಛತಾ ಸೇವಾ ಕಾರ್ಯ ಮಾಡಿದರು. ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ ದೀನದಯಾಳ್ ಉಪಾಧ್ಯಾಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಪಂಡಿತ್ ದೀನದಯಾಳ್ ಉಪಾಧ್ಯಾಯರು ಆದರ್ಶ ರಾಷ್ಟ್ರ ಸೇವಕರಾಗಿದ್ದರು. ಅವರು ಭಾರತೀಯ ಜನಸಂಘದ 2ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಬಿಜೆಪಿಯ ಸಂಘಟನಾ ಚಟುವಟಿಕೆಗಳನ್ನು ಸಂಪೂರ್ಣವಾಗಿ ತಿಳಿಸಿಕೊಟ್ಟಿದ್ದಾರೆ. ಅವರ ತತ್ವ, ಸಿದ್ಧಾಂತಗಳನ್ನು ದೇಶ ಪ್ರಧಾನ ಮಂತ್ರಿಗಳಾದ ನರೇಂದ್ರಮೋದಿಯವರು ಅಳವಡಿಸಿಕೊಂಡು, ಅವರ ಚಿಂತನೆ ಗುರಿಯನ್ನು ಪಕ್ಷದ ಸಾಮಾನ್ಯ ಕಾರ್ಯಕರ್ತರು ಸಹ ದೇಶದ ಆಡಳಿತವನ್ನು ನಡೆಸಬೇಕು ಎಂಬ ಚಿಂತನೆಯನ್ನು ಮೋದಿಯವರು ಮಾಡುತ್ತಿದ್ದಾರೆ ಎಂದರು

ಬಿಜೆಪಿ ಕೇವಲ ರಾಜಕೀಯ ಪಕ್ಷವಲ್ಲ. ನಿರಂತರವಾಗಿ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಮೂಲಕ ಪಕ್ಷ ರಾಷ್ಟ್ರೀಯ ವಿಚಾರವನ್ನು ಅಳವಡಿಸಿಕೊಂಡು ಕಾರ್ಯಕ್ರಮ ಮಾಡುತ್ತಿದೆ ಎಂದರು.



ಪಂಡಿತ್ ದೀನದಯಾಳ್ ಜಯಂತಿ ಪ್ರಯುಕ್ತ ಬಿಜೆಪಿ ನಗರಮಂಡಲ ವತಿಯಿಂದ ಚಾಮರಾಜನಗರದ ಮಾರಿಗುಡಿ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಕಾರ್ಯಕ್ರಮದಲ್ಲಿ ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ನಗರ ಸಭಾ ಮಾಜಿ ಸದಸ್ಯ ಶಿವಣ್ಣ, ನಗರಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ, ಮಹೇಶ್ ಎಸ್ಸಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು, ರಾಜುಭಕ್ತಿ, ವೀರೇಂದ್ರ, ಜಿಲ್ಲಾ ಸಹ ವಕ್ತಾರ ರಾಮಸಮುದ್ರ ಶಿವಣ್ಣ, ಫೋಟೋ ಕೃಷ್ಣ, ರಮೇಶ್ ನಾಯಕ, ಭಾಸ್ಕರ್, ಬೆಳ್ಳಪ್ಪ, ಮಾರ್ಕೆಟ್ ಕುಮಾರ್, ಬಂಗಾರನಾಯಕ, ಗ್ರಾಮಾಂತರ ಮಂಡಲ ಕಾರ್ಯದರ್ಶಿ ರವಿಕುಮಾರ್, ಮಾದಪ್ಪ, ರಘು ಇತರರು ಹಾಜರಿದ್ದರು.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಕೊಳ್ಳೇಗಾಲ, ಸೆ.26–ಬಸವೇಶ್ವರನಗರ ವಿದ್ಯುತ್ ಮಾರ್ಗಕ್ಕೆ ಒಳಪಡುವ ವಿದ್ಯುತ್ ಪರಿವರ್ತಕಗಳ ತುರ್ತು ನಿರ್ವಹಣೆ ನಿಮಿತ್ತ ಸೆ.28ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಕೊಳ್ಳೇಗಾಲ ನಗರದ ಬಸವೇಶ್ವರನಗರ, ಬಸ್ತೀಪುರ, ಚಂದ್ರಶೇಖರ್ ರಸ್ತೆ, ನಂಜಯ್ಯನಕಟ್ಟೆ, ಕೈಗಾರಿಕಾ ಪ್ರದೇಶ, ಆರ್.ಕೆ.ಆಸ್ಪತ್ರೆ ರಸ್ತೆ, ಪೂರ್ಣಪ್ರಜ್ಞಾ ಶಾಲೆ, ತೆರಕಣಾಂಬಿ ಐ.ಪಿ, ಗುರುವಿನಪುರ ಎನ್.ಜೆ.ವೈ, ಬೆರಟಳ್ಳಿ ಎನ್.ಜೆ.ವೈ, ಉಗನದಹುಂಡಿ, ಲಕ್ಕೂರು, ಕೆಲಸೂರು, ಕಗ್ಗಳ, ತ್ರಿಯಂಬಕಪುರ ಐ.ಪಿ, ಚೈನಾ ಫ್ಯಾಕ್ಟರಿ, ದೇಪಾಪುರ, ಬೊಮ್ಮನಹಳ್ಳಿ, ಕೆಂಪಯ್ಯನಕಟ್ಟೆ, ಕುಂದಕೆರೆ ಭಾಗಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಜಾತಿ ಸಮೀಕ್ಷೆ ವೇಳೆ ಬ್ರಾಹ್ಮಣ ಎಂದು ಬರೆಸಿ

ಗುಂಡ್ಲುಪೇಟೆ, ಸೆ.26– ಜಾತಿಗಣತಿ ವೇಳೆ ವಿಪ್ರ ಬಂಧುಗಳು ಧರ್ಮದ ಕಾಲಂನಲ್ಲಿ ಹಿಂದೂ ಎಂದು ಹಾಗೂ ಜಾತಿಯ ಕಾಲಂನಲ್ಲಿ ಬ್ರಾಹ್ಮಣ ಎಂದು ನಮೂದಿಸಬೇಕು. ಹಾಗೆ ಯಾವುದೇ ಒಳ ಪಂಗಡಗಳ ಹೆಸರನ್ನು ನಮೂದಿಸುವುದು ಅಗತ್ಯವಿಲ್ಲ ಎಂದು ತಾಲೂಕು ಬ್ರಾಹ್ಮಣ ಸಭಾ ಅಧ್ಯಕ್ಷ ಕೆ.ವಿ.ಗೋಪಾಲಕೃಷ್ಣ ಭಟ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮವಾರಪೇಟೆಯಲ್ಲಿ ನೀರಿಗೆ ಹಾಹಾಕಾರ

ಶಾಸಕ ಪುಟ್ಟರಂಗಶೆಟ್ಟಿ, ಹೆಚ್ಚುವರಿ ಜಿಲ್ಲಾಧಿಕಾರಿ ಜೊತೆ ಭೇಟಿ, ಪರಿಶೀಲನೆ

ಚಾಮರಾಜನಗರ, ಸೆ.26– ಕಳೆದ ಒಂದು ತಿಂಗಳಿಂದ ನಗರಸಭೆ ವ್ಯಾಪ್ತಿಯ ಸೋಮವಾರಪೇಟೆ ವಿವಿಧ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು ಸಾರ್ವಜನಿಕರು ಪರಿತಪಿಸುವಂತಾಗಿದೆ. ನಿವಾಸಿಗಳಿಂದ ದೂರುಬಂದ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಜೊತೆ ಭೇಟಿನೀಡಿ, ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಅಂಬೇಡ್ಕರ್, ಲಿಂಗಾಯತರು, ಬಳೆಗಾರರ ಬಡಾವಣೆಗಳಲ್ಲಿ ನಿವಾಸಿಗಳಿಂದ ಅಹವಾಲು ಆಲಿಸಿದರು.

ಇದೇ ವೇಳೆ ನೀರು ಸಿಗುವ ಪಾಯಿಂಟ್‌ಗಳನ್ನು ಗುರುತು ಮಾಡುವ ಮೂಲಕ ಕೊಳವೆಬಾವಿ ಕೊರೆಸಲು ಕ್ರಮವಹಿಸುವಂತೆ ಸೂಚಿಸಿದರು. ದುರಸ್ತಿ ಗೀಡಾಗಿರುವ ಮೋಟಾರ್ ದುರಸ್ತಿಗೆ ಕ್ರಮವಹಿಸಬೇಕು, ಕುರುಬರ ಬೀದಿಯಲ್ಲಿ ಕೆಟ್ಟಿರುವ ಮೋಟಾರ್ ದುರಸ್ತಿ ಮಾಡಿ, ಸಾರ್ವಜನಿಕರಿಗೆ ನೀರೊದಗಿಸಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.

ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಸೋಮವಾರಪೇಟೆ ಬಡಾವಣೆ ನಿವಾಸಿಗಳು ಹಾಜರಿದ್ದರು.



ಸೋಮವಾರಪೇಟೆ ವಿವಿಧ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಿನ್ನೆಲೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಹೆಚ್ಚುವರಿ ಜಿಲ್ಲಾಧಿಕಾರಿ ಟಿ, ಜವರೇಗೌಡ ಜತೆ ಭೇಟಿ ನೀಡಿ, ನಿವಾಸಿಗಳಿಂದ ಅಹವಾಲು ಆಲಿಸಿದರು.

ಅಂಶಿ ಪ್ರಸನ್ನ ಕುಮಾರ್ ಅವರಿಗೆ 'ಹೊಂಬಾಳೆ ಸಂಹಿತ ಹರಿಣಿಕುಮಾರ್ ಅಲುಮ್ನಿ ಕೃಷಿ ಮಾಧ್ಯಮ ಪ್ರಶಸ್ತಿ'



ಮೈಸೂರು, ಸೆ.26–ಮೈಸೂರಿನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿಗಳ ಸಂಘ ನೀಡುವ 'ಹೊಂಬಾಳೆ ಸಂಹಿತ ಹರಿಣಿಕುಮಾರ್ ಅಲುಮ್ನಿ ಕೃಷಿ ಮಾಧ್ಯಮ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೃಷಿ ವಿವಿಯಲ್ಲಿ ಅ.11ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ಸ್ಮರಣಿಕೆ, ಪ್ರಮಾಣ ಪತ್ರ ಹಾಗೂ 10 ಸಾವಿರ ರೂ. ನಗದು ಒಳಗೊಂಡಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಡಾ. ಎಸ್.ಎಲ್.ಭೈರಪ್ಪನವರ ನಿಧನಕ್ಕೆ ಸಂತಾಪ

ಮೈಸೂರು, ಸೆ. 26–ಕನ್ನಡದ ಮೇರು ಸಾಹಿತಿ ಎಸ್.ಎಲ್ .ಭೈರಪ್ಪ ಅವರ ನಿಧನಕ್ಕೆ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಸಂತಾಪ ಸೂಚಿಸಿದ್ದಾರೆ.



ಕೆ.ವಿ.ಶ್ರೀಧರ್

ಅವರ ಗೃಹಭಂಗ, ವಂಶವೃಕ್ಷ, ದಾಟು, ಅನ್ವೇಷಣೆ, ತಂತು, ಜಲಪಾತ, ಪರ್ವ, ತಬ್ಬಲಿಯು ನೀನಾದೆ ಮಗನೆ, ಸಾಕ್ಷಿ, ಆವರಣ, ಕವಲು, ಉತ್ತರಕಾಂಡ ಕಾದಂಬರಿಗಳು ಅವರ ಗಾಢ ಅನುಭವದ, ಆಳ ಅಧ್ಯಯನದ ಫಲಗಳು.

ಭೈರಪ್ಪನವರ ಬರವಣಿಗೆಗಳಲ್ಲಿರುವ, ನಿಷ್ಪಕ್ಷಪಾತ ಅಧ್ಯಯನ, ಇತಿಹಾಸವನ್ನು ಇದ್ದಹಾಗೆ ಅರ್ಥಮಾಡಿಕೊಂಡು ಯಾರನ್ನೂ ಓಲೈಸುವ ಗೋಜಿಗೆ ಹೋಗದೆ, ನಿರ್ಲಿಪ್ತತೆಯಿಂದ ಬರೆಯುವ ಅವರ ಗುಣ ಯುವ ಬರಹಗಾರರಿಗೆ ಆದರ್ಶಪ್ರಾಯ. ಭೈರಪ್ಪನವರು ಭೌತಿಕವಾಗಿ ನಮ್ಮನ್ನು ಅಗಲಿರಬಹುದು. ಆದರೆ, ಅವರ ಕೃತಿಗಳಿಗೆ ಸಾವಿಲ್ಲ, ಅವರ ಚಿಂತನೆಗಳಿಗೆ ಸಾವಿಲ್ಲ, ಅವರ ಮೌಲ್ಯಗಳಿಗೆ ಸಾವಿಲ್ಲ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಹೇಳಿದ್ದಾರೆ.

ಸೂಪರ್ ಓವರ್‌ನಲ್ಲಿ ಭಾರತಕ್ಕೆ ರೋಚಕ ಜಯ

ನಾಳೆ ಭಾರತ-ಪಾಕ್ ನಡುವೆ ಫೈನಲ್ ಹಣಾಹಣಿ



ದುಬೈ, ಸೆ.26(ವಿವಿಹೆಚ್)– ಕೊನೆವರೆಗೂ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಭಾರತ ಸೂಪರ್ ಓವರ್‌ನಲ್ಲಿ ಭರ್ಜರಿ ಗೆಲುವು ಸಾಧಿಸಿದೆ. ಇದರೊಂದಿಗೆ ಅಜೇಯವಾಗಿ ಫೈನಲ್ಸ್ ಪ್ರವೇಶಿಸಿರುವ ಭಾರತ ನಾಳೆ (ಸೆ.28) ನಡೆಯುವ ಅಂತಿಮ ಹಣಾಹಣಿಯಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.


ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಏಷ್ಯಾಕಪ್ ಸೂಪರ್–4 ಹಂತದ ಕೊನೆ ಪಂದ್ಯದಲ್ಲಿ ಭಾರತ ಹಾಗೂ ಶ್ರೀಲಂಕಾ ತಂಡಗಳು ತಲಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿದ್ದರಿಂದ ಪಂದ್ಯ ಡ್ರಾಗೊಂಡಿತು. ಬಳಿಕ ನಡೆದ ಸೂಪರ್ ಓವರ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ 2 ವಿಕೆಟ್ ನಷ್ಟಕ್ಕೆ 2 ರನ್ ಗಳಿಸಿತು. ಅರ್ಶದೀಪ್ ಸಿಂಗ್ 2 ವಿಕೆಟ್ ಗಳಿಸಿದರು. ಈ ಮೊತ್ತ ಬೆನ್ನತ್ತಿದ ಭಾರತ ಮೊದಲ ಎಸೆತದಲ್ಲೇ 3 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಅಭಿಷೇಕ್ ಶರ್ಮಾ 31 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್ ಒಳಗೊಂಡ 61 ರನ್ ಗಳಿಸಿ ಮಿಂಚಿದರು. ಉಳಿದಂತೆ ತಿಲಕ್ ವರ್ಮಾ ಅಜೇಯ 49, ಸಂಜು ಸ್ಯಾಮ್ಸನ್ 39, ಅಕ್ಷರ್ ಪಟೇಲ್ 21, ನಾಯಕ ಸೂರ್ಯಕುಮಾರ್ ಯಾದವ್ 12, ಶುಭಮನ್ ಗಿಲ್ 4, ಹಾರ್ದಿಕ್ ಪಾಂಡ್ಯ 2 ರನ್ ಗಳಿಸಿದರು. ಶ್ರೀಲಂಕಾ ಪರ ತೀಕ್ಷಣ, ಚಾಮಿರ, ಹಸರಂಗ, ಶನಕ ಹಾಗೂ ನಾಯಕ ಅಸಲಂಕ ತಲಾ ಒಂದೊಂದು ವಿಕೆಟ್ ಪಡೆದರು.

ಬಳಿಕ ಗುರಿ ಬೆನ್ನತ್ತಿದ ಶ್ರೀಲಂಕಾ ಪರ ಆರಂಭದಲ್ಲೇ ಕುಸಾಲ್ ಮೆಂಡೀಸ್ ಸೊನ್ನೆ ಸುತ್ತಿದರು. 2ನೇ ವಿಕೆಟ್‌ಗೆ ಜೊತೆಯಾದ ಪಥುಮ್ ನಿಸ್ಸಾಂಕ ಹಾಗೂ ಕುಸಾಲ್ ಪೆರೇರಾ 127 ರನ್ ಜೊತೆಯಾಟವಾಡಿದರು. ಈ ವೇಳೆ 32 ಎಸೆತಗಳಲ್ಲಿ 58 ರನ್ ಗಳಿಸಿದ್ದ ಪೆರೇರಾ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಪಥುಮ್ ನಿಸ್ಸಾಂಕ 58 ಎಸೆತಗಳಲ್ಲಿ 7 ಬೌಂಡರಿ, 6 ಸಿಕ್ಸರ್ ಸಹಿತ 107 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ದಸುನ್ ಸನಕ 22 ರನ್ ಗಳಿಸಿದರು.

ಭಾರತ ಪರ ಹಾರ್ದಿಕ್ ಪಾಂಡ್ಯ, ಹರ್ಷಿತ್ ರಾಣಾ, ಅರ್ಶದೀಪ್ ಸಿಂಗ್, ಕುಲ್‌ದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಪಥುಮ್ ನಿಸ್ಸಾಂಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಭಿನಂದನೆ



ಮೈಸೂರಿನ ವೀರನಗೆರೆಯಲ್ಲಿ ನಾಯಕರ ಸಂಘದ ವತಿಯಿಂದ ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿಯ ಎಂ.ರಾಮಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪ್ರೇಮ್ ಕುಮಾರ್, ದೇವರಾಜು, ಶ್ರೀನಿವಾಸ್, ರಾಜು ಮತ್ತಿತರರಿದ್ದರು.

ಗಾಣಿಗ ಎಂದು ಬರೆಸಲು ಮನವಿ

ಮೈಸೂರು, ಸೆ.26(ಜಿಎ)– ರಾಜ್ಯ ಸರ್ಕಾರದಿಂದ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯಲ್ಲಿ ಮೈಸೂರು ಭಾಗದ ಗಾಣಿಗ ಸಮುದಾಯದವರು ಜಾತಿ ಕಾಲಂನಲ್ಲಿ ಗಾಣಿಗ ಹಾಗೂ ಉಪಜಾತಿಯಾಗಿ ಶಿವಜ್ಯೋತಿ ಪಣ ಎಂದು ನಮೂದಿಸುವಂತೆ ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಎನ್.ಸಿ.ಉಮೇಶ್ ಮನವಿ ಮಾಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಒಳಮೀಸಲಾತಿ ಬರುವ ನಿರೀಕ್ಷೆಯಿದ್ದು ಉಪಜಾತಿಯನ್ನು ಕಡ್ಡಾಯವಾಗಿ ನಮೂದಿಸಬೇಕು. ಸರ್ಕಾರದ ಸೌಲಭ್ಯ ಪಡೆಯಲು ಎಲ್ಲರೂ ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಭಾಗಿಯಾಗಬೇಕು ಎಂದರು. ಗೋಷ್ಠಿಯಲ್ಲಿ ಹೇಮಂತ್‌ಕುಮಾರ್, ವೆಂಕಟೇಶ್, ಮಹದೇವ್, ಗಜೇಂದ್ರ, ರಮೇಶ್‌ಗೌಡ, ರಾಮಚಂದ್ರ ಇದ್ದರು.

ಸಿದ್ದಮ್ಮ ನಿಧನ



ಮೈಸೂರು, ಸೆ. 26– ಮೈಸೂರಿನ ಗಾಂಧಿನಗರ ನಿವಾಸಿ ದಿವಂಗತ ಸಿದ್ದಮಾದಯ್ಯ ಅವರ ಪತ್ನಿ ಸಿದ್ದಮ್ಮ(96) ಶುಕ್ರವಾರ ರಾತ್ರಿ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 2 ಗಂಟೆಗೆ ಗಾಂಧಿನಗರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತ್ವರಿತವಾಗಿ ಜನರಿಗೆ ಸೇವೆ ಒದಗಿಸಲು ಪ್ರತಿ ವಾರ್ಡ್‌ನಲ್ಲಿ

ಕ್ಯೂಆರ್ ಕೋಡ್ ಆಧಾರಿತ ಹೊಸ ಸಾಫ್ಟ್‌ವೇರ್ ಅಳವಡಿಕೆ

ನಗರಸಭೆ ಸಾಮಾನ್ಯ ಸಭೆಯಲ್ಲಿ ಶಾಸಕ ದರ್ಶನ್ ಮಾಹಿತಿ



ನಂಜನಗೂಡು ನಗರಸಭೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ನಂಜನಗೂಡು, ಸೆ.26– ನಗರಸಭೆ ಕೆಲಸಗಳನ್ನು ತ್ವರಿತವಾಗಿ ಮಾಡುವ ಮೂಲಕ ಜನರಿಗೆ ಸೇವೆ ಒದಗಿಸಲು ಅಶೋಕ ಯೂನಿವರ್ಸಿಟಿಯವರು ಅಭಿವೃದ್ಧಿಪಡಿಸಿರುವ ಕ್ಯೂಆರ್ ಕೋಡ್ ಆಧಾರಿತ ಹೊಸ ಸಾಫ್ಟ್‌ವೇರ್ ಅನ್ನು ಪ್ರತಿ ಬಡಾವಣೆಗೆ ಅಳವಡಿಸಲಾಗುವುದು. ಆ ಮೂಲಕ ದೇಶದಲ್ಲೇ ಮೊದಲ ಬಾರಿಗೆ ಈ ತಂತ್ರಾಂಶ ಅಳವಡಿಸಿಕೊಂಡ ಮೊದಲ ನಗರಸಭೆ ನಂಜನಗೂಡು ಆಗಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಗರಸಭೆ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಕ್ಯೂಆರ್ ಕೋಡ್ ಆಧಾರಿತ ಹೊಸ ಸಾಫ್ಟ್‌ವೇರ್ ಅನ್ನು ಪ್ರತಿ ಬಡಾವಣೆಯ ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗುವುದು. ಇದರಿಂದ ನಾಗರಿಕರು ತಮ್ಮ ಮೊಬೈಲ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮ ಸಮಸ್ಯೆಗಳನ್ನು ಪೋರ್ಟಲ್‌ನಲ್ಲಿ ನೋಂದಾಯಿಸಬಹುದಾಗಿದೆ. ಈ ತಂತ್ರಾಂಶದ ಮೂಲಕ ಸಮಸ್ಯೆ ದಾಖಲಿಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತ್ವರಿತವಾಗಿ ಆ ಸಮಸ್ಯೆ ನಿವಾರಿಸಲು ಕ್ರಮ ವಹಿಸುತ್ತಾರೆ. ಅಲ್ಲದೇ ಸದಸ್ಯರಿಗೆ ನಗರದ ಸಮಸ್ಯೆಯನ್ನು ವಿವರಿಸಿ ಹೆಚ್ಚಿನ ಸೇವೆ ನೀಡಲು ಸಾಧ್ಯವಾಗುತ್ತದೆ. ನಗರಸಭೆಯಲ್ಲಿ ಬದಲಾವಣೆ ತರಬೇಕೆಂಬ ಚಿಂತನೆಯಿಂದ ಈ ಹೊಸ ಸಾಫ್ಟ್‌ವೇರ್ ಆಧಾರಿತ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ ಎಂದರು.

ಫುಡ್‌ಜೋನ್‌ಗೆ ಪುನೀತ್ ರಾಜ್‌ಕುಮಾರ್ ಹೆಸರು: ನಗರದಲ್ಲಿ ಫುಟ್‌ಪಾತ್ ವ್ಯಾಪಾರಿಗಳಿಗಾಗಿ ಆರಂಭಿಸಲಾದ ಫುಡ್‌ಜೋನ್‌ಗೆ ಜನರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ನಗರಸಭೆಯಿಂದ ಮೂಲ ಸೌಲಭ್ಯ ಕಲ್ಪಿಸಲಾಗಿದೆ. ಫುಡ್‌ಜೋನ್‌ಗೆ ಪುನೀತ್ ರಾಜ್‌ಕುಮಾರ್ ಹೆಸರನ್ನು ನಾಮಕರಣ ಮಾಡಲಾಗುವುದು ಎಂದರು.

ಸದಸ್ಯೆ ಗಾಯಿತ್ರಿ ಮೋಹನ್ ಮಾತನಾಡಿ, ನಗರದ ಹಳೇ ಸುಭಾಷ್ ಪಾರ್ಕ್‌ನಲ್ಲಿ ವ್ಯವಹಾರ ನಡೆಸುತ್ತಿರುವ ಮಾಂಸ ಮಾರಾಟ ಮಳಿಗೆಗಳನ್ನು ಸ್ಥಳಾಂತರಿಸಿ, ಫುಟ್‌ಪಾತ್ ತರಕಾರಿ ವ್ಯಾಪಾರಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ನಗರದ ಸಸ್ಯಕಾಶಿ ಸಮೀಪ ಮಾಂಸ ಮಾರಾಟಗಾರರಿಗಾಗಿ 14 ಮಳಿಗೆ ಹಾಗೂ ಸ್ಲಾಟರ್ ಹೌಸ್ ನಿರ್ಮಿಸಲಾಗಿದ್ದು, ಮಾಂಸದ ಅಂಗಡಿಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದರು. ಸದಸ್ಯೆ ಮಂಗಳಮ್ಮ ಮಾತನಾಡಿ, ಅಶೋಕಪುರಂನಲ್ಲಿ ಮಳೆಗಾಲದಲ್ಲಿ ಒಳಚರಂಡಿ ನೀರು ಮನೆಗಳಿಗೆ ನುಗ್ಗುತ್ತಿದೆ. ಒಳಚರಂಡಿ ಮಂಡಳಿ ಕಳಪೆ ಕಾಮಗಾರಿಯಿಂದಾಗಿ ಸಮಸ್ಯೆ ತಲೆದೋರಿದೆ ಎಂದು ಆರೋಪಿಸಿದರು.

ಒಳಚರಂಡಿ ಮಂಡಳಿ ಎಇ ವಿದ್ಯಾ ಮಾತನಾಡಿ, ಮನೆಗಳು ರಸ್ತೆಗಿಂತ ಕೆಳಗಿರುವುದರಿಂದ ಸಮಸ್ಯೆ ಮರುಕಳುಸುತ್ತಿದೆ. ಹೊಸದಾಗಿ ಪೈಪ್‌ಲೈನ್ ಅಳವಡಿಸಿ, ಅದರ ಒಂದು ಕೊನೆಯಿಂದ ಡ್ರೈನೇಜ್ ತುಂಬುವಂತೆ ವ್ಯವಸ್ಥೆ ಮಾಡಲಾಗುವುದು ಎಂದರು.

ನಗರಸಭೆ ಸದಸ್ಯ ಕಪಿಲೇಶ್ ಮಾತನಾಡಿ, ನಗರದ ಒಂದು ಮುಖ್ಯರಸ್ತೆಗೆ ಶ್ರೀಕಂಠೇಶ್ವರ ದೇವಾಲಯದ ಅಭಿವೃದ್ಧಿ ಹರಿಕಾರ ಮಾಜಿ ಸಚಿವ ದಿ.ಎಂ.ಮಹದೇವ್ ಅವರ ಹೆಸರನ್ನು ನಾಮಕರಣ ಮಾಡಬೇಕು. ಶ್ರೀಕಂಠೇಶ್ವರ ದೇವಾಲಯದ ಸಮೀಪ ಹಳ್ಳದ ಕೇರಿಗೆ ಹೋಗುವ ರಸ್ತೆಯಲ್ಲಿ ಖಾಸಗಿ ವ್ಯಕ್ತಿ ನಿಯಮಬಾಹಿರವಾಗಿ ಕಟ್ಟಡ ಕಟ್ಟುತ್ತಿದ್ದಾರೆ. ಕಟ್ಟಡ ಎದ್ದರೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ರಾಜಗೋಪುರ ಮರೆಯಾಗುತ್ತದೆ. ಪ್ರಾಚ್ಯವಸ್ತು ಸಂರಕ್ಷಣಾ ಹಾಗೂ ನಗರಸಭೆ ಅಧಿಕಾರಿಗಳು ಕ್ರಮವಹಿಸದೆ ಜಾಣ ಕುರುಡರಾಗಿದ್ದಾರೆ ಎಂದು ಆರೋಪಿಸಿದರು.

ಶಾಸಕ ದರ್ಶನ್ ಪ್ರತಿಕ್ರಿಯಿಸಿ ದೇವಾಲಯದ ಸಮೀಪ ಕಟ್ಟಡ ಕಟ್ಟುತ್ತಿರುವ ವ್ಯಕ್ತಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ಅಕ್ರಮ ಕಟ್ಟಡ ಕಾಮಗಾರಿ ತಡೆಯಬೇಕು ಎಂದು ಆಯುಕ್ತರಿಗೆ ಸೂಚಿಸಿದರು.

ಸಭೆಯಲ್ಲಿ ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹನಾ ಬಾನು, ಸದಸ್ಯರಾದ ಪ್ರದೀಪ್, ನಂದಿನಿ, ಖಾಲೀದ್ ಅಹಮ್ಮದ್, ಯೋಗೀಶ್, ಮಹದೇವ ಪ್ರಸಾದ್, ವಸಂತ, ಪಿ.ದೇವ, ಎಸ್.ಗಂಗಾಧರ್, ಶ್ವೇತಲಕ್ಷ್ಮಿ, ಮಹದೇವಮ್ಮ, ಸಿದ್ದಿಕ್, ಎಸ್.ಪಿ.ಮಹೇಶ್, ಎಸ್.ಸಿದ್ದರಾಜು, ಶಶಿಕಲಾ, ಸೌಮ್ಯ, ನಾಗಮಣಿ, ಮಹೇಶ್ ಹತ್ತಿಖಾನೆ, ಕೆ.ಎಂ.ಬಸವರಾಜು, ರವಿ, ನಗರಸಭಾ ಆಯುಕ್ತ ವಿಜಯ್, ಎಇಇ ಸಮಂತ್, ಮಹೇಶ್, ಮೈತ್ರಾದೇವಿ ಸೇರಿದಂತೆ ಸಿಬ್ಬಂದಿಗಳಿದ್ದರು.

ಬಸವನಗುಡಿಯ 150 ಮನೆಗಳಿಗೆ ಖಾತೆ

ನಗರದ ಬಸವನಗುಡಿ ಬಡಾವಣೆಯಲ್ಲಿ ಮುಡಾ ವತಿಯಿಂದ ನಿರ್ಮಿಸಿರುವ 150 ಮನೆಗಳಿಗೆ ಖಾತೆಯಾಗಿಲ್ಲ. ಬಡಾವಣೆಯನ್ನು ನಗರಸಭೆ ಸುಪರ್ದಿಗೆ ಪಡೆದು ಖಾತೆ ಮಾಡಿಕೊಡಬೇಕೆಂದು ಆಯುಕ್ತರಿಗೆ ಸೂಚಿಸಿದ ಶಾಸಕ ದರ್ಶನ್, ಬಸವನಗುಡಿ ಬಡಾವಣೆಯ ಸಿಎ ನಿವೇಶನಗಳನ್ನು ಮುಡಾ ಮಾರಾಟ ಮಾಡಿದ್ದು, ಬಡಾವಣೆಗೆ ನಗರಸಭೆಯಿಂದ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹೀಗಾಗಿ ಸಂಬಂಧಪಟ್ಟವರಿಂದ 2 ಕೋಟಿ ರೂ. ಕಟ್ಟಿಸಿಕೊಂಡು ಖಾತೆ ಮಾಡಿಕೊಡಬೇಕು. ನಗರದ ಓಲ್ಡ್ ಟೌನ್‌ನಲ್ಲಿ ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು 27 ಕೋಟಿ ವೆಚ್ಚದ ಟೆಂಡರ್ ನೀಡಲಾಗಿದ್ದು, ಒಳಚರಂಡಿ ಮಂಡಳಿ ಕಾಮಗಾರಿ ಪೂರ್ಣಗೊಳಿಸಬೇಕು. 2006ರಲ್ಲಿ ಆರಂಭವಾದ ಒಳಚರಂಡಿ ಕಾಮಗಾರಿಯನ್ನು ಒಳಚರಂಡಿ ಮಂಡಳಿ ಇನ್ನೂ ಪೂರ್ಣಗೊಳಿಸಿಲ್ಲ. ಹೀಗೆ ಮುಂದುವರೆದರೆ ಮತ್ತಷ್ಟು ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಹೀಗಾಗಿ ಒಳಚರಂಡಿ ಮಂಡಳಿ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ದೊಡ್ಡೇಬಾಗಿಲು ಪಿಎಸಿಎಸ್‌ಗೆ 1.50 ಲಕ್ಷ ಲಾಭ



ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಮಹದೇವಯ್ಯ ಉದ್ಘಾಟಿಸಿದರು.

ತಿ.ನರಸೀಪುರ, ಸೆ.26– ಪ್ರಸಕ್ತ ಸಾಲಿನಲ್ಲಿ ದೊಡ್ಡೇಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 1.50 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಮಹದೇವಯ್ಯ ತಿಳಿಸಿದರು.

ತಾಲೂಕಿನ ದೊಡ್ಡೇಬಾಗಿಲು ಪಿಎಸಿಎಸ್ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಷೇರುದಾರರು ಹಾಗೂ ನಿರ್ದೇಶಕರ ಸಹಕಾರದಿಂದ ಸಂಘ ವರ್ಷದಿಂದ ವರ್ಷಕ್ಕೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ 239 ರೈತರಿಗೆ 2.20 ಕೋಟಿ ರೂ. ಕೆಸಿಸಿ ಸಾಲ, 189 ಮಂದಿಗೆ 51.24 ಲಕ್ಷ ಪಶು ಸಂಗೋಪನೆ ಸಾಲ ನೀಡಲಾಗಿದ್ದು, ಮುಂದಿನ ವರ್ಷದಿಂದ ಮಹಿಳಾ ಸ್ವಸಹಾಯ ಸಂಘಕ್ಕೆ ಸಾಲ ನೀಡಲು ಪ್ರಯತ್ನಿಸುವುದಾಗಿ ತಿಳಿಸಿದರು.

ಸಾಲ ಪಡೆದ ರೈತರು ಸಕಾಲಕ್ಕೆ ಮರುಪಾವತಿಸುವ ಮೂಲಕ ಸಹಕಾರ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು. ಆ ಮೂಲಕ ರೈತರು ಕೂಡ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಕಾರ್ಯದರ್ಶಿ ಎನ್.ಮಹದೇವಸ್ವಾಮಿ ಮಾತನಾಡಿ, ದೊಡ್ಡಬಾಗಿಲು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಯಾವುದೇ ಲೋಪವಿಲ್ಲದೇ ರೈತರಿಗೆ ಸಕಾಲದಲ್ಲಿ ಸಾಲ ನೀಡುತ್ತಿದ್ದು, ರೈತರು ಸುಸ್ತಿಯಾಗದೆ ಹಣವನ್ನು ಕಟ್ಟಿ ಸಂಘ ಬೆಳೆಸಿ ಎಂದರು.

ಈ ವೇಳೆ ಸಂಘದ ಮೇಲ್ವಿಚಾರಕ ಎನ್.ಎಸ್.ಶೇಖರ್, ಉಪಾಧ್ಯಕ್ಷ ಡಿ.ಪಿ.ನಾಗರಾಜು, ನಿರ್ದೇಶಕರಾದ ವಕೀಲ ಎಂ.ಮಹದೇವಸ್ವಾಮಿ, ಮರಿಸ್ವಾಮಿ, ಕೆ.ಟಿ.ನಂಜುಂಡಸ್ವಾಮಿ, ಕೆ.ಜಿ.ಮಹೇಶ್, ಭಾಗ್ಯಮ್ಮ, ಮರಿತಾಯಮ್ಮ, ಸುರೇಂದ್ರ, ಸರೋಜಮ್ಮ, ಕೆಂಪಶೆಟ್ಟಿ, ಕಂಪ್ಯೂಟರ್ ಆಪರೇಟರ್ ಸಂತೋಷ್, ರೈತರು ಹಾಜರಿದ್ದರು.

ಜಯಪುರ ಡೇರಿ ವಾರ್ಷಿಕ ಮಹಾಸಭೆ



ಜಯಪುರದಲ್ಲಿ ಡೇರಿ ವಾರ್ಷಿಕ ಮಹಾಸಭೆ ನಡೆಯಿತು.

ಮೈಸೂರು, ಸೆ.26– ತಾಲೂಕಿನ ಜಯಪುರ ಗ್ರಾಮದ ಡೇರಿಯಲ್ಲಿ ಅಧ್ಯಕ್ಷ ಮೂಗನಾಯಕ ಅವರ ಅಧ್ಯಕ್ಷತೆಯಲ್ಲಿ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ಮೈಮುಲ್ ಮಾರ್ಗ ವಿಸ್ತರಣಾಧಿಕಾರಿ ಡಾ.ಎಂ.ಶಿವಕುಮಾರ್ ವಾರ್ಷಿಕ ವರದಿ ಮಂಡಿಸಿ, ಪ್ರಸಕ್ತ ಸಾಲಿನಲ್ಲಿ 4,58,008 ರೂ. ಲಾಭ ಬಂದಿದೆ ಎಂದು ತಿಳಿಸಿದರು.

ಇದೇ ವೇಳೆ ಡೇರಿಗೆ ಹೆಚ್ಚು ಹಾಲು ಸರಬರಾಜು ಮಾಡಿದ ರಾಮಣ್ಣ, ಕಾಳೇಗೌಡ, ಎಂ.ತನುಜಾ, ವೆಂಕಟರಮಣ, ಶಂಭುಲಿಂಗೇಗೌಡ, ಬಸವರಾಜು ಅವರಿಗೆ ಹಾಲಿನ ಕ್ಯಾನ್ ಬಹುಮಾನ ನೀಡಿ ಸನ್ಮಾನಿಸಲಾಯಿತು. ಈ ವೇಳೆ ಡೇರಿ ನಿರ್ದೇಶಕರಾದ ವೆಂಕಟರಮಣ, ಅಬ್ದುಲ್ ರೆಹಮಾನ್, ರಾಚನಾಯಕ, ಗುಜ್ಜನಾಯಕ, ರಾಮಣ್ಣ, ಕೃಷ್ಣೇಗೌಡ, ಮಂಜುಳ, ಜಯಮ್ಮ, ಪುಟ್ಟಸಿದ್ದನಾಯಕ, ಮೊಹಮ್ಮದ್, ಸುಜಾತ, ಸಿಇಓ ಪಿ.ಪಿ.ಬಸವರಾಜು, ಹಾಲು ಪರೀಕ್ಷಕ ಲೋಕೇಶ್, ಸಹಾಯಕ ನಾಗಸುಂದರ್ ಹಾಗೂ ಮುಖಂಡರಾದ ಮಲ್ಲಪ್ಪ, ಚಾಮನಾಯಕ, ಅಬ್ದುಲ್ ಮುತಾಲೀಫ್, ರೇಣುಕಾ, ಜವರನಾಯಕ, ನಾಗರಾಜು ಭಾಗವಹಿಸಿದ್ದರು.

ರೈತರು ಸಂಘದ ಅಭಿವೃದ್ಧಿಗೆ ಸಹಕರಿಸಿ



ಸಭೆಯನ್ನು ಅಧ್ಯಕ್ಷ ತಗಡೂರು ನಾಯಕ ಉದ್ಘಾಟಿಸಿದರು.

ಮಲ್ಲುಂಡಿ, ಸೆ.26– ರೈತರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಸಹಕಾರ ಸಂಘ ಸಹಕಾರಿಯಾಗಿದೆ ಎಂದು ಸೂರಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ತಗಡೂರು ನಾಯಕ ತಿಳಿಸಿದರು.

ಇಲ್ಲಿಗೆ ಸಮೀಪದ ಸೂರಹಳ್ಳಿ ಪಿಎಸಿಎಸ್ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ತಾವು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಸಹಕಾರ ಬ್ಯಾಂಕ್‌ಗಳು ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿವೆ. ರೈತರು ಹಣವನ್ನು ಒಳ್ಳೆಯ ಉದ್ದೇಶಕ್ಕಾಗಿ ಬಳಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ರೈತರು ಸುಸ್ತಿದಾರರಾಗದೇ ಸಾಲ ಮರುಪಾವತಿಸಿದರೆ ಸಂಘ ಹೆಚ್ಚಿನ ಲಾಭ ಗಳಿಸಲು ಸಾಧ್ಯ ಎಂದರು. ಸಂಘದ ಸಿಇಓ ಎಸ್.ಮಹದೇವಸ್ವಾಮಿ ವಾರ್ಷಿಕ ವರದಿ ಮಂಡಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷೆ ನಾಗರತ್ನ, ನಿರ್ದೇಶಕರಾದ ರಾಜಶೇಖರ, ಸಿದ್ದಪ್ಪ, ಮಾದಪ್ಪ, ಕೆಂಪಣ್ಣ, ನಾಗರಾಜು, ಮಂಜು, ಸಿದ್ದಯ್ಯ, ಇಂದ್ರಾಣಿ ಸೇರಿದಂತೆ ಇತರರಿದ್ದರು.

ಸಮುದಾಯದ ಅಭಿವೃದ್ಧಿಗಾಗಿ ಸಹಕಾರ ಸಂಘ ಸ್ಥಾಪನೆ

ಗಾಣಿಗರ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಶಂಕರ್



ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ಉದ್ಘಾಟಿಸಿದರು.

ನಂಜನಗೂಡು, ಸೆ.26– ತಾಲೂಕಿನಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಗಾಣಿಗ ಸಮುದಾಯದ ಅಭಿವೃದ್ಧಿಗಾಗಿ ಗಾಣಿಗರ ಸೌಹಾರ್ದ ಸಹಕಾರ ಸಂಘ ಸ್ಥಾಪಿಸಲಾಗಿದ್ದು, ಸಮಾಜದವರ ಆರ್ಥಿಕಾಭಿವೃದ್ಧಿಗೆ ಸಹಕಾರ ನೀಡಲು ಬದ್ಧ ಎಂದು ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ತಿಳಿಸಿದರು.

ನಗರದ ಹಾಸನಾಂಬ ಫಂಕ್ಷನ್ ಹಾಲ್‌ನಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ನಿಯಮದಂತೆ 300 ಷೇರುದಾರರಿಂದ 5 ಲಕ್ಷ ಷೇರು ಸಂಗ್ರಹಿಸಬೇಕಾಗಿತ್ತು. ಆದರೆ ಸಮಾಜದ ಬಂಧುಗಳ ಪ್ರೋತ್ಸಾಹದಿಂದ 404 ಷೇರುದಾರರಿದ್ದು, 7.3 ಲಕ್ಷ ಷೇರು ಹಣ ಸಂಗ್ರಹವಾಗಿದೆ. ಆರ್ಥಿಕ ಶಿಸ್ತಿನಿಂದ ಸಂಘ ಲಾಭದ ಹಾದಿಯಲ್ಲಿದ್ದು, ಸಮಾಜದ ಸಣ್ಣ ವ್ಯಾಪಾರಿಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವ ಮೂಲಕ ನೆರವಾಗುತ್ತಿದೆ. ಪಾರದರ್ಶಕವಾಗಿ ಷೇರುದಾರರ ಜೊತೆಗೆ ಸಮಾಜದ ಹಿತಚಿಂತನೆಯನ್ನು ಸಂಘ ಅಳವಡಿಸಿಕೊಂಡಿದೆ ಎಂದರು. ಉಪಾಧ್ಯಕ್ಷ ಎಂ.ಬಿ.ಬಸವಣ್ಣ ಮಾತನಾಡಿ, ಕಳೆದ ವರ್ಷ ಸ್ಥಾಪನೆಗೊಂಡ ಸಂಘ ವರ್ಷದೊಳಗೆ 72 ಲಕ್ಷ ಸಾಲ ನೀಡಿದೆ. ಸಾಲ ಪಡೆದ ಸದಸ್ಯರು ಸಕಾಲಕ್ಕೆ ಮರುಪಾವತಿಬೇಕು. ಸಂಘದಿಂದ ಸಮಾಜದ ನಿರುದ್ಯೋಗ ಸಮಸ್ಯೆ ನಿವಾರಿಸಲು ಅ.12 ರಂದು ಮೈಸೂರಿನಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ ಪ್ರತಿಷ್ಠಿತ 50 ಕಂಪನಿಗಳು ಉದ್ಯೋಗ ಮೇಳದಲ್ಲಿ ಯುವಕರಿಗೆ ಉದ್ಯೋಗಾವಕಾಶ ನೀಡಲಿವೆ. ಇದನ್ನು ಸಮುದಾಯದ ಯುವಕರು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಮಾದಶೆಟ್ಟಿ, ಬಿ.ಸ್ವಾಮಿ, ಎಂ.ಶಿವಣ್ಣ, ಸಿ.ರಾಮಚಂದ್ರ, ಆರ್.ಸಿದ್ದೇಶ್ವರ, ಮಹೇಶ, ಮಹದೇವ, ಮಹದೇವಸ್ವಾಮಿ, ಶಿವಮಹದೇವು, ಕವಿತಾ, ಕೆ.ವಿ.ಅಶ್ವಿನಿ ರವಿ, ಕಾಂತರಾಜು, ಪ್ರಫುಲ್ಲಾ, ಸಿದ್ದರಾಜು, ಬಿ.ಆರ್.ಸಂತೋಷ್ ಉಪಸ್ಥಿತರಿದ್ದರು.

ಮಾದೇಗೌಡನಹುಂಡಿ ಪಿಎಸಿಎಸ್‌ಗೆ 1.91 ಲಕ್ಷ ರೂ. ಲಾಭ



ಸಭೆಯನ್ನು ಸಂಘದ ಅಧ್ಯಕ್ಷ ಅಂಬರೀಶ ಉದ್ಘಾಟಿಸಿದರು.

ತಿ.ನರಸೀಪುರ, ಸೆ.26– ಸದಸ್ಯರ ಸಹಕಾರದಿಂದ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 1,91,374 ರೂ.ಗಳ ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ ಎಂದು ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಅಂಬರೀಶ್ ತಿಳಿಸಿದರು.

ತಾಲೂಕಿನ ಮಾದೇಗೌಡನಹುಂಡಿ ಪಿಎಸಿಎಸ್ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘದಿಂದ ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿ ಮಾಡಿದಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಹಾಗಾಗಿ ಸಾಲ ಬಾಕಿ ಉಳಿಸಿಕೊಳ್ಳದೇ ಸಂಘದ ಬೆಳವಣಿಗೆಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು.

ಸಂಘದ ಸಿಇಓ ಸಿ.ರಾಜೇಶ್ ಸಂಘದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಮಾತನಾಡಿ, ಸಂಘದಿಂದ 397 ರೈತರಿಗೆ 4,73,5000 ರೂ. ಹಾಗೂ 5 ಮಹಿಳಾ ಸ್ವಸಹಾಯ ಸಂಘಗಳಿಗೆ 3850000 ರೂ ಸಾಲ ನೀಡಿದ್ದೇವೆ. ಗೊಬ್ಬರ ಮಾರಾಟದಿಂದ 85,466 ರೂ. ಲಾಭ ಬಂದಿದೆ ಎಂದರು.

ಮೇಲ್ವಿಚಾರಕ ಮಂಜೇಶ್‌ಗೌಡ, ಉಪಾಧ್ಯಕ್ಷೆ ನಾಗಮ್ಮ, ನಿರ್ದೇಶಕರಾದ ಎನ್.ಅನಿಲ್ ಕುಮಾರ್, ಹೆಚ್.ಎನ್.ರಾಜೇಶ್, ಹೆಚ್.ಎನ್.ದೇವರಾಜು, ಸಿ.ನಾಗರಾಜು, ನಾಗೇಂದ್ರ, ಶ್ರೀಗುರು, ವೆಂಕಟೇಶ್, ಶ್ರೀನಿವಾಸ, ನಾಗಮ್ಮ, ರೈತರು, ಷೇರುದಾರರು ಹಾಜರಿದ್ದರು.

ನೆಮ್ಮನಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ನೆಮ್ಮನಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಸರಗೂರು, ಸೆ.26– ಕಾಡಂಚಿನ ಗ್ರಾಮದ ಜನರ ಆರೋಗ್ಯದ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ನೆಮ್ಮನಹಳ್ಳಿ ನಡೆದ ಸಮುದಾಯ ಆಧಾರಿತ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಕಾಡಂಚಿನ ಗ್ರಾಮದ ಜನರ ಆರೋಗ್ಯದ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಸಂತಸದ ವಿಚಾರ. ನಾವು ಇಂದು 2ನೇ ಬಾರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸುತ್ತಿದ್ದೇವೆ. ಶಿಬಿರದಲ್ಲಿ ಕಣ್ಣು, ಮಧುಮೇಹ ಮತ್ತು ರಕ್ತದೊತ್ತಡ, ಕಫ ಪರೀಕ್ಷೆ ಮಾಡಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದ ಅವರು ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕ್ಯಾನ್ಸರ್ ತಪಾಸಣಾ ಶಿಬಿರ ಆಯೋಜಿಸಲಾಗುವುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಗ್ರಾಪಂ ಅಧ್ಯಕ್ಷ ದೇವದಾಸ್, ಆರೋಗ್ಯವೇ ಭಾಗ್ಯ. ಹೀಗಾಗಿ ಪ್ರತಿಯೊಬ್ಬರೂ ಆರೋಗ್ಯ ತಪಾಸಣೆಗೆ ಒಳಗಾಗಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಶಿಬಿರದಲ್ಲಿ 80 ಮಂದಿ ಬಿಪಿ, ಶುಗರ್, 40 ಮಂದಿ ಕಣ್ಣು, 60 ಮಂದಿ ಐಸಿಟಿಸಿ ಪರೀಕ್ಷೆಗೆ ಒಳಪಟ್ಟರು. ಬಿ.ಮಟಕೆರೆ ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ಚಂದ್ರಶೇಖರ್, ಐಸಿಟಿಸಿ ಆಪ್ತ ಸಮಾಲೋಚಕ ರಾಮು, ದಂತ ತಜ್ಞೆ ಡಾ.ಪೂರ್ಣಿಮಾ, ಪಿಡಿಓ ಭಾಗ್ಯ, ಗ್ರಾಪಂ ಸದಸ್ಯರಾದ, ನಾಗೇಂದ್ರ, ನಾಗನಾಯಕ, ಬೊಮ್ಮ, ವೈದ್ಯಾಧಿಕಾರಿ ಡಾ.ಹೇಮಲತಾ, ಆರೋಗ್ಯ ಸಿಬ್ಬಂದಿಗಳಾದ ಶರಣಪ್ಪ, ರವಿರಾಜ್, ನಾಗರಾಜು, ಉಮೇಶ್, ಮಹೇಶ್, ಲೋಲಾಕ್ಷಿ ಆಶಾ ಕಾರ್ಯಕರ್ತೆಯರು ಗ್ರಾಮದ ಮುಖಂಡರು ಹಾಜರಿದ್ದರು.

ಇಂದು ಕೆ.ಆರ್.ನಗರದಲ್ಲಿ ಪತ್ರಿಕಾ ದಿನಾಚರಣೆ

ಕೆ.ಆರ್.ನಗರ, ಸೆ.26– ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದಿಂದ ಸೆ.27ರಂದು ಬೆಳಗ್ಗೆ 11 ಗಂಟೆಗೆ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ವಿನಯ್ ಹಾಗೂ ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್ ಜಂಟಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೂತನ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಅವರನ್ನು ವಿಶೇಷವಾಗಿ ಅಭಿನಂದಿಸಲಾಗುವುದು. ಅಲ್ಲದೇ ಕಳೆದ 4 ದಶಕಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಗರದೂತ ಪತ್ರಿಕೆ ಸಂಪಾದಕ ಕೆ.ಟಿ.ಮಂಜುನಾಥ್ ಹಾಗೂ ರಾಜ್ಯ ಮಟ್ಟದ ಪಿ.ರಾಮಯ್ಯ ಪ್ರಶಸ್ತಿ ಪಡೆದ 'ಮೈಸೂರು ಮಿತ್ರ' ವರದಿಗಾರ ಎಸ್.ಟಿ.ರವಿಕುಮಾರ್, ರಾಜ್ಯಮಟ್ಟದ ಗೊಮ್ಮಟ ಶ್ರೀದತ್ತಿನಿಧಿ ಪ್ರಶಸ್ತಿ ಪುರಸ್ಕೃತ ವಿಜಯವಾಣಿ ಮೈಸೂರು ಆವೃತ್ತಿ ಮುಖ್ಯಸ್ಥ ಎಂ.ಆರ್.ಸತ್ಯನಾರಾಯಣ್, ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ 'ಮೈಸೂರು ಮಿತ್ರ' ಸುದ್ದಿ ಸಂಪಾದಕ ಎ.ಸಿ.ಪ್ರಭಾಕರ್ ಹಾಗೂ ಕಾಸರಗೋಡು ಜಿಲ್ಲೆ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ದತ್ತಿನಿಧಿ ಪ್ರಶಸ್ತಿ ವಿಜೇತ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ವಿಜಯವಾಣಿ ವರದಿಗಾರ ಪುನೀತ್ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದ್ದಾರೆ.

ಪತ್ರಕರ್ತರ ಸಂಘದ ಸದಸ್ಯರ ಮಕ್ಕಳಿಗೆ ಪತ್ರಿಭಾ ಪುರಸ್ಕಾರ ನಡೆಯಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಲಿದ್ದಾರೆ. ಪ್ರಶಸ್ತಿ ಪುರಸ್ಕೃತರನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಅಭಿನಂದಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಂಎಲ್‌ಸಿ ಹೆಚ್.ವಿಶ್ವನಾಥ್, ಪುರಸಭೆ ಅಧ್ಯಕ್ಷ ಶಿವುನಾಯಕ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಗ್ರಾಮಾಂತರ ಉಪಾಧ್ಯಕ್ಷ ಹೆಚ್.ಎಸ್. ವೆಂಕಟಪ್ಪ, ಗ್ರಾಮಾಂತರ ಕಾರ್ಯದರ್ಶಿ ದಾ.ರಾ.ಮಹೇಶ್ ಆಗಮಿಸಲಿದ್ದಾರೆ. ಸಾರ್ವಜನಿಕರು, ವಿವಿಧ ಸಂಘಟನೆಯವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.7ಕ್ಕೆ, ಹೆಚ್.ಡಿ.ಕೋಟೆಯಲ್ಲಿ ಅದ್ಧೂರಿ ವಾಲ್ಮೀಕಿ ಜಯಂತಿ

ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್



ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ಶಾಸಕ ಅನಿಲ್ ಮಾತನಾಡಿದರು.

ಹೆಚ್.ಡಿ.ಕೋಟೆ, ಸೆ.26– ಪಟ್ಟಣದಲ್ಲಿ ಅ.7ರಂದು ವಾಲ್ಮೀಕಿ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯ ಮಹಾತ್ಮ ಗಾಂಧಿ ಸಭಾ ಭವನದಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಹಾಗೂ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಶಾಸಕರು, ಪ್ರಸ್ತುತ ಜಯಂತಿಗಳು ಒಂದು ಸಮಾಜಕಷ್ಟೇ ಸೀಮಿತವಾಗುತ್ತಿವೆ. ಹೀಗಾಗಿ ಮುಂದಿನ ದಿನಗಳಲ್ಲಿ ಹೀಗಾಗದಂತೆ ಎಚ್ಚರ ವಹಿಸಿ ತಾಲೂಕಿನ ಎಲ್ಲಾ ಸಮುದಾಯದ ಮುಖಂಡರು ಹಾಗೂ ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಅದ್ಧೂರಿಯಾಗಿ ವಾಲ್ಮೀಕಿ ಜಯಂತಿ ಆಚರಿಸಲಾಗುವುದು ಎಂದರು.

ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ವಾಲ್ಮೀಕಿ ಭವನದ ಉಳಿದ ಕಾಮಗಾರಿಗಳಾದ ಕಾಂಪೌಂಡ್, ಭವನದ ಸುತ್ತ ಇಂಟರ್‌ಲಾಕ್, ಸುಂದರ ವಿನ್ಯಾಸ ಸೇರಿದಂತೆ ಕಾಮಗಾರಿಗಳಿಗೆ ಅನುದಾನ ಅಗತ್ಯವಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಗತ್ಯವಿರುವ 2 ಕೋಟಿ ಅನುದಾನ ಮಂಜೂರು ಮಾಡಿಸಲಾಗುವುದು ಎಂದು ಭರವಸೆ ನೀಡಿದರು.


ವಾಲ್ಮೀಕಿ ನಿಗಮದಲ್ಲಿ ಆದ ಗೊಂದಲದಿಂದಾಗಿ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿರಲಿಲ್ಲ. ಹೀಗಾಗಿ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಆದರೆ ಸಿಎಂ ಸಿದ್ದರಾಮಯ್ಯನವರು ರಾಜ್ಯದ ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ 70 ಕೋಟಿ ಬಿಡುಗಡೆ ಮಾಡುವ ಭರವಸೆ ನೀಡಿದ್ದು, 2 ಕೋಟಿ ಹಣವನ್ನು ಪಟ್ಟಣದ ವಾಲ್ಮೀಕಿ ಭವನಕ್ಕೆ ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ. 15 ದಿನದೊಳಗೆ ಅನುದಾನ ಬಿಡುಗಡೆಯಾಗಲಿದ್ದು, ಮುಂದಿನ ಮೂರ್ನಾಕು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಕುಲಶಾಸ್ತ್ರ ಅಧ್ಯಯನದ ಮೂಲಕ ಎಸ್‌ಟಿಗೆ ನಾಯಕ ಸಮಾಜವನ್ನು ಸೇರಿಸಲಾಗಿತ್ತು. ಅದೇ ರೀತಿ ಮತ್ತೊಮ್ಮೆ ಕುಲಶಾಸ್ತ್ರ ಅಧ್ಯಯನ ಮಾಡಿ ಮೀಸಲಾತಿ ಹೆಚ್ಚಿಸಲು ಒತ್ತು ನೀಡಲಾಗುವುದು ಎಂದರು. ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮಾತನಾಡಿ, ಎಸ್‌ಟಿಗೆ ಕುರುಬ ಸಮಾಜ ಸೇರಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ 17 ಎಸ್‌ಟಿ ಶಾಸಕರು ಕಾರ್ಯನಿರ್ವಹಿಸಬೇಕು ಎಂದು ಶಾಸಕ ಅನಿಲ್ ಅವರಿಗೆ ಮನವಿ ಮಾಡಿದ ಚಿಕ್ಕಣ್ಣ, ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸಿದ್ದೇ ಆದಲ್ಲಿ ಕುರುಬ ಸಮಾಜದೊಂದಿಗೆ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಲು ಅಸಾಧ್ಯವಾಗಲಿದೆ ಎಂದರು.

ಇದೇ ವೇಳೆ ತಾಲೂಕಿನಾದ್ಯಂತ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಭವನಗಳನ್ನು ಪೂರ್ಣಗೊಳಿಸುವಂತೆ ಸಲಹೆ ನೀಡಿದರು. ಹೆಚ್.ಡಿ.ಕೋಟೆ ತಾಲೂಕು ನಾಯಕ ಸಮಾಜದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ಸರಗೂರು ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಸವರಾಜು, ಮಾಜಿ ಅಧ್ಯಕ್ಷ ಶಂಭುಲಿಂಗನಾಯಕ, ಮುಖಂಡರಾದ ಕ್ಯಾತನಹಳ್ಳಿ ನಾಗರಾಜ್, ಜಯಪ್ರಕಾಶ್ ಚಿಕ್ಕಣ್ಣ, ಶ್ರೀನಿವಾಸ್, ಚಾಕಳ್ಳಿ ಕೃಷ್ಣ, ಅಂಕನಾಯಕ, ನಿಂಗರಾಜು, ರಾಜಣ್ಣ, ಮರಿತಿಮ್ಮ ನಾಯಕ, ನಾಗನಾಯಕ, ಕಾಂತನಾಯಕ, ರಾಜನಾಯಕ, ದೇವನಾಯಕ, ಗಣೇಶ್, ಬೆಟ್ಟನಾಯಕ, ರವಿ, ಸೂರಿ, ನಿಂಗನಾಯಕ, ಚನ್ನನಾಯಕ, ವೇಣು, ಭಾಸ್ಕರ, ವೆಂಕಟಸ್ವಾಮಿ ನಾಯಕ, ಕೃಷ್ಣ, ಮಹೇಶ್ ನಾಯಕ, ಬೆಟ್ಟನಾಯಕ, ಸಿದ್ದನಾಯಕ, ಸೋಮಣ್ಣ, ಬೈರನಾಯಕ, ಸಿದ್ದನಾಯಕ, ಕುಮಾರ, ಮಣಿ, ತಹಸೀಲ್ದಾರ್‌ಗಳಾದ ಶ್ರೀನಿವಾಸ, ಮೋಹನ್ ಕುಮಾರಿ, ಗಿರಿಜನ ವಿಸ್ತರಣಾಧಿಕಾರಿ ಮಹೇಶ್, ಟಿಹೆಚ್‌ಓ ರವಿಕುಮಾರ್, ರಾಜಣ್ಣ, ನಾಗನಾಯಕ ಎಲ್ಲಾ ಸಮುದಾಯದ ಮುಖಂಡರು ಹಾಜರಿದ್ದರು.

ನಿಧನ

ಹೆಚ್.ಡಿ.ವೀರಭದ್ರಪ್ಪ



ಹೊಸೂರು, ಸೆ.26– ಸಾಲಿಗ್ರಾಮ ತಾಲೂಕಿನ ಮಾಯಿಗೌಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷರು, ಹಿರಿಯ ಕಾಂಗ್ರೆಸ್ ಮುಖಂಡ ಹೆಚ್.ಡಿ.ವೀರಭದ್ರಪ್ಪ (88) ಶುಕ್ರವಾರ ನಿಧನರಾದರು. ಮೃತರು ಪತ್ನಿ ಬಸಮ್ಮಣ್ಣಿ, ಮೃತರು ಸರ್ಕಾರಿ ನೌಕರರ ಸಂಘದ ನಿರ್ದೇಶಕ ಶಶಿಧರ್ ಸೇರಿದಂತೆ 6 ಮಂದಿ ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಹಾಡ್ಯದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಮ್ಮ



ಕಂಪಲಾಪುರ, ಸೆ.26– ಇಲ್ಲಿಗೆ ಸಮೀಪದ ಬೋರೆಹೊಸಳ್ಳಿ ಗ್ರಾಮದ ಲೇ. ಹೊನ್ನೇಗೌಡರ ಪತ್ನಿ ಪುಟ್ಟಮ್ಮ(82) ಶುಕ್ರವಾರ ನಿಧನರಾದರು.

ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನ (ಸೆಪ್ಟೆಂಬರ್ 27) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಅರಮನೆ ವೇದಿಕೆ

ಮ. 3.30 : ವಿದ್ವಾನ್ ಜಗದೀಶ್ ಮತ್ತು ತಂಡದಿಂದ ನಾದಸ್ವರ
ಸಂ. 4.00 : ಬೆನಕ ನಾಟ್ಯ ಮಂದಿರ, ಬೆಂಗಳೂರು ಅವರಿಂದ ನೃತ್ಯರೂಪಕ
ಸಂ. 5.00 : ಶ್ರೀಮತಿ ಅನುಷಾ ರಾಘವೇಂದ್ರ ಮತ್ತು ತಂಡದಿಂದ ಭಕ್ತಿ ಸಂಗೀತ ಮತ್ತು ದಾಸವಾಣಿ
ರಾ. 6.00 : ಸಿಂಚನ್ ದೀಕ್ಷಿತ್ ಮತ್ತು ತಂಡದಿಂದ ಭಾವ ಲಹರಿ ಗೀತಗಾಯನ
ರಾ. 7.00 : ಶ್ರೀ ನೀಲಾದ್ರಿ ಕುಮಾರ್ ಮತ್ತು ತಂಡದಿಂದ ಸಿತಾರ್ ಫ್ಯೂಷನ್
ರಾ. 8.30 : ಸ್ಟ್ರಿಂಗ್ಸ್ ಆಫ್ ಸರಿಗಮ ಅವರಿಂದ ವಾದ್ಯ ಸಂಗೀತ

ಕಿರು ರಂಗ ಮಂದಿರ ವೇದಿಕೆ

ಮ. 2.00 : ಶಿವ ನಾಟ್ಯಾಲಯ ಕಲ್ಚರಲ್ ಅಕಾಡೆಮಿ – ಎಂ. ಪೂರ್ಣಿಮಾ ಅವರಿಂದ ಭರತನಾಟ್ಯ
ಮ. 3.00 : ದಿನೇಶ್ ಚಮ್ಮಾಳಿಗೆ ಮತ್ತು ತಂಡದಿಂದ ನಾಟಕ : ಆಳಿದ ಮಹಾಸ್ವಾಮಿಗಳು
ರಾ. 7.00 : ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು – ಎನ್. ಸುಂದರ್‌ರಾಜ್ ಅವರಿಂದ ಕಿರುನಾಟಕ : ಅಭಿರಾಮ್

ಪುರಭವನ ವೇದಿಕೆ

ಬೆ. 10.30 : ರಶ್ಮಿ ರಂಗಭೂಮಿ ಕಲಾವಿದೆ ಅವರಿಂದ ಪೌರಾಣಿಕ ನಾಟಕ : ಗಯ ಚರಿತ್ರೆ, ಕೃಷ್ಣಾರ್ಜುನ ಯುದ್ಧ
ಮ. 3.00 : ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟ್ಯ ಸಂಘ, ಚಿತ್ರದುರ್ಗ– ಸಿ.ಕೆ. ನಳಿನ ಅವರಿಂದ ಸಾಮಾಜಿಕ ನಾಟಕ : ಕಿವುಡ ಮಾಡಿದ ಕಿತಾಪತಿ
ಸಂ. 6.00 : ನೇಪಥ್ಯ ರಂಗ ತಂಡ, ಮಂಜುನಾಥ್ ಬ್ಯಾಟೆ ಅವರಿಂದ ನಾಟಕ : ಸ್ಮಶಾನ ಕುರುಕ್ಷೇತ್ರ

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಹುಲಿಗೆಮ್ಮ ಮತ್ತು ತಂಡ, ವಿಜಯನಗರ ಅವರಿಂದ ಸೋಬಾನೆ ಪದ
ಸಂ. 5.30 : ಡಾ. ಆನಂದಪ್ಪ ಬಿ.ಎಚ್. ಜೋಗಿ ಮತ್ತು ತಂಡ, ಹುಬ್ಬಳ್ಳಿ ಅವರಿಂದ ಕಿನ್ನರಿ ಜೋಗಿ ಪದ
ಸಂ. 6.30 : ಶ್ರೀ ಕರಿಯಮ್ಮ ಸಾಂಸ್ಕೃತಿಕ ಕಲಾ ಸಂಘ, ಧಾರವಾಡ ಅವರಿಂದ ಜಗ್ಗಲಗಿ ಮೇಳ
ರಾ. 7.30 : ಚನ್ನಮಲ್ಲಪ್ಪ ಕರಡಿ ಮತ್ತು ತಂಡ, ಬಾಗಲಕೋಟೆ ಅವರಿಂದ ಕರಡಿ ಮಜಲು
ರಾ. 8.30 : ಕಾಂತರಾಜು ಮತ್ತು ತಂಡದಿಂದ ಜನಪದ ಗಾಯನ

ನಾದಬ್ರಹ್ಮ ಸಂಗೀತಸಭಾ ವೇದಿಕೆ

ಸಂ. 5.00 : ರತ್ನಂ ಮತ್ತು ತಂಡ, ಮೇಲುಕೋಟೆ ಅವರಿಂದ ಸ್ಯಾಕ್ಸೋಫೋನ್ ವಾದನ
ಸಂ. 5.30 : ಸರಸ್ವತಿ ನೃತ್ಯಾಲಯ, ಬೆಂಗಳೂರು ಅವರಿಂದ ಭರತನಾಟ್ಯ
ಸಂ. 6.30 : ನಾರಾಯಣಪ್ಪ ಮಾಡಶಿರವಾರ ಮತ್ತು ತಂಡ, ರಾಯಚೂರು ಅವರಿಂದ ತತ್ವಪದ ಗಾಯನ
ರಾ. 7.30 : ಕುಂದಣ ನಾಗೇಂದ್ರ ಹಾಗೂ ಕು. ಸಾಗರಿ ಸುನಾಗ್ ಮತ್ತು ತಂಡ, ಮೈಸೂರು ಅವರಿಂದ ದಾಸ ದಸರಾ– ದಾಸವಾಣಿ
ರಾ. 8.00 : ರಮಿಂದರ್ ಖುರಾನಾ, ಮುಂಬೈ ಅವರಿಂದ ಒಡಿಸ್ಸಿ ನೃತ್ಯ

ಗಾನಭಾರತಿ ವೇದಿಕೆ

ಸಂ. 5.00 : ಪ್ರಕೃತಿ ಕಲಾ ಸಂಘದಿಂದ ಕೊಡವ ನೃತ್ಯ
ಸಂ. 5.30 : ಶರಾಫ್ ರೇಣುಕಾ ಮತ್ತು ತಂಡ, ವಿಜಯನಗರ ಜಿಲ್ಲೆ ಅವರಿಂದ ಶಾಸ್ತ್ರೀಯ ಸಂಗೀತ
ಸಂ. 6.30 : ಲೋಕೇಶ್ ಹೆಚ್. ಭಜಂತ್ರಿ ಮತ್ತು ತಂಡ, ಧಾರವಾಡ ಅವರಿಂದ ತಬಲಾ ವಾದನ
ರಾ. 7.30 : ಪ್ರಭು ಬಸಪ್ಪ ಕುಂದರಗಿ ಮತ್ತು ತಂಡ, ಧಾರಾವಾಡ ಅವರಿಂದ ತತ್ವಪದ ಗಾಯನ
ರಾ. 8.30 : ವಿನಯ್ ರಂಗಧೋಳ್ ಮತ್ತು ತಂಡದಿಂದ ಸುಗಮ ಸಂಗೀತ

ರಮಾಗೋವಿಂದ ವೇದಿಕೆ

ಸಂ. 4.00 : ಬಸವರಾಜ ಎಚ್.ಬಿ. ಮತ್ತು ತಂಡದಿಂದ ಕೀಲುಕುದುರೆ
ಸಂ. 4.30 : ಗೆಳತಿ ಮಹಿಳಾ ಮಂಡಳಿ, ಮೈಸೂರು – ಡಿ.ಸಿ. ವಿಜಯಲಕ್ಷ್ಮಿ ಅವರಿಂದ ಭಾವಗೀತೆ ಗಾಯನ
ಸಂ. 5.30 : ಕೆ.ವಿ. ಗೀತಾ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂ. 6.30 : ಸ್ಮಿತಾ ಶ್ರೀ ಕಿರಣ್ ಮತ್ತು ತಂಡ, ಮೈಸೂರು ಅವರಿಂದ ತರಂಗಿಣಿ : ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ
ರಾ. 7.30 : ಗ್ರಾಮೀಣ ಕ್ರಿಯಾತ್ಮಕ ರಂಗ ತಂಡ – ಶಿವಕುಮಾರ್ ಬಿ. ತುಮಕೂರು ಅವರಿಂದ ನಾಟಕ : ಸುಯೋಧನ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 5.00 : ಶ್ರೀ ರಾಘವೇಂದ್ರ ನಾದಸ್ವರ ವಾದ್ಯ ವೃಂದ–ಎಂ. ರಮೇಶ್ ಅವರಿಂದ ನಾದಸ್ವರ
ಸಂ. 5.30 : ವಿದುಷಿ ಮೈಥಿಲಿ ಮತ್ತು ತಂಡ, ಬೆಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ಸಂ. 6.30 : ಆರ್. ರಕ್ಷಿತ ಮತ್ತು ತಂಡ, ಬೆಂಗಳೂರು ಅವರಿಂದ ಸಮೂಹ ನೃತ್ಯ
ರಾ. 7.30 : ಭರತನಾಟ್ಯ ವೈಭವ–ಚಾಮುಂಡೇಶ್ವರಿ ದೇವಿ ಕನ್ನಡ ಕಲಾಲಯ ಟ್ರಸ್ಟ್, ಬೆಂಗಳೂರು, ವಿದುಷಿ ಎಲ್. ಪ್ರಿಯಾಂಕ ಅವರಿಂದ ಭರತನಾಟ್ಯ
ರಾ. 8.30 : ಕೇಂದ್ರ ವಿದ್ಯಾ ಫೌಂಡೇಷನ್, ಬೆಂಗಳೂರು ಅವರಿಂದ ಭರತನಾಟ್ಯ

ಜಗನ್ಮೋಹನ ಅರಮನೆ ವೇದಿಕೆ

ಸಂ. 5.00 : ವಿರುಪಣ್ಣ ಕಲ್ಲೂರು ಮತ್ತು ತಂಡ, ಕೊಪ್ಪಳ ಅವರಿಂದ ಜಾನಪದ ಗೀತೆ
ಸಂ. 5.30 : ಕಾರ್ತಿಕ್ ಮತ್ತು ತಂಡ, ಚಾಮರಾಜನಗರ ಅವರಿಂದ ಜಯಹೇ ನಾಲ್ವಡಿ ಗೀತ– ನೃತ್ಯರೂಪಕ
ಸಂ. 6.30 : ರೇವಣ್ಣಸಿದ್ದಯ್ಯ ಮತ್ತು ತಂಡ, ಚಿಂಚೋಳಿ ಅವರಿಂದ ಶಾಸ್ತ್ರೀಯ ಸಂಗೀತ
ರಾ. 7.30 : ನಟರಾಜ ನಾಟ್ಯ ಶಾಲೆ, ನಂಜನಗೂಡು, ರಮ್ಯ ಮತ್ತು ತಂಡದಿಂದ ಭರತನಾಟ್ಯ
ರಾ. 8.30 : ಸ್ವರ ಝೇಂಕಾರ ಸಾಂಸ್ಕೃತಿಕ ಕಲಾ ಟ್ರಸ್ಟ್, ಬಳ್ಳಾರಿ, ಎಚ್. ತಿಪ್ಪೇಸ್ವಾಮಿ ಮತ್ತು ತಂಡದಿಂದ ಬಯಲಾಟ

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 4.15 : ಕಿರಣ್ ಎಸ್. ಮತ್ತು ತಂಡ, ಮೈಸೂರು ಅವರಿಂದ ಕಂಸಾಳೆ
ಸಂ. 4.45 : ಹೊನ್ನಾರು ಜನಪದ ಗಾಯಕರು, ಸ್ವಾಮಿ ಟಿ.ಆರ್. ಮತ್ತು ತಂಡ, ಹಾಸನ ಅವರಿಂದ ಜನಪದ ಗೀತೆ
ಸಂ. 5.30 : ಅರೆಭಾಷೆ ಸಿರಿ ಸಂಸ್ಕೃತಿ ನಾಟ್ಯ ಮಿಲನ ನೃತ್ಯ ಶಾಲೆ, ಇಂದಿರಾವತಿ ಅವರಿಂದ ನೃತ್ಯರೂಪಕ
ಸಂ. 6.30 : ಮಂಜುನಾಥಸ್ವಾಮಿ ಕಲಾವೃಂದ, ಚಿಕ್ಕಮಗಳೂರು, ಬಿ.ಗೀತಾ ಮತ್ತು ತಂಡದಿಂದ ಸುಗಮ ಸಂಗೀತ
ರಾ. 7.30 : ವಿದುಷಿ ವರ್ಷ ರವಿಪ್ರಕಾಶ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾ. 8.30 : ಶಾರದಾ ಸಂಗೀತ ಶಾಲೆ, ಮೈಸೂರು. ಶ್ರುತಿ ಮತ್ತು ತಂಡದಿಂದ ಸುಗಮ ಸಂಗೀತ

ಅಲ್ಯೂಮಿನಿ ಅಸೋಸಿಯೇಷನ್ ಸಭಾ ಭವನ, ಜೆ.ಕೆ. ಮೈದಾನ

ಬೆ. 6.30 : ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ, ಉದ್ಘಾಟನೆ : ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್
ಸಂ. 6.30 : ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ : ರೇಷ್ಮೆ ಸಚಿವ ಕೆ. ವೆಂಕಟೇಶ್

ಪುರಭವನ

ಬೆ. 7.00 : ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ, ಉದ್ಘಾಟನೆ : ರಂಗಭೂಮಿ ಕಲಾವಿದ ಹಾಗೂ ಚಲನಚಿತ್ರ ನಟ ಮಂಡ್ಯ ರಮೇಶ್ ಮತ್ತು ದಂಪತಿ

ಪಿ. ಕಾಳಿಂಗರಾವ್ ಸಭಾಂಗಣ, ವಸ್ತುಪ್ರದರ್ಶನ ಪ್ರಾಧಿಕಾರ

ಬೆ. 9.00 : ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ

ಬಿ.ಎಂ. ಶ್ರೀ ಸಭಾಂಗಣ

ಬೆ. 9.30 : ಶ್ರೀಮತಿ ಜಯಲಕ್ಷ್ಮಿ ಮತ್ತು ತಂಡದಿಂದ ಭಾವ ರಸಮಂಜರಿ ನೂರು ಸ್ವರಗಳ ನಾಡಗೀತೆ : ನಾರಾಯಣಸ್ವಾಮಿ ಮತ್ತು ಶಾಲಾ ಮಕ್ಕಳಿಂದ
ಬೆ. 10.30 : ಪ್ರಬುದ್ಧ ಕವಿಗೋಷ್ಠಿ, ಉದ್ಘಾಟನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಕವಯತ್ರಿ ಡಾ. ಮಲ್ಲಿಕಾಘಂಟಿ, ಮುಖ್ಯ ಅತಿಥಿಗಳು : ಕವಿ ಡಾ. ಪಿ. ಶಿವರಾಜು

ಪಂಜಿನ ಕವಾಯಿತು

ಸಂ. 5.00 : ಏರ್ ಶೋ ಕಾರ್ಯಕ್ರಮ–ಸಾರಂಗ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ

ಉತ್ತನಹಳ್ಳಿ ಬಳಿ ಯುವ ದಸರಾ


ಸುನಿಧಿ

ಸಂ. 6.00 : ಉತ್ತನಹಳ್ಳಿ ರಿಂಗ್ ರಸ್ತೆಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಬಳಿ ಯುವ ದಸರಾ: ಸುನಿಧಿ ಚೌಹಾಣ್ ಅವರಿಂದ ಸಂಗೀತ ಸಂಜೆ

ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ

ಸಂ. 4.30 : ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರಾದಾಯಿಕ ಚಿತ್ರಕಲೆ ಪ್ರದರ್ಶನ, ಶ್ರೀಮತಿ ಅರ್ಚನಾ ಮತ್ತು ತಂಡದಿಂದ ಚಂಡೆವಾದನ, ಶ್ರೀಮತಿ ಸುನೀತಾ ವೀರೇಶ್ ಮತ್ತು ತಂಡ, ಮೈಸೂರು ಅವರಿಂದ ವಚನ ಸಂಗಿತ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ.

ಕರ್ನಾಟಕ ಕಲಾ ಮಂದಿರ

ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ.

ರಂಗಾಯಣದ ಭೂಮಿಗೀತ

ಸಂ. 7.00 : ರಂಗ ಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಶಾಂತಿ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮಳವಳ್ಳಿ ವಿದ್ಯಾರ್ಥಿಗಳಿಂದ ಕಲ್ಯಾಣದ ಬಾಗಿಲು ನಾಟಕ ಪ್ರದರ್ಶನ, ರಚನೆ : ಡಾ. ಎಸ್. ನಟರಾಜು ಬೂದಾಳ್, ನಿರ್ದೇಶನ : ಮಧು ಮಳ್ಳವಳ್ಳಿ,

ವನರಂಗ

ಸಂ. 5.30 : ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ ಲಂಬಾಡಿ/ಮಾತುರಿ, ತೆಲಂಗಾಣ; ಲಾವಣಿ, ಹೋಲಿ– ಮಹಾರಾಷ್ಟ್ರ; ಸಿದ್ದಿ ಢುಮಾಲ್–ಗುಜರಾತ್; ಸಂಬಲ್‌ಪುರಿ– ಒರಿಸ್ಸಾ; ತಿರುವತ್ತಿರಕಳಿ ಮತ್ತು ಒಪ್ಪಾನ–ಕೇರಳ; ಬಿಹು, ಗುಸಾನ್–ಅಸ್ಸಾಂ; ನೋರ್ತಾ ಮತ್ತು ಸೈತಾಮ್–ಮಧ್ಯಪ್ರದೇಶ್; ರಥ್ವ–ಗುಜರಾತ್; ತಪ್ಪಾಟ್ಟಗುಳು–ಆಂಧ್ರ ಪ್ರದೇಶ, ಕರಗಂ, ಕಾವಾಡಿ, ತಪ್ಪಟ್ಟಮ್–ತಮಿಳುನಾಡು

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9	ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30	ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9	ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7	ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10 ರಿಂದ 5	ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8	ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ	ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ

ವೀಲ್‌ಚೇರ್ ಕ್ರಿಕೆಟ್ ಪಂದ್ಯಾವಳಿ

ಬೆಂಗಳೂರು ತಂಡಕ್ಕೆ ದಸರಾ ಕಪ್




ಮೈಸೂರಿನ ವಿಜಯನಗರದಲ್ಲಿರುವ ಮುಡಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ವೀಲ್ ಚೇರ್ ಕ್ರಿಕೆಟ್ ಪಂದ್ಯಾವಳಿ ದಸರಾ ಕಪ್‌ನಲ್ಲಿ ಬೆಂಗಳೂರು ತಂಡ 33 ರನ್‌ಗಳೊಂದಿಗೆ ದಸರಾ ಕಪ್ ತನ್ನದಾಗಿಸಿಕೊಂಡಿತ್ತು. ಮತ್ತೊಂದು ಚಿತ್ರದಲ್ಲಿ ದಸರಾ ಕಪ್‌ಗಾಗಿ ವೀಲ್ ಚೇರ್‌ನಲ್ಲಿ ಸೆಣಸಾಟ ನಡೆಸುತ್ತಿರುವುದು.

ಮೈಸೂರು,ಸೆ.26(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಮುಡಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ವೀಲ್ ಚೇರ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಂಗಳೂರು ತಂಡ 33 ರನ್‌ಗಳ ಗೆಲುವಿನೊಂದಿಗೆ ದಸರಾ ಕಪ್ ತನ್ನದಾಗಿಸಿಕೊಂಡಿತು.

ಕರ್ನಾಟಕ ವೀಲ್ ಚೇರ್ ಕ್ರಿಕೆಟ್ ಅಸೋಸಿಯೇಷನ್, ಸುರಕ್ಷಾ ಫೌಂಡೇಷನ್, ನೇಸರ ಸ್ವಯಂ ಸೇವಾ ಸಂಸ್ಥೆ, ಅಭ್ಯುದಯ ಸೇವಾ ಸಂಸ್ಥೆ, ರೋಟರಿ ಜಯಪ್ರಕಾಶ್ ನಗರ ಸಹಯೋಗದೊಂದಿಗೆ ಆಯೋಜಿಸಿದ್ದ ವೀಲ್ ಚೇರ್ ಕ್ರಿಕೆಟ್ ಪಂದ್ಯಾವಳಿಗೆ ಅಭ್ಯುದಯ ಸೇವಾ ಸಂಸ್ಥೆ ಅಧ್ಯಕ್ಷ ವೇದಾ ಜಗದೀಶ್ ಚಾಲನೆ ನೀಡಿದರು.

ದಸರಾ ಕಪ್‌ಗಾಗಿ ಮೈಸೂರು, ಬೆಂಗಳೂರು, ಬಾಗಲಕೋಟೆ ಮತ್ತು ತುಮಕೂರು ತಂಡಗಳು ಸೆಣಸಾಟ ನಡೆಸಿದವು. 12 ಓವರ್‌ಗಳ ನಾಕೌಟ್ ಪಂದ್ಯಾವಳಿಯಲ್ಲಿ ಮೈಸೂರು, ಬಾಗಲಕೋಟೆ ತಂಡಗಳು ಸೋತು, ಫೈನಲ್ ಪಂದ್ಯದಿಂದ ಹೊರಗುಳಿದವು. ನಂತರ ನಡೆದ ಫೈನಲ್ ಪಂದ್ಯದಲ್ಲಿ ತುಮಕೂರು ಮತ್ತು ಬೆಂಗಳೂರು ತಂಡ ದಸರಾ ಕಪ್‌ಗಾಗಿ ರೋಚಕ ಹಣಾಹಣಿ ನಡೆಸಿತ್ತು.

ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ತಂಡ 12 ಓವರ್‌ಗೆ 91 ರನ್ ಕಲೆ ಹಾಕಿತ್ತು. ನಂತರ ಬ್ಯಾಟಿಂಗ್ ಆರಂಭಿಸಿದ ತುಮಕೂರು ತಂಡ 12 ಓವರ್‌ಗೆ 5 ವಿಕೆಟ್ ನಷ್ಟಕ್ಕೆ 55 ರನ್‌ಗಳಿಸಿತ್ತು. 33 ರನ್‌ಗಳಿಂದ ಜಯಗಳಿಸಿದ ಬೆಂಗಳೂರು ತಂಡ ದಸರಾ ಕಪ್ ತನ್ನದಾಗಿಸಿಕೊಂಡಿತ್ತು.

ದಸರಾ ಕಪ್ ಗೆದ್ದ ಬೆಂಗಳೂರು ತಂಡ, ರನ್ನರ್ ಅಪ್ ತಂಡ ತುಮಕೂರಿಗೆ ಡಾ.ಲಯನ್ ಎಸ್.ವೆಂಕಟೇಶ್, ರೋಟರಿ ಜಯಪ್ರಕಾಶ ನಗರದ ಅಧ್ಯಕ್ಷ ಪಿ.ರವಿ ಶಂಕರ್ ಟ್ರೋಫಿ ವಿತರಿಸಿದರು. ಈ ವೇಳೆ ಕರ್ನಾಟಕ ರಾಜ್ಯ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಜಿ.ಸಿ.ವೀರರಾಜೇ ಅರಸ್, ಕರ್ನಾಟಕ ವೀಲ್ ಚೇರ್ ಕ್ರಿಕೆಟ್ ಅಸೋಸಿಯೇಷನ್ ಕೋಚ್ ಸಿದ್ಧರಾಜೇ ಅರಸ್, ಪ್ರಮಥ ಪ್ರಿಂಟರ್ಸ್ ಡಿ.ಮಂಜು ನಾಥ್, ಪರಿಶ್ರಮ ಸ್ಪೋರ್ಟ್ಸ್ ಅಕಾಡೆಮಿಯ ಮಂಜುನಾಥ್, ಅಂತರ ರಾಷ್ಟ್ರೀಯ ಕ್ರೀಡಾಪಟು ಸಿದ್ದಾರೂಢ, ಪ್ರವೀಣ್ ಸಕ್ಷಮ ಉಪಸ್ಥಿತರಿದ್ದರು.

ಯುವ ಸಬಲೀಕರಣ, ಕ್ರೀಡಾ ಇಲಾಖೆಯಿಂದ ನಿರ್ಲಕ್ಷ್ಯ

ಪ್ರತಿ ವರ್ಷ ದಸರಾ ಸಂದರ್ಭದಲ್ಲಿ ವೀಲ್ ಚೇರ್ ಕ್ರಿಕೆಟ್ ಪಂದ್ಯಾವಳಿಗೆ ಅವಕಾಶ ಕಲ್ಪಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮನವಿ ಸಲ್ಲಿಸಲಾಗುತ್ತಿದೆ. ಆದರೆ, ಎಲ್ಲರೂ ನಮ್ಮನ್ನು ಕಡೆಗಣಿಸುತ್ತಿದ್ದಾರೆ ಎಂದು ಕರ್ನಾಟಕ ವೀಲ್ ಚೇರ್ ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಎಂ.ಪ್ರಭುಸ್ವಾಮಿ ಆರೋಪಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಡೆಗಣಿಸಿರುವುದರಿಂದ ಅಸೋಸಿಯೇಷನ್ ವತಿಯಿಂದ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಅಚ್ಚುಕಟ್ಟಾಗಿ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತಿದೆ. ಪುರುಷರು ಮಾತ್ರವಲ್ಲದೇ ಮಹಿಳೆಯರ ತಂಡವು ಇದ್ದು, ಮುಂದಿನ ವರ್ಷ ಅವರಿಗೆ ಅವಕಾಶ ನೀಡಲಾಗುತ್ತದೆ ಎಂದರು.

ಕಡಿಮೆ ಖರ್ಚು ಅಧಿಕ ಲಾಭ ಪಡೆವ ಬೆಳೆಗಳ ಬೆಳೆಯಿರಿ; ರೈತರಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಕಿವಿಮಾತು



ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಶುಕ್ರವಾರ ನಡೆದ ರೈತ ದಸರಾ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ26(ಎಂಟಿವೈ)– ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣ ಬಳಸಿ, ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ಪಡೆಯುವ ಬೆಳೆ ಬೆಳೆದು ಆರ್ಥಿಕವಾಗಿ ರೈತರು ಸಧೃಡರಾಗಬೇಕು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಶುಕ್ರವಾರ ರೈತ ದಸರಾ ಕಾರ್ಯಕ್ರಮವನ್ನು ಭತ್ತ ಕುಟ್ಟಿ, ತೆಂಗಿನ ಹೊಂಬಾಳೆ ಅರಳಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ರೈತರು ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ ಮಾಡುವ, ಹೊಸ ಪದ್ಧತಿಯನ್ನು ಅನುಸರಿಸುವ ಮೂಲಕ ಲಾಭ ಮಾಡಿಕೊಳ್ಳುವತ್ತ ಗಮನ ಹರಿಸಬೇಕು. ಈಗಾಗಲೇ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಹಲವು ರೈತರು ಸಾಧನೆ ಮಾಡುತ್ತಿರುವ ಉದಾಹರಣೆ ನಮ್ಮ ಮುಂದೆ ಇದೆ. ಹಾಗಾಗಿ ರೈತರು ಹೊಸ ತಂತ್ರಜ್ಞಾನ, ಹೊಸ ಉಪಕರಣಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರ ರೈತರಿಗೆ ಅವಶ್ಯವಿರುವ ಸೌಲಭ್ಯ ಮತ್ತು ಮಾರ್ಗದರ್ಶನ ನೀಡುತ್ತಿದೆ ಎಂದರು.

ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ರೈತರಿಗೆ ಕಬ್ಬು ಕಟಾವು ಮಾಡುವ ಯಂತ್ರಕ್ಕೆ ಶೇ.50ರಷ್ಟು ಸಬ್ಸಿಡಿ ಕಲ್ಪಿಸಿದೆ. ಯಂತ್ರೋಪಕರಣ ಸಬ್ಸಿಡಿಗೆಂದೇ ಸರ್ಕಾರ ಒಂದು ಸಾವಿರಕ್ಕೂ ಹೆಚ್ಚು ಕೋಟಿ ಮೀಸಲಿಟ್ಟಿದೆ. ಇದುವರೆಗೂ ಸುಮಾರು 334 ಫಲಾನುಭವಿಗಳು ಇದರ ಸೌಲಭ್ಯ ಪಡೆದುಕೊಂಡಿದ್ದಾರೆ. ಸರ್ಕಾರದ ಯೋಜನೆಗಳು ಅದರಲ್ಲೂ ರೈತರಿಗೆ ಅನುಕೂಲವಾಗುವಂತಹ ಸಬ್ಸಿಡಿ ಕುರಿತಾಗಿ ವಿಶ್ವವಿದ್ಯಾನಿಲಯಗಳು ರೈತರಿಗೆ ಕಾಲ ಕಾಲಕ್ಕೆ ಮಾಹಿತಿ ನೀಡುವ ಮೂಲಕ ಅರಿವು ಮೂಡಿಸಬೇಕು ಎಂದು ಮನವಿ ಮಾಡಿದರು.

ರೈತರಿಗೆ ಸಾಲ ಮನ್ನಾಕ್ಕಿಂತ ಪಂಚ ಗ್ಯಾರಂಟಿ ಯೋಜನೆಯಿಂದ ಹೆಚ್ಚು ಅನುಕೂಲವಾಗಿದೆ. ಕೆಲವರು ಸಾಲ ಮನ್ನಾಕ್ಕೂ ಮನವಿ ಮಾಡುತ್ತಿದ್ದಾರೆ. ಇದರಿಂದ ಕೆಲವೇ ಕುಟುಂಬಗಳಿಗೆ ಅನುಕೂಲವಾಗಲಿದೆ. ಆದರೆ, ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಎಲ್ಲಾ ವರ್ಗದ ಜನರಿಗೂ ಅನುಕೂಲವಾಗುತ್ತಿದೆ. ಇದುವರೆಗೆ 90 ಸಾವಿರ ಕೋಟಿ ಹಣ ಗ್ಯಾರಂಟಿ ಯೋಜನೆಗೆ ವ್ಯಯವಾಗಿದೆ. 5 ವರ್ಷದಲ್ಲಿ 3 ಲಕ್ಷ ಕೋಟಿ ರೂ. ಖರ್ಚಾಗಲಿದ್ದು, ಇದಕ್ಕಿಂತ ಒಳ್ಳೆಯ ಯೋಜನೆ ಬೇಕೆ. ಸಾಲ ಮನ್ನಾಕ್ಕಿಂತ ಪಂಚ ಗ್ಯಾರಂಟಿ ಅನುಕೂಲ ಹೆಚ್ಚಲ್ಲವೇ ಎಂದು ರೈತರನ್ನೇ ಪ್ರಶ್ನಿಸಿದರು.

ಸಾಧಕ ರೈತರಿಗೆ ಸನ್ಮಾನ: ಈ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮೈಸೂರು ತಾಲೂಕಿನ ವರಕೋಡು ಗ್ರಾಮದ ಮುದ್ದರಾಮೇಗೌಡ, ಹಾರೋಹಳ್ಳಿಯ ಮಹೇಶ್, ಟಿ.ಕಾಟೂರಿನ ಮರಂಕಯ್ಯ, ಹಳೇ ಪುರದ ಎಚ್.ಎಸ್. ಮಹದೇವಯ್ಯ, ಬೆಟ್ಟದಪುರದ ರವಿ, ಮೇಗಳಾಪುರದ ಮಂಜುಳಾ, ದಾಸನಪುರದ ಮಹೇಂದ್ರ, ಕೆ.ಆರ್. ನಗರದ ಶಿವರಾಮೇಗೌಡ, ತಿ.ನರಸೀಪುರದ ದೀಪಿಕಾ ಕಿರಣ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕ ಕೆ.ಹರೀಶ್‌ಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ದಸರಾ ಉಪ ಸಮಿತಿ ವಿಶೇಷಾಧಿಕಾರಿಯವರಾದ ಭೀಮಪ್ಪ ಕೆ. ಲಾಳಿ, ಕಾರ್ಯಾಧ್ಯಕ್ಷ ಕೆ.ಹೆಚ್. ರವಿ, ರೈತ ದಸರಾ ಉಪಸಮಿತಿ ಅಧ್ಯಕ್ಷ ಕೆ.ಪಿ. ಯೋಗೇಶ್, ಉಪಾಧ್ಯಕ್ಷರಾದ ಹರೀಶ್ ಮೊಗಣ್ಣ, ಗೋವಿಂದ ಶೆಟ್ಟಿ, ಶ್ರೀನಿವಾಸ್, ರಘು, ಕೆ.ಎಸ್.ಕೃಷ್ಣಮೂರ್ತಿ, ಉಪ ಕೃಷಿ ನಿರ್ದೇಶಕರಾದ ಡಾ.ಬಿ.ಎನ್. ಧನಂಜಯ, ಉಪ ಸಮಿತಿಯ ಸದಸ್ಯರು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮಹಿಷಾ ದಸರಾ ಆಚರಣೆಗೆ ಅವಕಾಶ ನೀಡದ ಹಿನ್ನೆಲೆಯಲ್ಲಿ

ಜಂಬೂಸವಾರಿಗೆ ಅಡ್ಡಿಪಡಿಸಲು ನಿರ್ಧಾರ

ಮಹಿಷ ದಸರಾ ಸಮಿತಿಯಿಂದ ಮೈಸೂರಿನ ಎಂಟು ದಿಕ್ಕುಗಳಲ್ಲಿ ಕಪ್ಪು ಬಾವುಟ ಪ್ರದರ್ಶನ


ಪುರುಷೋತ್ತಮ್

ಮೈಸೂರು,ಸೆ.26(ಜಿಎ)– ಜಂಬೂ ಸವಾರಿ ದಿನದಂದು ಮಹಿಷ ದಸರಾ ಸಮಿತಿ ವತಿಯಿಂದ ಮೈಸೂರು ನಗರದ ಎಂಟು ದಿಕ್ಕುಗಳಲ್ಲೂ ಕಪ್ಪು ಬಾವುಟ ಪ್ರದರ್ಶಿಸುವ ಮೂಲಕ ನಾಡ ಹಬ್ಬ ದಸರಾ ಜಂಬೂಸವಾರಿ ಅಡ್ಡಿಪಡಿಸಲು ನಿರ್ಧರಿಸಿರುವುದಾಗಿ ಮಹಿಷಾ ದಸರಾ ಸಮಿತಿ ಅಧ್ಯಕ್ಷರಾದ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.24ರಂದು ಮಹಿಷಾ ಮಂಡಲೋತ್ಸವ ಆಯೋಜಿಸಿದ್ದ ಸಮಯದಲ್ಲಿ ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರನ ಪ್ರತಿಮೆಗೆ ಮಾಲಾರ್ಪಣೆ, ಪುಷ್ಪಾರ್ಚನೆ ಮಾಡಲು ತೆರಳಿದ್ದಾಗ ನಮ್ಮನ್ನು ಚಾಮುಂಡಿ ಬೆಟ್ಟದ ತಪ್ಪಲಿನ ತಾವರೆಕಟ್ಟೆ ಬಳಿ ಒಂದು ಗಂಟೆಗೂ ಹೆಚ್ಚು ಕಾಲ ತಡೆದಿದ್ದಾರೆ ಮತ್ತು ವಿನಾಕಾರಣ 144ನೇ ಸೆಕ್ಷನ್ ಜಾರಿ ಮಾಡಿ ತಡೆಯುಂಟು ಮಾಡುವ ಮೂಲಕ ನಮ್ಮ ಸಂವಿಧಾನ ಹಕ್ಕು ಧಾರ್ಮಿಕ ಹಕ್ಕಿಗೆ ಚ್ಯುತಿ ತಂದಿದ್ದಾರೆ ಎಂದರು.

ಯಾವುದೇ ಗಲಾಟೆ, ಗೊಂದಲಗಳು ನಡೆಯುತ್ತಿರಲಿಲ್ಲ ಅಂತಹ ಸನ್ನಿವೇಶ ಬಂದಿಲ್ಲದಿದ್ದರೂ ಸಹ ಪೊಲೀಸ್ ಇಲಾಖೆ, ಹಾಗೂ ಜಿಲ್ಲಾಡಳಿತ, ಸ್ವತಃ ತಾವೇ ನಿರ್ಧಾರ ಕೈಗೊಂಡು ಬೇಕಂತಲೇ ಚಾಮುಂಡಿ ಬೆಟ್ಟದಲ್ಲಿ 144ನೇ ಸೆಕ್ಷನ್ ಜಾರಿ ಮಾಡುವ ಮೂಲಕ ದಸರಾ ಹಬ್ಬಕ್ಕೆ ಅಗೌರವ ಸೂಚಿಸಿದ್ದಾರೆ ಎಂದು ಆರೋಪಿಸಿದರು.

ಯಾವ ಕಾರಣಕ್ಕಾಗಿ ಅಂದು 144ನೇ ಸೆಕ್ಷನ್ ಜಾರಿ ಮಾಡಿದ್ದೀರಿ ಎಂದು ಕಾರಣ ಕೇಳಿ ಜಿಲ್ಲಾಧಿಕಾರಿಗಳು, ನಗರದ ಪೊಲೀಸ್ ಆಯುಕ್ತರು, ಮತ್ತು ಸಂಬಂಧಿಸಿದ ಇತರ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು ಕೂಡ ಇದುವರೆಗೂ ಅವರುಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ, ಇನ್ನು ಎರಡು ದಿನಗಳ ಒಳಗೆ ಉತ್ತರ ಬಾರದಿದ್ದಲ್ಲಿ, ದಸರಾ ಜಂಬೂಸವಾರಿಗೆ ಅಡ್ಡಿಪಡಿಸಿ, ಕಪ್ಪು ಬಾವುಟ ಪ್ರದರ್ಶಿಸುತ್ತೇವೆ ಮತ್ತು ಜಂಬೂಸವಾರಿ ದಿನ ಮೈಸೂರಿನ ನಗರದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿರುತ್ತದೆ. ಆದ್ದರಿಂದ ದೇಶ, ವಿದೇಶದ, ಇತರೆ ರಾಜ್ಯಗಳಿಂದ ಯಾವುದೇ ಪ್ರವಾಸಿಗರು ಸಾರ್ವಜನಿಕರು ಬರಬಾರದೆಂದು ಜಾಗೃತಿ ಮೂಡಿಸುತ್ತೇವೆ ಎಂದು ಎಚ್ಚರಿಸಿದರು.

ಮಹಿಷಾಸುರನಿಗೆ ಪುಷ್ಪಾರ್ಚನೆ ಮಾಡಲು ಅವರು ನಮಗೆ ಅಡ್ಡಿಪಡಿಸಿದ ಹಾಗೆ ನಾವುಗಳು ಸಹ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಮೈಸೂರು ದಸರಾ ಜಂಬೂಸವಾರಿಗೆ ಅಡ್ಡಿ ಪಡಿಸುತ್ತೇವೆ. ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಎಂಟು ದಿಕ್ಕುಗಳಲ್ಲೂ ಅಂದು ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ. ಸಾಧ್ಯವಾದಲ್ಲಿ ಅಂದು ಬಂದ್‌ಗೆ ಕರೆ ನೀಡುತ್ತೇವೆ ಎಂದರು.

ನಾವು ಯಾವುದೇ ಧಾರ್ಮಿಕ ಹಕ್ಕು, ವಿಧಾನಗಳಿಗೆ ವಿರೋಧಿ ಅಲ್ಲ. ದಸರಾ ಹಬ್ಬಕ್ಕೆ ನಾವು ಅಡ್ಡಿಪಡಿಸುವವರಲ್ಲ. ಆದರೆ ನಮ್ಮ ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ತಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರು ನೀಡುತ್ತೇವೆ. ನಿಷೇಧ ಜಾರಿಗೆ ತಂದ ಬಗ್ಗೆ ಕಾರಣ ನೀಡದಿದ್ದಲ್ಲಿ ಕೋರ್ಟ್ ಮೊರೆ ಹೋಗುತ್ತೇವೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿದ್ದು ಸ್ವಾಮಿ, ಪುಟ್ಟರಾಜು, ಸೋಮಯ್ಯ ಮಲೆಯೂರು, ಧನುಷ್, ರವಿಕುಮಾರ್, ವಿಶ್ವಮಿತ್ತಿರರು ಉಪಸ್ಥಿತರಿದ್ದರು.